ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಕೊಲಂಬೋದಲ್ಲಿ ಶ್ರೀಲಂಕಾ ವಿರುದ್ಧ ನಡೆಯುತ್ತಿರುವ 2ನೇ ಟೆಸ್ಟ್ ಪಂದ್ಯದ 2ನೇ ಇನ್ನಿಂಗ್ಸ್‌ನಲ್ಲಿ ಭಾರತದ ರವೀಂದ್ರ ಜಡೇಜಾ ಅವರು ಬೌಲಿಂಗ್ ಮಾಡುತ್ತಿರುವ ದೃಶ್ಯ...

27 ಆಗಸ್ಟ್, 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -165 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಮೆದುಳು ತನ್ನನ್ನೇ ಅರ್ಥಮಾಡಿಕೊಳ್ಳುವ 7 ವರ್ಷಗಳ ಪ್ರಯತ್ನ » 2


ನನ್ನಿಂದಲೇ ಪರಮೇಶ್ವರ್ ಡಿಸಿಎಂ » 3


ಉತ್ತರ ನೇಪಾಳದಲ್ಲಿ ಪ್ರವಾಹ » 4

# ರೈತರ ಸಂಕಷ್ಟಕ್ಕೆ ಕೇಂದ್ರ ಧಾವಿಸಲಿ

## ಬೆಳೆ ವಿಮೆ ನೀಡದಿದ್ದರೆ ಸುಪ್ರೀಂ ಮೊರೆ | ಸಚಿವ ಕೆ.ಎಂ.ಶಿವಲಿಂಗೇಗೌಡ ಎಚ್ಚರಿಕೆ

• ಪ್ರಜೋದಯ ವರದಿ

**ಹಾಸನ:** ಒಕ್ಕೂಟ ವ್ಯವಸ್ಥೆಯಲ್ಲಿ ರೈತರು ಸಂಕಷ್ಟಕ್ಕೆ ಸಿಲುಕಿದಾಗ ಕೇಂದ್ರ ಸರ್ಕಾರ ನೆರವಿಗೆ ಧಾವಿಸಬೇಕು. ರೈತರಿಗೆ ಬೆಳೆ ವಿಮೆ ನೀಡದಿದ್ದರೆ ಸುಪ್ರೀಂಕೋರ್ಟ್ ಮೊರೆ ಹೋಗುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ನಡೆದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲೆಯಲ್ಲಿ ಬರ, ಬೆಳೆ ನಷ್ಟ ಹಾಗು ಮೆಕ್ಕೆಜೋಳ ಬಿಳಿಸುಳಿ ರೋಗಕ್ಕೆ ತುತ್ತಾದ ಹಿನ್ನಲೆ ಪರಿಹಾರ ನೀಡಲು ದೊಡ್ಡ ಮೊತ್ತದ ಹಣ ಅಗತ್ಯವಿದ್ದು, ಜಿಲ್ಲೆಯಲ್ಲಿ ಕೇವಲ ಶೇ.38 ರಷ್ಟು ಬಿತ್ತನೆಯಾಗಿದ್ದರೂ, 70 ಸಾವಿರ ಹೆಕ್ಟೇರ್ ಪ್ರದೇಶದ ಮೆಕ್ಕೆ ಜೋಳ ನಾಶವಾಗಿದೆ. ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಕೇಂದ್ರ-ರಾಜ್ಯ ಸರ್ಕಾರಗಳ ಗಮನ ಸೆಳೆಯಲಾಗುವುದು. ಜಿಲ್ಲೆಯ ಬರ ಪರಿಸ್ಥಿತಿ ಹಾಗು ಬೆಳೆ ಹಾನಿ ಕುರಿತು ಅಧ್ಯಯನ ನಡೆಸಿ ಮುಖ್ಯಮಂತ್ರಿಗೆ ವರದಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.



ಜಿಲ್ಲಾಧಿಕಾರಿಗೆ ಆತ್ಮಸ್ಥೈರ್ಯ ತುಂಬುವುದು ಜಿಲ್ಲಾ ಉಸ್ತುವಾರಿ ಸಚಿವನಾಗಿ ನನ್ನ ಕರ್ತವ್ಯ. ನಾನು ಅವರ ಪರ ನಿಲ್ಲುತ್ತೇನೆ. ಜಿಲ್ಲಾಧಿಕಾರಿ ತಪ್ಪು ಮಾಡಿದ್ದರೆ ಕಾನೂನು ಕ್ರಮವಾಗುತ್ತದೆ. ಅದನ್ನು ಬಿಟ್ಟು ವೈಯಕ್ತಿಕವಾಗಿ ಆರೋಪ ಮಾಡುವುದು ಸರಿಯಲ್ಲ.

-ಕೆ.ಎಂ.ಶಿವಲಿಂಗೇಗೌಡ, ಜಿಲ್ಲಾ ಉಸ್ತುವಾರಿ ಸಚಿವ

ರೈತರ ಸಂಕಷ್ಟವನ್ನು ಮುಖ್ಯಮಂತ್ರಿ ಗಮನಕ್ಕೆ ತರಲಾಗಿದ್ದು, ಈ ಬಗ್ಗೆ ಆತಂಕ ವ್ಯಕ್ತಪಡಿಸಿದ ಮುಖ್ಯಮಂತ್ರಿಯವರು ಪ್ರತ್ಯೇಕ ಚರ್ಚೆ ನಡೆಸುವುದಾಗಿ ತಿಳಿಸಿದ್ದಾರೆ. ರೈತರಿಗೆ ಅಗತ್ಯ ನೆರವು ಒದಗಿಸುವ ನಿಟ್ಟಿನಲ್ಲಿ ಅಧಿವೇಶನದಲ್ಲಿ ಚರ್ಚೆ ನಡೆಸಲು ಸಿದ್ಧರಾಗಿದ್ದವು. ಆದರೆ, ಕಲಾಪ ಸರಿಯಾಗಿ ನಡೆಯದೆ, ಚರ್ಚಿಸಲು ಸಾಧ್ಯವಾಗಲಿಲ್ಲವೆಂದು ವಿಷಾದಿಸಿದರು.

ಜಿಲ್ಲೆಗೆ ಸಂಬಂಧಿಸಿದ ಐಐಟಿ ಮಂಜೂರು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣ ಮೊದಲಾದ ಕಾಮಗಾರಿ ಕುಂಟುತ್ತಾ ಸಾಗುತ್ತಿದ್ದು, ಯೋಜನೆಗಳನ್ನು ಆದ್ಯತೆ ಮೇರೆಗೆ ಅನುದಾನ ನೀಡುವಂತೆ ಮುಖ್ಯಮಂತ್ರಿ ಅವರಲ್ಲಿ ಮನವಿ ಮಾಡಲಾಗಿದ್ದು, ಉತ್ತಮ ಸ್ಪಂದನೆ ದೊರೆತಿದೆ ಎಂದರು.

**ಆರೋಪ ಬಂದ ಮಾತ್ರಕ್ಕೆ ಅಪರಾಧಿಯಲ್ಲ**

ಸಚಿವ ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಕೈಗೊಂಡಿರುವ ಪಾದಯಾತ್ರೆ ಕುರಿತು ಪ್ರತಿಕ್ರಿಯಿಸಿದ ಅವರು, ಆರೋಪ ಬಂದ ಮಾತ್ರಕ್ಕೆ ಯಾರನ್ನೂ ಅಪರಾಧಿ ಎಂದು ಪರಿಗಣಿಸಲು ಸಾಧ್ಯವಿಲ್ಲ. ತನಿಖಾ ಸಂಸ್ಥೆ ತಪ್ಪಿತಸ್ಥ ಎಂದು ವರದಿ ನೀಡಬೇಕಲ್ಲವೇ ಎಂದು ಪ್ರಶ್ನಿಸಿದ ಅವರು, ಇಡಿ, ಸಿಬಿಐ ತನಿಖೆ ನಡೆಸಿ,

» ನಾಲ್ಕನೇ ಪುಟದಲ್ಲಿ

### ಕಾನೂನು ಮೀರಿದರೆ ಪರವಾನಗಿ ರದ್ದು

ನಿಯಮ ಮೀರಿ ಮದ್ಯದಂಗಡಿ ತೆರೆದರೆ ಪರವಾನಗಿ ರದ್ದು ಮಾಡಲಾಗುವುದು. ತೆರಿಗೆ ಪಾವತಿಸದ ಗೋವಾದಿಂದ ಮದ್ಯವನ್ನು ರಾಜ್ಯದಲ್ಲಿ ಮಾರಾಟ ಮಾಡಲಾಗುತ್ತಿದೆ ಎಂಬ ಮಾಹಿತಿ ಇದ್ದು, ತಡೆಗಟ್ಟಲು ಕಠಿಣ ಕ್ರಮ ಕೈಗೊಳ್ಳಲಾಗುವುದು. ಇಷ್ಟು ದಿನ ಅಬಕಾರಿ ಇಲಾಖೆ ಹೇಗೆ ನಡೆಯುತ್ತಿತ್ತು ಎಂಬುದು ನನಗೆ ಗೊತ್ತಿಲ್ಲ. ಆದರೆ, ನನ್ನ ಅವಧಿಯಲ್ಲಿ ಹಿಂದಿನ ರೀತಿಯಲ್ಲಿ ನಡೆಯಲು ಅವಕಾಶ ನೀಡಲ್ಲ. ಕಾನೂನು ಉಲ್ಲಂಘಿಸಿದರೆ ಕ್ರಮ ಖಚಿತ ಎಂದರು.

# ಜಿಲ್ಲಾದ್ಯಂತ ಶಾಂತಿಯುತ ಈದ್ ಮಿಲಾದ್

• ಪ್ರಜೋದಯ ವರದಿ

**ಹಾಸನ:** ನಗರ ಸೇರಿ ಜಿಲ್ಲಾದ್ಯಂತ ಬುಧವಾರ ಪ್ರವಾದ್ ಮಹಮ್ಮದ್ ಪೈಗಂಬರ್ ಜನ್ಮ ದಿನಾಚರಣೆ ಅಂಗವಾಗಿ ಈದ್ ಮಿಲಾದ್ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ನಗರದ ವಿವಿಧೆಡೆ ಮೆರವಣಿಗೆ ನಡೆಸಲಾಯಿತು. ನಗರದ ಹಳೆ ಮಟನ್ ಮಾರ್ಕೆಟ್‌ನ ಅಮೀರ್ ಮೊಹಲ್ಲಾ ಬಳಿ ಜಮಾಯಿಸಿದ ಮುಸ್ಲಿಮರು ಡಬಲ್ ಟ್ಯಾಂಕ್ ವೃತ್ತದಿಂದ ಮೆರವಣಿಗೆ ಆರಂಭಿಸಿದರು. ಹೊಸಲೈನ್ ರಸ್ತೆ, ವಲ್ಲಭಭಾಯಿ ರಸ್ತೆ, ಸಂತೆಪೇಟೆ ವೃತ್ತ ಸೇರಿ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಬಿ.ಎಂ. ರಸ್ತೆಯತ್ತ ಸಾಗಿದರು. ತಣ್ಣೀರುಹಳ್ಳ, 80 ಅಡಿ ರಸ್ತೆಯಿಂದಲೂ ಮೆರವಣಿಗೆ ನಡೆಸಲಾಯಿತು.

ಶಾಸಕ ಹೆಚ್.ಪಿ.ಸ್ವರೂಪ್ ಹಾಗು ಜೆಡಿಎಸ್ ಮುಖಂಡರು ಭಾಗವಹಿಸಿ ಈದ್ ಮಿಲಾದ್ ಶುಭಾಶಯ ಕೋರಿದರು. ಕೆಲ ಸಮಯ ಮೆರವಣಿಗೆಯೊಂದಿಗೆ ಹೆಜ್ಜೆ ಹಾಕಿದರು. ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಂ ಸಮುದಾಯದ ಜನರು ಪಾಲ್ಗೊಂಡಿದ್ದ ಮೆರವಣಿಗೆಯಲ್ಲಿ ದಾರಿಯುದ್ದಕ್ಕೂ ಧಾರ್ಮಿಕ ಘೋಷಣೆಗಳು ಮೊಳಗಿದವು. ಯುವಕರು ಕೈಯಲ್ಲಿ ಬೃಹತ್



ಬಾವುಟಗಳನ್ನು ಹಿಡಿದು ಉತ್ಸಾಹದಿಂದ ಸಾಗಿದರು. ಮೆರವಣಿಗೆಯಲ್ಲಿ ಭಾಗವಹಿಸಿದ್ದವರಿಗೆ ವಿವಿಧೆಡೆ ತಂಪು ಪಾನೀಯ, ಕುಡಿಯಲು ನೀರು, ಐಸ್ ಕ್ರೀಂ ವಿತರಿಸಲಾಯಿತು.

ಮೆರವಣಿಗೆಯ ಹಿನ್ನಲೆಯಲ್ಲಿ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆ ಬಿಗಿ ಭದ್ರತೆ ಕೈಗೊಂಡಿತ್ತು. ಪ್ರಮುಖ ಸ್ಥಳಗಳಲ್ಲಿ ಪೊಲೀಸರು ಮೊಕ್ಕಾಂ ಹೂಡಿದ್ದರು. ದಕ್ಷಿಣ ವಲಯ ಮಹಾ ನಿರೀಕ್ಷಕ ಡಾ. ಬೋರಲಿಂಗಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಭದ್ರತೆ ಪರಿಶೀಲಿಸಿದರು. ಮೆರವಣಿಗೆ ಮಾರ್ಗದಲ್ಲಿ ವಾಹನಗಳ ಸಂಚಾರ ನಿಷೇಧಿಸಲಾಗಿತ್ತು. ಹೀಗಾಗಿ ಸಂಜೆ ವೇಳೆ ಸಹ್ಯಾದ್ರಿ ವೃತ್ತ, ಹೊಸಲೈನ್ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಕಂಡುಬಂತು.

ಈದ್ ಮಿಲಾದ್ ಅಂಗವಾಗಿ ಹಳೆ ಮಟನ್ ಮಾರುಕಟ್ಟೆ ವೃತ್ತದಲ್ಲಿ ಬುಧವಾರ ಮುಸ್ಲಿಂ ಹಾಗು ಹಿಂದೂ ಸಮುದಾಯದ ವ್ಯಾಪಾರಸ್ಥರು, ಆಟೋ ಚಾಲಕರು ಸೇರಿ ಸಾರ್ವಜನಿಕರಿಗೆ ವಿವಿಧ ಬಗೆಯ ಹಣ್ಣು-ಹಂಪಲನ್ನು ಸ್ಥಳದಲ್ಲಿಯೇ ಕತ್ತರಿಸಿ ಸಾರ್ವ ಜನಿಕರಿಗೆ ವಿತರಿಸಲಾಯಿತು. ಪ್ರವಾ ದಿ ಮಹಮ್ಮದ್ ಅವರ ಜನ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಗಿದೆ. ಈದ್ ಮಿಲಾದ್ ಅಂಗವಾಗಿ ಹಲವು ವರ್ಷಗಳಿಂದ ಹಳೆ ಮಟನ್ ಮಾರ್ಕೆಟ್ ಸುತ್ತಮುತ್ತಲಿನ ಸಣ್ಣ ವ್ಯಾಪಾರಸ್ಥರು ಹಾಗು ಆಟೋ ಚಾಲಕರು ಒಗ್ಗೂಡಿ ಸಾರ್ವಜನಿಕರಿಗೆ ವಿವಿಧ ಬಗೆಯ ಹಣ್ಣುಗಳನ್ನು ವಿತರಿಸುತ್ತಿದ್ದಾರೆಂದು ಸ್ಥಳೀಯ ನಿವಾಸಿ ಪರ್ವೀದ್ ಅವರು ಹೇಳಿದರು.

# ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿ ಆತ್ಮಹತ್ಯೆ

• ಪ್ರಜೋದಯ ವರದಿ

**ಹಾಸನ:** ಡೆತ್‌ನೋಟ್ ಬರೆದಿಟ್ಟು ಪ್ಯಾರಾಮೆಡಿಕಲ್ ವಿದ್ಯಾರ್ಥಿ ಹಾಸ್ಟೆಲ್‌ನಲ್ಲಿಯೇ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರ ಹೊರ ವಲಯದ ಗುಡ್ಡೇನಹಳ್ಳಿಯಲ್ಲಿ ನಡೆದಿದೆ.

ಸಕಲೇಶಪುರ ತಾಲ್ಲೂಕಿನ ನಾಡಹಳ್ಳಿ ಗ್ರಾಮದ ಮದನ್ (21) ಮೃತ ಪಟ್ಟಿದ್ದಾನೆ. ನಗರದಲ್ಲಿ ದ್ವಿತೀಯ ವರ್ಷದ ಪ್ಯಾರಾಮೆಡಿಕಲ್ ವ್ಯಾಸಂಗ ಮಾಡುತ್ತಿದ್ದ ಮದನ್, ಗುಡ್ಡೇನಹಳ್ಳಿಯ ಸಮಾಜ ಕಲ್ಯಾಣ ಇಲಾಖೆಯ ಬಾಲಕರ ವಸತಿ ನಿಲಯದಲ್ಲಿ ವಾಸವಾಗಿದ್ದ. ಹಾಸ್ಟೆಲ್‌ನ ಹೊರಗೆ ಪರಿಚಯವಾಗಿದ್ದ ಪವನ್, ಪ್ರೀತಮ್ ಹಾಗು ಇಬ್ಬರು ಅಪ್ರಾಪ್ತರು ಹಣಕ್ಕಾಗಿ ಮದನ್‌ಗೆ ಕಿರುಕುಳ ನೀಡುತ್ತಿದ್ದರು. ಈ ವಿಚಾರವನ್ನು ಮದನ್ ತನ್ನ ತಾಯಿ ಶೋಭ ಅವರ ಗಮನಕ್ಕೆ ತಂದಿದ್ದ. ಬಳಿಕ ತಾಯಿಯ ಸಲಹೆಯಂತೆ ನಾಲ್ವರ ಸಂಪರ್ಕವನ್ನು ಕಡಿತಗೊಳಿಸಿಕೊಂಡಿದ್ದ.

ಇದೇ ವಿಚಾರಕ್ಕೆ ಸಂಬಂಧಿಸಿದಂತೆ ನಾಲ್ವರು ಮದನ್ ಮೇಲೆ ಹಲ್ಲೆ ನಡೆಸಿ, ಅವರ ಮೊಬೈಲ್ ಫೋನ್ ಒಡೆದು ಹಾಕಿದ್ದರು. ಇದರಿಂದ ಮನನೊಂದಿದ್ದ ಮದನ್ 3 ತಿಂಗಳು ಹಾಸ್ಟೆಲ್ ತೊರೆದು ಮನೆಗೆ ತೆರಳಿದ್ದರು. ಸುಮಾರು ಮೂರು ತಿಂಗಳ ಬಳಿಕ ಮತ್ತೆ ಹಾಸ್ಟೆಲ್‌ಗೆ ಮರಳಿದ್ದ.

ಹಾಸ್ಟೆಲ್ ಎದುರಿನ ಬೇಕರಿಯೊಂದರಲ್ಲಿ ಮದನ್ ಟೀ ಕುಡಿಯುತ್ತಿದ್ದ ವೇಳೆ ನಾಲ್ವರು ಅಲ್ಲಿಗೆ ಬಂದು ಹಣ ನೀಡುವಂತೆ ಒತ್ತಾಯಿಸಿ ಹಲ್ಲೆ ನಡೆಸಿದ್ದಾರೆ. ಈ ವೇಳೆ ಮದನ್ ತಮ್ಮ ತಾಯಿಗೆ ಕರೆ ಮಾಡಿ ವಿಷಯ ತಿಳಿಸಿದ್ದು, ತಾಯಿ ಹಣ ಕಳುಹಿಸಿದ್ದರು. ಬಳಿಕ ಪವನ್ ಎಂಬಾತ



ಶೋಭ ಅವರಿಗೆ ಕರೆ ಮಾಡಿ ಬೆದರಿಕೆ ಹಾಕಿದ್ದ. ಇದರಿಂದ ಆತಂಕಗೊಂಡ ಶೋಭ ಅವರು ಮಧ್ಯರಾತ್ರಿಯೇ ನಾಡಹಳ್ಳಿಯಿಂದ ಹಾಸನಕ್ಕೆ ಬಂದು ಹಾಸ್ಟೆಲ್‌ನಲ್ಲಿ ಮದನ್‌ಗಾಗಿ ಹುಡುಕಾಟ ನಡೆಸಿದ್ದಾರೆ. ಆದರೆ, ಮದನ್ ಪತ್ತೆಯಾಗಿರಲಿಲ್ಲ. ಬೆಳಿಗ್ಗೆ ಹಾಸ್ಟೆಲ್‌ನ ಮೇಲ್ಛಾವಣಿಯಲ್ಲಿ ಮದನ್ ಆತ್ಮಹತ್ಯೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ.

**ಡೆತ್‌ನೋಟ್ ಪತ್ತೆ**

ಆತ್ಮಹತ್ಯೆಗೂ ಮುನ್ನ ಮದನ್ ಡೆತ್‌ನೋಟ್ ಬರೆದಿಟ್ಟಿದ್ದು, ತಮ್ಮ ಸಾವಿಗೆ ಪವನ್, ಪ್ರೀತಂ ಹಾಗು ಇಬ್ಬರು ಅಪ್ರಾಪ್ತರು ಕಾರಣವೆಂದು ಉಲ್ಲೇಖಿಸಿದ್ದಾನೆ. ತನ್ನ ಮೇಲೆ ಹಲ್ಲೆ ನಡೆಸಿ ಮೊಬೈಲ್ ಒಡೆದಿರುವ ಬಗ್ಗೆಯೂ ಡೆತ್‌ನೋಟ್‌ನಲ್ಲಿ ಪ್ರಸ್ತಾಪಿಸಿದ್ದು, ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಕುಟುಂಬಸ್ಥರು ಮನವಿ ಮಾಡಿದ್ದಾರೆ.

ಘಟನಾ ಸ್ಥಳದಲ್ಲಿ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಪೆನ್‌ಷನ್‌ಮೊಹಲ್ಲಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಡೆತ್‌ನೋಟ್ ಹಾಗು ಕುಟುಂಬಸ್ಥರ ಆರೋಪಗಳ ಆಧಾರದ ಮೇಲೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

# ಟೆಸ್ಟ್-ಟ್ರಯಲ್ ಗೊತ್ತಿಲ್ಲ, ಟೈಂ ಬಾಂಡ್‌ನಲ್ಲಿ ಕೆಲಸ ಮುಗಿಸಿ

• ಪ್ರಜೋದಯ ವರದಿ

**ಹಾಸನ:** ಟೆಸ್ಟ್, ಟ್ರಯಲ್ ನನಗೆ ಅವ್ಯಾವೂ ಗೊತ್ತಿಲ್ಲ. ಟೈಂ ಬಾಂಡ್‌ನಲ್ಲಿ ಕೆಲಸ ಮುಗಿಸಿ, ಐದು ದಿನಗಳೊಳಗೆ ಚನ್ನಪಟ್ಟಣ, ಸತ್ಯಮಂಗಲ ಕೆರೆಗೆ ನೀರು ಹರಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬುಧವಾರ ತಾಲ್ಲೂಕಿನ ಹಂದಿನಕೆರೆ ಗ್ರಾಮದ ಸಮೀಪ ನಡೆಯುತ್ತಿರುವ ಏತ ನೀರಾವರಿ ಯೋಜನೆ ಕಾಮಗಾರಿ ವಿಳಂಬ ಆಗಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿ, ಎಷ್ಟು ದಿನದಲ್ಲಿ ಕಾಮಗಾರಿ ಪೂರ್ಣಗೊಳಿಸುತ್ತೀರಾ ಎಂದು ಇಂಜಿನೀಯರ್ ಅವರನ್ನು ಪ್ರಶ್ನಿಸಿದಾಗ, ಉಳಿದ ಕಾಮಗಾರಿ, ಟೆಸ್ಟ್ ಟ್ರಯಲ್ ಮಾಡಲು ಸಮಯಾವಕಾಶ ಬೇಕೆಂದು ಪ್ರತಿಕ್ರಿಯಿಸಿದರು.

ಆಕ್ಷೇಪ ವ್ಯಕ್ತಪಡಿಸಿದ ಸಚಿವರು, ನನಗೆ ಟೆಸ್ಟು, ಟ್ರಯಲ್ ಅವ್ಯಾವೂ ಗೊತ್ತಿಲ್ಲ. ಗುತ್ತಿಗೆದಾರರನ್ನು ಕರೆಸಿ, ನನ್ನ ಬಳಿ ಇವೆಲ್ಲವೂ ನಡೆಯುವುದಿಲ್ಲ. ಟೈಂ ಬಾಂಡ್‌ನಲ್ಲಿ ಕೆಲಸ ಮುಗಿಸಬೇಕು. ಎಷ್ಟು ದಿನದಲ್ಲಿ ಕಾಮಗಾರಿ ಮುಗಿಸಿತ್ತೀರಾ ಎಂದು ಗುತ್ತಿಗೆದಾರರನ್ನು ಪ್ರಶ್ನೆ ಮಾಡಿದರು.

ಮುಂದಿನ ಹತ್ತು ದಿನದಲ್ಲಿ ನೀರು ಹರಿಸಲಾಗುವುದೆಂದು ಗುತ್ತಿಗೆದಾರರು ಉತ್ತರಿಸಿದಾಗ, ಹತ್ತು ದಿನ ಏಕೆ, ಐದು ದಿನ ಸಮಯ ಕೊಡುತ್ತೇನೆ, ಅಷ್ಟರೊಳಗೆ ಸತ್ಯಮಂಗಲ ಕೆರೆಗೆ ನೀರು ಹರಿಸಬೇಕೆಂದು ತಾಕೀತು ಮಾಡಿದರು.

**ರೈತರೊಂದಿಗೆ ಸಚಿವರ ಮಾತುಕತೆ**

ಇದೇ ವೇಳೆ ಕೇವಲ 42 ಮೀಟರ್ ಕಾಮಗಾರಿಗೆ 2 ಕಡೆಗಳಲ್ಲಿ ತಡೆಯೊಡ್ಡಿದ್ದ ಕುಟುಂಬಗಳ ರೈತರೊಂದಿಗೆ ಸಚಿವರು ಮಾತುಕತೆ ನಡೆಸಿದರು. ಬಾಕಿ ಕಾಮಗಾರಿಯನ್ನು ಮುಂದಿನ ಎರಡು ದಿನಗಳಲ್ಲಿ ಮುಗಿಸಬೇಕೆಂದ ಸಚಿವರು, ಕ್ಯಾತನಹಳ್ಳಿ ಏತ ನೀರಾವರಿ ಕಾಮಗಾರಿಯನ್ನೂ

» ನಾಲ್ಕನೇ ಪುಟದಲ್ಲಿ

## ▪ 5 ದಿನಗಳೊಳಗೆ ಚನ್ನಪಟ್ಟಣ, ಸತ್ಯಮಂಗಲ ಕೆರೆಗೆ ನೀರು : ಕೆ.ಎಂ.ಶಿವಲಿಂಗೇಗೌಡ



### ಸಂಧಾನಕ್ಕೆ ಒಪ್ಪದಿದ್ದರೆ, ಕಾನೂನು ಕ್ರಮ

ಈ ನಡುವೆ ಪರಿಹಾರ ನೀಡದೆ ಕಾಮಗಾರಿಗೆ ಭೂಮಿ ನೀಡುವುದಿಲ್ಲವೆಂದು ರೈತರು ಪಟ್ಟು ಹಿಡಿದರು. ಇದೇ ಕಾರಣಕ್ಕೆ ಕಳೆದ 5 ವರ್ಷದಿಂದ ಕಾಮಗಾರಿಗೆ ತಡೆಯಾಗಿದೆ. ಕಾಮಗಾರಿ ಮುಗಿಯಲು 32 ಗುಂಟೆ ಜಮೀನು ಅವಶ್ಯವಿದ್ದು, ಐವರು ರೈತರು ಭೂಮಿ ಕೊಡುತ್ತಿಲ್ಲ. ಇದನ್ನು ಗಮನಿಸಿದ ಸಚಿವರು, ರೈತರಿಗೆ ಬಾಕಿ ಇರುವ 39 ಲ.ರೂ.ಪರಿಹಾರ ನೀಡುತ್ತೇವೆ, ಸಂಜೆಯೊಳಗೆ ಕಾಮಗಾರಿ ಪೂರ್ಣಗೊಳಿಸಿ ಎಂದು ಗುತ್ತಿಗೆದಾರರಿಗೆ ಸೂಚಿಸಿದರು. ಆದರೆ, ಪರಿಹಾರದ ಆದೇಶ ಪ್ರತಿ ಪಡೆಯಲು ಒಂದೇ ಕುಟುಂಬದ ನಾಲ್ವರು ಅಣ್ಣ-ತಮ್ಮಂದಿರು ನಿರಾಕರಿಸಿದರು. ಪರಿಹಾರದ ಆದೇಶದ ಪ್ರತಿಯನ್ನು ವಾಪಾಸ್ ಪಡೆದು ಜಿಲ್ಲಾಧಿಕಾರಿಗೆ ನೀಡಿ, ಸಮಸ್ಯೆ ಬಗೆಹರಿಸಿ ಕಾಮಗಾರಿ ಪೂರ್ಣಗೊಳಿಸಿ, ಸಂಧಾನಕ್ಕೆ ಒಪ್ಪದಿದ್ದರೆ, ಕಾನೂನು ರೀತಿ ಕ್ರಮ ಕೈಗೊಳ್ಳುವಂತೆ ಹೇಳಿದರು.

# ನೇಣು ಬಿಗಿದ ಸ್ಥಿತಿಯಲ್ಲಿ ವ್ಯಕ್ತಿ ಶವ ಪತ್ತೆ

• ಪ್ರಜೋದಯ ವರದಿ

**ಅರಕಲಗೂಡು:** ನೇಣು ಬಿಗಿದ ಸ್ಥಿತಿಯಲ್ಲಿ ಅಪರಿಚಿತ ವ್ಯಕ್ತಿಯ ಶವ ಪಟ್ಟಣದ ಮಾರುಕಟ್ಟೆ ರಸ್ತೆಯ ವಿದ್ಯುತ್ ಕಂಬದ ಬಳಿ ಪತ್ತೆಯಾಗಿದೆ.

ಅಂದಾಜು 40 ವರ್ಷದ ವ್ಯಕ್ತಿಯಾಗಿದ್ದು, ಕುತ್ತಿಗೆಯಲ್ಲಿ ಹಗ್ಗವಿದೆ. ಸಾರ್ವಜನಿಕರು ಸಂಚರಿಸುವ ಪ್ರಮುಖ ರಸ್ತೆಯಲ್ಲೇ ಘಟನೆ ನಡೆದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಮೇಲ್ನೋಟಕ್ಕೆ ಆತ್ಮಹತ್ಯೆಯಾಗಿರಬಹುದೆಂಬ ಶಂಕೆ ವ್ಯಕ್ತವಾಗಿದ್ದರೂ, ಪೊಲೀಸ್ ತನಿಖೆ ಪೂರ್ಣಗೊಂಡ ಬಳಿಕವೇ ಸಾವಿನ ನಿಖರ ಕಾರಣ ತಿಳಿಯಲಿದೆ. ಪಟ್ಟಣ ಠಾಣೆಯ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಸಾರ್ವಜನಿಕ ಸ್ಥಳದಲ್ಲೇ ಇಂತಹ ಘಟನೆ ನಡೆದಿರುವ ಹಿನ್ನಲೆಯಲ್ಲಿ ರಾತ್ರಿ ವೇಳೆ ಪೊಲೀಸ್ ಗಸ್ತು ಕುರಿತು



ಸ್ಥಳೀಯರು ಪ್ರಶ್ನಿಸಿದ್ದಾರೆ. ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಪ್ರಮುಖ ರಸ್ತೆ ಹಾಗು ಜನನಿಬಿಡ ಪ್ರದೇಶಗಳಲ್ಲಿ ರಾತ್ರಿ ಗಸ್ತು ಹೆಚ್ಚಿಸುವಂತೆ ಒತ್ತಾಯಿಸಿದ್ದಾರೆ. ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಿಸಿಟಿವಿ ಕ್ಯಾಮರಾ ವ್ಯವಸ್ಥೆ ಇಲ್ಲದಿರುವುದರ ಬಗ್ಗೆಯೂ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

# ಟ್ರ್ಯಾಕ್ಟರ್ ಡಿಕ್ಕಿ: ವ್ಯಕ್ತಿ ಸಾವು

**ಚನ್ನರಾಯಪಟ್ಟಣ :** ಟ್ರ್ಯಾಕ್ಟರ್ ಕಾರಿಗೆ ಡಿಕ್ಕಿಯಾದ ಪರಿಣಾಮ ಪ್ರಯಾಣಿಕ ಮೃತಪಟ್ಟು ಮೂವರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಹಿರೀಸಾವೆ-ಬ್ಯಾಡರಹಳ್ಳಿ ಗೇಟ್ ಸಮೀಪ ನಡೆದಿದೆ.

ಉಡುಪಿ ಜಿಲ್ಲೆ ಕುಂದಾಪುರದ ರಾಘವೇಂದ್ರ ಮೃತ ಪಟ್ಟಿದ್ದಾರೆ. ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದ ಅವರು ಮೂವರು ಸ್ನೇಹಿತರೊಂದಿಗೆ ಧರ್ಮಸ್ಥಳಕ್ಕೆ ತೆರಳಿದ್ದರು. ಗವಿಸಿದ್ದೇಗೌಡ, ರವಿ ಮುನಿಸ್ವಾಮಿ, ರಾಚೇಗೌಡ ಗಾಯಾಳುಗಳು. ಬ್ಯಾಡರಹಳ್ಳಿ ಗೇಟ್ ಮುಂದೆ ಹೋಗುತ್ತಿದ್ದಾಗ ರಸ್ತೆಯ ಎಡ ಪಥದಲ್ಲಿ ವಿರುದ್ಧ ದಿಕ್ಕಿನಲ್ಲಿ ವೇಗವಾಗಿ ಬಂದ ಟ್ರ್ಯಾಕ್ಟರ್ ಡಿಕ್ಕಿಯಾಗಿದೆ. ಅಪ ಘಾತದ ರಭಸಕ್ಕೆ ಕಾರು ಸಂಪೂರ್ಣ ಜಖಂ ಆಗಿದೆ. ಗಾಯಾಳುಗಳನ್ನು ಪಟ್ಟಣದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಆಲೂರು : 70 ಲ.ರೂ. ನಷ್ಟದಲ್ಲಿ ಪಿಎಲ್‌ಡಿ ಬ್ಯಾಂಕ್

• ಪ್ರಜೋದಯ ವರದಿ

**ಆಲೂರು :** ಸರ್ಕಾರಗಳು ಬದಲಾದಂತಹ ಸಂದರ್ಭದಲ್ಲಿ ಸಾಲ ಮನ್ನಾ ಮಾಡುತ್ತವೆ ಎಂಬ ಭಾವನೆಯಿಂದ, ರೈತರು ಪಡೆದ ಸಾಲ ಮರು ಪಾವತಿ ಮಾಡದಿರುವುದರಿಂದ, ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ 70.8 ಲ.ರೂ.ಗಳ ನಷ್ಟದಲ್ಲಿದೆ ಎಂದು ಮಾಜಿ ಅಧ್ಯಕ್ಷ ಬಿ.ಕೆ.ಲಿಂಗರಾಜು ಅವರು ಆತಂಕ ವ್ಯಕ್ತಪಡಿಸಿದರು.

ಪಟ್ಟಣದ ಪಿ.ಎಲ್.ಡಿ. ಬ್ಯಾಂಕ್ 2025-26 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಬ್ಯಾಂಕ್‌ಗಳು ರೈತರ ಸ್ವಾವಲಂಬಿ ಜೀವನಕ್ಕೆ ಮತ್ತು ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗಿವೆ. ಕಳೆದ ವರ್ಷ 50 ಲಕ್ಷ ರೂ. ನಿವ್ವಳ ಲಾಭದಲ್ಲಿದ್ದ ಬ್ಯಾಂಕ್ ಪ್ರಸ್ತುತ ಸಾಲಿನಲ್ಲಿ ನಷ್ಟಕ್ಕೊಳಗಾಗಿದೆ. ಈ ವರೆಗೆ 3.22 ಕೋ.ರೂ. ಸಾಲವನ್ನು ವಿವಿಧ ಯೋಜನೆಯಲ್ಲಿ ವಿತರಿಸಲಾಗಿದ್ದು, 1.61 ಕೋ.ರೂ. ಸಾಲ ವಸೂಲಾತಿಯಾಗಿದೆ. ಸುಮಾರು 120 ಪ್ರಕರಣಗಳು ನ್ಯಾಯಾಲಯದಲ್ಲಿದ್ದು, ಶೇ. 50 ರಷ್ಟು ಸಾಲ ಬಾಕಿ ಇರುವುದರಿಂದ, ಸಾಲ ಪಡೆದಿರುವ ರೈತರು ನಿಗದಿತ ಅವಧಿಯೊಳಗೆ ಸಾಲ ಮರು ಪಾವತಿಸುವಂತೆ ಮನವಿ ಮಾಡಿದರು.

ಮಾಜಿ ನಿರ್ದೇಶಕ ಬಿ.ಸಿ.ಶಂಕರಾಚಾರ್ ಅವರು ಮಾತನಾಡಿ, ಪ್ರಸ್ತುತ ಸಹಕಾರಿ ಬ್ಯಾಂಕ್‌ಗಳು ರಾಷ್ಟ್ರೀಯ ಬ್ಯಾಂಕುಗಳಿಗೆ ಪೈಪೋಟಿ ನೀಡುವ ನಿಟ್ಟಿನಲ್ಲಿ ದಾಪುಗಾಲು ಹಾಕುತ್ತಿವೆ. ರೈತರು ಖಾಸಗಿ ಲೇವಾದೇವಿಗಾರರಿಂದ ಹೆಚ್ಚಿನ ಬಡ್ಡಿಗೆ ಸಾಲವನ್ನು ಪಡೆದು ಸಾಲದ ಸುಳಿಯಲ್ಲಿ ಸಿಲುಕುವುದನ್ನು ತಪ್ಪಿಸುವ ಉದ್ದೇಶದಿಂದ, ಸಹಕಾರ ಬ್ಯಾಂಕ್‌ಗಳಲ್ಲಿ ಕೇವಲ ಶೇ.3 ರ ಬಡ್ಡಿ ದರದಲ್ಲಿ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸಾಲವನ್ನು ನೀಡುತ್ತಿವೆ ಎಂದರು.

ಕಾರ್ಯಕ್ರಮದಲ್ಲಿ ಉಪಾಧ್ಯಕ್ಷೆ ರಾಧಮ್ಮ ಕಾಂತರಾಜು, ನಿರ್ದೇಶಕರಾದ ಹೆಚ್.ಸಿ. ಶಾಂತಕೃಷ್ಣ, ರಂಗಯ್ಯ, ನಿಂಗಮ್ಮ, ತುಳಸಮ್ಮ, ಎಂ.ಕೆ.ಜಗದೀಶ್, ಜಾರ್ಜ್ ಡಿ. ಕಾಸ್ಟ, ಎಂ.ಎ ನಿಂಗರಾಜು, ಬಿ.ಸಿ ಸುನಿಲ್‌ಕುಮಾರ್, ಸಿ.ಪಿ ಧರಣೇಶ್ ಮುಂತಾದವರಿದ್ದರು.




# ವಡ್ಡರಹಳ್ಳಿ ಸುತ್ತ ಚಿರತೆ ಸಂಚಾರ: ಗ್ರಾಮಸ್ಥರಲ್ಲಿ ಆತಂಕ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ರಾಮನಾಥಪುರ ಹೋಬಳಿಯ ವಡ್ಡರಹಳ್ಳಿ, ರುದ್ರಪಟ್ಟಣ, ಹನ್ಯಾಳು, ಮತ್ತಿಗೋಡು ಹಾಗು ಜೆ.ಹೊಸಹಳ್ಳಿ ಸುತ್ತಲಿನ ಗ್ರಾಮಗಳಲ್ಲಿ ಚಿರತೆ ಸಂಚಾರ ಕಂಡು ಬಂದಿದ್ದು, ಗ್ರಾಮಸ್ಥರು ಆತಂಕಕ್ಕೀಡಾಗಿದ್ದಾರೆ.

ಬುಧವಾರ ಬೆಳಿಗ್ಗೆ ವಡ್ಡರಹಳ್ಳಿ ಸಮೀಪ ಚಿರತೆ ಕಾಣಿಸಿಕೊಂಡಿದ್ದು, ಸುದ್ದಿ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆ ಸಿಬ್ಬಂದಿ ಪರಿಶೀಲಿಸಿದರು. ವಡ್ಡರಹಳ್ಳಿ ಗ್ರಾಮದಲ್ಲಿ ಚಿರತೆ ನಾಯಿಯನ್ನು ಬೇಟೆಯಾಡಿ ತಿಂದಿರುವುದು ಕಂಡು ಬಂದಿದೆ. ಸುತ್ತಮುತ್ತ ಚಿರತೆ ಸಂಚಾರ ದೃಢಪಟ್ಟಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಮುಂಜಾಗ್ರತಾ ಕ್ರಮವಾಗಿ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳದಲ್ಲಿ ಬೋನ್ ಇರಿಸಿದ್ದು, ಚಿರತೆಯ ಚಲನವಲನದ ಮೇಲೆ ನಿಗಾ ವಹಿಸಿದ್ದಾರೆ.



ಗ್ರಾಮಸ್ಥರು ಮುಂಜಾನೆ ಹಾಗು ರಾತ್ರಿ ವೇಳೆ ಒಂಟಿಯಾಗಿ ಸಂಚರಿಸದಂತೆ ಮತ್ತು ಜಾನುವಾರುಗಳನ್ನು ಸುರಕ್ಷಿತವಾಗಿ ಇರಿಸಿ ಕೊಳ್ಳುವಂತೆ ಅರಣ್ಯ ಇಲಾಖೆ ಸೂಚಿಸಿದೆ.

ವಡ್ಡರಹಳ್ಳಿ ಸೇರಿ ಹೊಸಳ್ಳಿ, ಮತ್ತಿಗೋಡು ಹಾಗು ಸುತ್ತಮುತ್ತಲಿನ ಗ್ರಾಮಗಳಲ್ಲಿ ಚಿರತೆ ಕಾಣಿಸಿಕೊಂಡಿರುವ ಹಿನ್ನಲೆಯಲ್ಲಿ ಗ್ರಾಮಸ್ಥರು ಆತಂಕದಲ್ಲಿದ್ದು, ಚಿರತೆ ಸೆರೆ ಹಿಡಿದು ಸುರಕ್ಷಿತವಾಗಿ ಅರಣ್ಯಕ್ಕೆ ಸ್ಥಳಾಂತರಿಸುವಂತೆ ಅರಣ್ಯ ಇಲಾಖೆಗೆ ಮನವಿ ಮಾಡಿದ್ದಾರೆ. ಅರಣ್ಯ ಇಲಾಖೆ ಸಿಬ್ಬಂದಿ ಚಿರತೆಯ ಚಲನವಲನ ಪತ್ತೆ ಹಚ್ಚಲು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದು, ಗ್ರಾಮಸ್ಥರು ಆತಂಕಕ್ಕೆ ಒಳಗಾಗದೆ ಎಚ್ಚರಿಕೆಯಿಂದ ಇರುವಂತೆ ತಿಳಿಸಿದ್ದಾರೆ.

## ಡಿಸಿ ವರ್ತನೆ ಬಗ್ಗೆ ಸ್ಪೀಕರ್, ಕಾರ್ಯದರ್ಶಿಗೆ ತಿಳಿಸುವೆ | ಮತ್ತೆ ಹರಿಹಾಯ್ದ ಹೆಚ್.ಡಿ.ರೇವಣ್ಣ

# ಜಿಲ್ಲಾಧಿಕಾರಿಗೆ ಉಸ್ತುವಾರಿ ಸಚಿವರು ಬುದ್ಧಿ ಹೇಳಲಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾಧಿಕಾರಿ ಜನಪ್ರತಿನಿಧಿಗಳೊಂದಿಗೆ ಹೇಗೆ ನಡೆದುಕೊಳ್ಳಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವರು ಬುದ್ಧಿ ಹೇಳಲಿ. ಅನುಮತಿ ಪಡೆಯದೆ ಒಬ್ಬ ಶಾಸಕರ ಮೇಲೆ ಹೇಗೆ ಆರೋಪ ಮಾಡುತ್ತಾರೆ, ಈ ವಿಚಾರವನ್ನು ವಿಧಾನಸಭಾಧ್ಯಕ್ಷರು ಹಾಗು ಮುಖ್ಯ ಕಾರ್ಯದರ್ಶಿ ಗಮನಕ್ಕೆ ತರುವುದಾಗಿ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾಧಿಕಾರಿ ದುರಹಂಕಾರ ಬಿಟ್ಟು ಮೊದಲು ಶಾಸಕರಿಗೆ ಗೌರವ ಕೊಡುವುದನ್ನು ಕಲಿಯಬೇಕು. ದುರಹಂಕಾರವಿದ್ದರೆ ಅದನ್ನು ತಮ್ಮ ಮನೆಯಲ್ಲಿ ಇಟ್ಟುಕೊಳ್ಳಲಿ. ಶಾಸಕರು ಹೇಗೆ ಮಾತನಾಡಬೇಕು, ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ತರಬೇತಿ ನೀಡಲಿ. ಅದೇ ರೀತಿ ಅಧಿಕಾರಿಗಳು ಜನಪ್ರತಿನಿಧಿಗಳೊಂದಿಗೆ ಹೇಗೆ ನಡೆದುಕೊಳ್ಳಬೇಕೆಂಬುದನ್ನೂ ತಿಳಿದುಕೊಳ್ಳಬೇಕೆಂದು ಹರಿಹಾಯ್ದರು.

ನಾನು ಎಷ್ಟು ಜಿಲ್ಲಾಧಿಕಾರಿಗಳನ್ನು ನೋಡಿಲ್ಲ. ಶಾಸಕನಾಗಿ, ಸಚಿವನಾಗಿ ಕೆಲಸ ಮಾಡಿದ್ದೇನೆ. ರೋಹಿಣಿ ಸಿಂಧೂರಿ ಜಿಲ್ಲಾಧಿಕಾರಿಯಾಗಿದ್ದಾಗ ಅವರ ಬಗ್ಗೆ ನಾನು ಏನಾದರೂ ಮಾತನಾಡಿದ್ದೀನಾ. ಅರ್ಚನಾ ಜಿಲ್ಲಾಧಿಕಾರಿಯಾಗಿದ್ದಾಗಲೂ ಅವರು ಚುನಾವಣಾ ಕಾರ್ಯವನ್ನು ನಿರ್ವಹಿಸಿದ್ದಾರೆ. ಬಡವರ ಕೆಲಸ ಮಾಡಿ ಎಂದು ಹೇಳಿದ್ದೇನೆ. ನನ್ನ ವೈಯಕ್ತಿಕ ಕೆಲಸಕ್ಕಾಗಿ ಯಾರನ್ನೂ ಹಿಡಿತದಲ್ಲಿ ಇಟ್ಟುಕೊಳ್ಳುವ ಅಗತ್ಯ ನನಗಿಲ್ಲವೆಂದು ಜಿಲ್ಲಾಧಿಕಾರಿ ವಿರುದ್ಧ ಮತ್ತೊಮ್ಮೆ ವಾಗ್ದಾಳಿ ನಡೆಸಿದರು.

ಜಿಲ್ಲಾಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದರೂ ಸ್ಪಂದಿಸಿಲ್ಲ. ನಾನು ಜಿಲ್ಲಾಧಿಕಾರಿ ಕಚೇರಿಗೆ ಬಂದು ಕರೆ ಮಾಡಿದ್ದೇನೆ. ನನ್ನ ಫೋನ್ ಸ್ವೀಕರಿಸಲಿಲ್ಲ. ನನ್ನ ಆಪ್ತ ಸಹಾಯಕನ ಸಂಖ್ಯೆಯಿಂದಲೂ ಕರೆ ಮಾಡಿಸಿದ್ದೇನೆ. ಶಾಸಕರ ದೂರವಾಣಿ ಕರೆ ಸ್ವೀಕರಿಸದಷ್ಟು ದೊಡ್ಡ ಮನುಷ್ಯರಾ, ಅಷ್ಟೊಂದು ಬ್ಯುಸಿನಾ ಎಂದು ಪ್ರಶ್ನಿಸಿದರು.

» ನಾಲ್ಕನೇ ಪುಟದಲ್ಲಿ

### ಹಲವು ಪತ್ರ ಬರೆದರೂ ಸ್ಪಂದಿಸಿಲ್ಲ



ಜಿಲ್ಲೆಯ ರೈತರು, ಸಾರ್ವಜನಿಕರ ಸಮಸ್ಯೆಗೆ ಸಂಬಂಧಿಸಿದಂತೆ ನಾನು ಪತ್ರ ಕೊಟ್ಟರೆ ಅದನ್ನು ಶಾಸಕ ಕೊಟ್ಟ ಪತ್ರ ಎಂದು ಪರಿಗಣಿಸದೆ ಯಾರೋ ಪತ್ರ ಕೊಟ್ಟಿದ್ದಾರೆಂಬ ರೀತಿಯಲ್ಲಿ ವರ್ತಿಸುತ್ತಾರೆ. ಸಾಕಷ್ಟು ಪತ್ರಗಳನ್ನು ಬರೆಸಿ ದ್ದೇನೆ, ಒಂದಕ್ಕೂ ಸ್ಪಂದಿಸಿಲ್ಲವೆಂದು ರೇವಣ್ಣ ಅವರು ಜಿಲ್ಲಾಧಿಕಾರಿಗೆ ಬರೆದ ಪತ್ರಗಳನ್ನು ಬಿಡುಗಡೆಗೊಳಿಸಿದರು.

### ಸಂಸದರ ಸೂಚನೆಯಂತೆ ಮೀಸಲು ಪಟ್ಟಿ

ಜಿಲ್ಲೆಯ ಗ್ರಾಮ ಪಂಚಾಯಿತಿಗಳ ಮೀಸಲಾತಿ ವಿಚಾರ ಪ್ರಸ್ತಾಪಿಸಿದ ಅವರು, ಜಿಲ್ಲಾಧಿಕಾರಿಗೆ ಮೀಸಲಾತಿ ನಿಗದಿ ಪಡಿಸುವ ಸಂಪೂರ್ಣ ಅಧಿಕಾರವಿದ್ದರೆ ತಹಶೀಲ್ದಾರ್‌ಗಳಿಂದ ಮೀಸಲಾತಿ ಪಟ್ಟಿ ಏಕೆ ಪಡೆಯಲಾಗಿದೆ ಎಂದು ಪ್ರಶ್ನಿಸಿದ ರೇವಣ್ಣ ಅವರು, ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳಿಗೆ ಸರಿಯಾಗಿ ಮೀಸಲಾತಿ ನಿಗದಿಪಡಿಸಿ ಪಟ್ಟಿ ಕಳುಹಿಸಿಕೊಡಿ ಎಂದು ಸೂಚಿಸಲಾಗಿದೆ. ಲೋಕಸಭಾ ಸದಸ್ಯರು ಹೇಳಿದಂತೆ ಮೀಸಲಾತಿ ಪಟ್ಟಿ ನಿಗದಿಪಡಿಸಲಾಗಿದೆ ಎಂದು ಹಾಸನ ತಹಶೀಲ್ದಾರ್ ನನಗೆ ಹೇಳಿದ್ದಾರೆ. ಬೇಕಾದರೆ ನನ್ನ ಮುಂದೆ ಅವರನ್ನು ಕೇಳಲಿ ಎಂದು ಸವಾಲು ಹಾಕಿದ ಅವರು, ಜಿಲ್ಲಾಧಿಕಾರಿ ವೈಯಕ್ತಿಕ ಜಿದ್ದು ಇಟ್ಟುಕೊಂಡು ಏನೇನು ಮಾಡಿದ್ದಾರೆಂಬುದನ್ನು ದಾಖಲೆ ಸಮೇತ ನೀಡುತ್ತೇನೆಂದರು.

# ಪೆಟ್ರೋಲ್ ಸುರಿದು ಮಗಳ ಕೊಲೆಗೆ ಯತ್ನಿಸಿದ ತಂದೆ

• ಪ್ರಜೋದಯ ವರದಿ

**ಆಲೂರು:** ಕೌಟುಂಬಿಕ ಕಲಹದಿಂದ ತಂದೆಯೇ ಮನೆಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಮಗಳ ಕೊಲೆಗೆ ಯತ್ನಿಸಿರುವ ಘಟನೆ ತಾಲ್ಲೂಕಿನ ಕಾರಿಗಾನಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ಪುಟ್ಟರಾಜು ಎಂಬಾತ ತನ್ನ ಪುತ್ರಿ ವೀಣಾ ಹಾಗು ಹೆಂಡತಿ ಲೀಲಾವತಿ ಮೇಲಿನ ದ್ವೇಷದಿಂದ ಕೊಲೆಗೆ ಪ್ರಯತ್ನ ಮಾಡಿದ್ದಾರೆಂದು ತಿಳಿದು ಬಂದಿದೆ. ಕಳೆದ ಹಲವು ದಿನಗಳಿಂದ ಲೀಲಾವತಿ ಹಾಗು ವೀಣಾ ಜೊತೆಗೆ ಪುಟ್ಟರಾಜು ಜಗಳವಾಡುತ್ತಿದ್ದ. ಆ.24ರ ರಾತ್ರಿ 11ರ ಸಮಯದಲ್ಲಿ ಮನೆಗೆ ಬಂದ ಪುಟ್ಟರಾಜು ಪತ್ನಿ ಲೀಲಾವತಿ ಸಂಬಂಧಿಕರ ಊರಿಗೆ ಹೋಗಿರುವುದನ್ನು ಖಚಿತ ಪಡಿಸಿಕೊಂಡು ಮನೆಯಿಂದ ಹೊರಗೆ ಬಂದು ಪೆಟ್ರೋಲ್‌ನ್ನು ಮನೆಯ ಕಿಟಕಿಗೆ ಸುರಿದು ಬೆಂಕಿ ಹಚ್ಚಿದ್ದಾರೆ.

ಮನೆಯೊಳಗಿದ್ದ ವೀಣಾ ಹಾಗು ಚಿಕ್ಕಮ್ಮನ ಮಕ್ಕಳಾದ ನಯನ, ಚೇತನ್ ಗಾಬರಿಯಾಗಿ ಲೀಲಾವತಿ ಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಬೆಂಕಿ ವ್ಯಾಪಕವಾಗಿ ಹರಡಿದ ಪರಿಣಾಮ ವಸ್ತುಗಳೆಲ್ಲಾ ಆಹುತಿಯಾಗಿವೆ. ಅಷ್ಟರಲ್ಲಿ ಲೀಲಾವತಿ ಸ್ಥಳಕ್ಕೆ ದೌಡಾಯಿಸಿ ಬಾಗಿಲು ತೆಗೆದು ಮೂವರನ್ನು ರಕ್ಷಿಸಿದ್ದಾರೆ. ಸಣ್ಣಪುಟ್ಟ ಗಾಯದೊಂದಿಗೆ ಬಳಲುತ್ತಿರುವ ಅವರಿಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಈ ಸಂಬಂಧ ಪ್ರಕರಣ ದಾಖಲಾಗಿದೆ.

# ಮೆದುಳು ತನ್ನನ್ನೇ ಅರ್ಥಮಾಡಿಕೊಳ್ಳುವ 7 ವರ್ಷಗಳ ಪ್ರಯತ್ನ



**ನಾವು** ನೋವನ್ನು ಹೇಗೆ ಅನುಭವಿಸುತ್ತೇವೆ? ಮಳೆಬಿಲ್ಲಿನ ಬಣ್ಣಗಳು ಏಕೆ ನಮ್ಮೊಳಗೆ ಆಶ್ಚರ್ಯ ಹುಟ್ಟಿಸುತ್ತವೆ? ಸಂಗೀತ ಕೇಳುವಾಗ ಕೆಲವೊಮ್ಮೆ ಏಕೆ ಮನಸ್ಸು ಭಾವನೆಗಳಿಂದ ತುಂಬಿಬಿಡುತ್ತದೆ? ಅಥವಾ ಕನಸಿನಿಂದ ಎಚ್ಚರವಾದ ಕ್ಷಣದಲ್ಲಿ, ಕೆಲ ಸೆಕೆಂಡುಗಳ ಕಾಲ ನಾವು ಯಾವ ಲೋಕದಲ್ಲಿದ್ದೇವೆ ಎಂಬ ಗೊಂದಲ ಏಕೆ ಉಂಟಾಗುತ್ತದೆ?

ಚೇತನತೆ ಎನ್ನುವ ಅನುಭವದ ರಹಸ್ಯವು ಮಾನವ ಚಿಂತನೆಯ ಅತ್ಯಂತ ಗಹನ ಪ್ರಶ್ನೆಗಳಲ್ಲಿ ಒಂದಾಗಿದೆ. ನಾವು ಕೇವಲ ಮಾಹಿತಿಯನ್ನು ಸಂಸ್ಕರಿಸುವ ಜೀವಿಗಳೇ ಅಥವಾ ಅನುಭವಿಸುವ ಅಂತರಂಗವೂ ನಮಗಿದೆಯೇ? ಇದೇ ಪ್ರಶ್ನೆಗೆ ಉತ್ತರ ಹುಡುಕುವ ಉದ್ದೇಶದಿಂದ, ಬಹುರಾಷ್ಟ್ರೀಯ ನರವಿಜ್ಞಾನಿಗಳ ತಂಡವು ಏಳು ವರ್ಷಗಳ ಕಾಲ ಮಹತ್ವದ ಅಧ್ಯಯನ ನಡೆಸಿದೆ.

ಈ ಸಂಶೋಧನೆಯಲ್ಲಿ ಚೇತನತೆಯ ಎರಡು ಪ್ರಮುಖ ಸಿದ್ಧಾಂತಗಳನ್ನು ಪರೀಕ್ಷಿಸಲಾಗಿದೆ. ಸಂಯೋಜಿತ ಮಾಹಿತಿ ಸಿದ್ಧಾಂತ: ಈ ಸಿದ್ಧಾಂತದ ಪ್ರಕಾರ, ಒಂದು ವ್ಯವಸ್ಥೆಯೊಳಗಿನ ಮಾಹಿತಿ ಅತ್ಯಧಿಕವಾಗಿ ಪರಸ್ಪರ ಸಂಪರ್ಕಗೊಂಡು ಏಕೀಕೃತವಾಗಿದ್ದಾಗ ಜಾಗೃತ ಅನುಭವ ಉದ್ಭವಿಸುತ್ತದೆ. ಮಾಹಿತಿಯ ವಿವಿಧ ಭಾಗಗಳು ಒಟ್ಟಾಗಿ ಕಾರ್ಯನಿರ್ವಹಿಸಿದಾಗ ಅದು ಒಂದು ಸಮಗ್ರ ಅನುಭವವಾಗಿ ರೂಪುಗೊಳ್ಳುತ್ತದೆ.

ಆದರೆ ಸಿದ್ಧಾಂತವು ಬೇರೆ ದಿಕ್ಕಿನಲ್ಲಿ ಚಿಂತಿಸುತ್ತದೆ. ಇದರ ಪ್ರಕಾರ, ಮೆದುಳಿನ ವಿವಿಧ ಭಾಗಗಳ ಜಾಲವು ಪ್ರಮುಖ ಮಾಹಿತಿಯನ್ನು ಮುಂಚೂಣಿಗೆ ತಂದು, ಅದನ್ನು ಮೆದುಳಿನಾದ್ಯಂತ ಪ್ರಸಾರ ಮಾಡುವ ಮೂಲಕ ಅರಿವಿನ ಅನುಭವವನ್ನು ಸೃಷ್ಟಿಸುತ್ತದೆ.

ಈ ಎರಡೂ ಸಿದ್ಧಾಂತಗಳ ವ್ಯತ್ಯಾಸವನ್ನು ಇನ್ನಷ್ಟು ಸರಳವಾಗಿ ಅರ್ಥಮಾಡಿಕೊಳ್ಳಲು, ಒಂದು ಸಂಗೀತ ವಾದ್ಯಗೋಷ್ಠಿಯನ್ನು ಕಲ್ಪಿಸಿಕೊಳ್ಳಬಹುದು. ಅನೇಕ ವಾದ್ಯಗಳು ಪರಸ್ಪರ ಹೊಂದಾಣಿಕೆಯಿಂದ ಒಟ್ಟಾಗಿ ಸಂಗೀತವನ್ನು ಸೃಷ್ಟಿಸಿದಾಗ, ಆ ಸಮಗ್ರ ಅನುಭವವು ವಿವರಿ ಸುವ ಪ್ರಜ್ಞಾ ಅನುಭವದಂತಿದೆ. ಎಲ್ಲ ಭಾಗಗಳ ಏಕೀಕೃತ ಸಹಕಾರದಿಂದ ಉದ್ಭವಿಸುವ ಅನುಭವ.

ಆದರೆ ಅದೇ ವೇದಿಕೆಯಲ್ಲಿ ಒಂದು ನಿರ್ದಿಷ್ಟ ವಾದ್ಯ ಅಥವಾ ಕಲಾವಿದನ ಮೇಲೆ ಬೆಳಕು ಬೀಳುವ ಕ್ಷಣದಲ್ಲಿ, ನಮ್ಮ ಗಮನ ಆ ಭಾಗದತ್ತ ಕೇಂದ್ರೀಕೃತವಾಗುತ್ತದೆ. ಈ ''ಮುಂಚೂಣಿಗೆ ತರುವ'' ಪ್ರಕ್ರಿಯೆಯೇ ವಿವರಿಸುವ ಅರಿವಿನ ಸ್ಥಿತಿಯೊಂದಿಗೆ ಹೋಲಿಕೆ ಮಾಡಬಹುದು.

**ವೈಚಾರಿಕ ಮತ್ತು ವೈಜ್ಞಾನಿಕ ಹಿನ್ನಲೆ**

ಪ್ರಜ್ಞೆಯ ಸ್ವಭಾವವನ್ನು ಅರ್ಥಮಾಡಿಕೊಳ್ಳಲು ವಿಜ್ಞಾನಿಗಳು ಮತ್ತು ವೈಚಾರಿಕರು ದೀರ್ಘ ಕಾಲದಿಂದ ಪ್ರಯತ್ನಿಸುತ್ತಿದ್ದಾರೆ. ನೋವನ್ನು ಅನುಭವಿಸುವುದು, ಮಳೆಬಿಲ್ಲಿನ ಬಣ್ಣಗಳನ್ನು ನೋಡುವುದು ಅಥವಾ ಸಂಗೀತದಿಂದ ಭಾವನಾತ್ಮಕ ಸ್ಪಂದನೆ ಉಂಟಾಗುವುದು. ಇಂತಹ ಅನುಭವಗಳು ಮೆದುಳಿನ ಭೌತಿಕ ಪ್ರಕ್ರಿಯೆಗಳೊಂದಿಗೆ ಹೇಗೆ ಸಂಬಂಧಿಸುತ್ತವೆ ಎಂಬ ಪ್ರಶ್ನೆ ಇನ್ನೂ ಸಂಪೂರ್ಣವಾಗಿ ಉತ್ತರಿಸದ ರಹಸ್ಯವಾಗಿಯೇ ಉಳಿದಿದೆ.

ಈ ಪ್ರಯತ್ನಗಳಿಂದ ಹಲವಾರು ಸಿದ್ಧಾಂತಗಳು ಅಭಿವೃದ್ಧಿ ಹೊಂದಿದ್ದರೂ, ಅವು ಬಹುಸಾರಿ ಪರಸ್ಪರ ವಿಭಿನ್ನ ವಿವರಣೆಗಳನ್ನು ನೀಡುತ್ತವೆ. ಜೊತೆಗೆ, ಒಂದು ಸಿದ್ಧಾಂತಕ್ಕೆ ದೊರೆಯುವ ಪ್ರಾಯೋಗಿಕ ಬೆಂಬಲವು ಬಳಸುವ ವಿಧಾನಗಳ ಮೇಲೆಯೇ ಅವಲಂಬಿತವಾಗಿರುವುದರಿಂದ (ಪೂರ್ವಗ್ರಹಿತ ದೃಷ್ಟಿಕೋಣ) ಉಂಟಾಗುವ ಸಾಧ್ಯತೆಯೂ ಇದೆ.

ಎಲ್ಲರೂ ಒಪ್ಪಿಕೊಳ್ಳಬಹುದಾದ ನರವಿಜ್ಞಾನ ಸಿದ್ಧಾಂತವನ್ನು ಸ್ಥಾಪಿಸುವುದು ವೈದ್ಯಕೀಯ, ಸಾಮಾಜಿಕ ಮತ್ತು ನೈತಿಕ ಕ್ಷೇತ್ರಗಳಲ್ಲಿ ಮಹತ್ವದ ಪರಿಣಾಮಗಳನ್ನು ಉಂಟುಮಾಡಬಹುದು. ಉದಾಹರಣೆಗೆ, ಅಚೇತನ ಸ್ಥಿತಿಯಲ್ಲಿರುವ ರೋಗಿಯು ನಿಜವಾಗಿಯೂ ಯಾವುದೇ ಅನುಭವವಿಲ್ಲದ ಸ್ಥಿತಿಯಲ್ಲಿದ್ದಾನೆಯೇ, ಅಥವಾ ಅವನೊಳಗೆ ಇನ್ನೂ ಯಾವುದೋ ಮಟ್ಟದ ಅರಿವು ಉಳಿದಿದೆಯೇ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಇದು ನೆರವಾಗಬಹುದು. ವಿಜ್ಞಾನದಲ್ಲಿ ಭಿನ್ನಾಭಿಪ್ರಾಯಗಳ ನಡುವೆಯೂ ರಚನಾತ್ಮಕ ಸಹಕಾರದ ಮೂಲಕ ಜ್ಞಾನವನ್ನು ವಿಸ್ತರಿಸ ಬಹುದು ಎಂಬುದನ್ನು ಈ ಅಧ್ಯಯನ ಮತ್ತೊಮ್ಮೆ ತೋರಿಸಿದೆ.

**ಮುಖ್ಯ ಕಂಡುಹಿಡಿಕೆಗಳು**

ಸಿದ್ಧಾಂತದ ಪ್ರಕಾರ, ಜಾಗೃತ ಅನುಭವವು ಮೆದುಳಿನ ವಿವಿಧ ಭಾಗಗಳ ಪರಸ್ಪರ ಸಂಪರ್ಕ ಮತ್ತು ಮಾಹಿತಿ ಹಂಚಿಕೆಯ ಫಲವಾಗಿದೆ. ಅದು ಯಾವುದೇ ಒಂದು ಭಾಗದ ಉತ್ಪನ್ನವಲ್ಲ. ಆದರೆ ಈ ಅಧ್ಯಯನದಲ್ಲಿ ಮೆದುಳಿನ ಹಿಂಭಾಗದಲ್ಲಿ ನಿರೀಕ್ಷಿತ ಮಟ್ಟದ ದೀರ್ಘಕಾಲೀನ ಸಂಪರ್ಕಗಳನ್ನು ಸಂಶೋಧಕರು ಪತ್ತೆಹಚ್ಚಲಿಲ್ಲ. ಇದರಿಂದ ಸಿದ್ಧಾಂತಕ್ಕೆ ಪೂರ್ಣ ಪ್ರಮಾಣದ ಬೆಂಬಲ ದೊರಕಲಿಲ್ಲ ಎಂಬುದು ಸ್ಪಷ್ಟವಾಗಿದೆ.

ಇನ್ನೊಂದೆಡೆ, ಸಿದ್ಧಾಂತವು ಪ್ರಜ್ಞಾ ಅನುಭವವು ಮೆದುಳಿನ ಮುಂಭಾಗದ ಪ್ರದೇಶಗಳಲ್ಲಿ ಉಂಟಾಗುತ್ತದೆ ಎಂದು ಸೂಚಿಸುತ್ತದೆ. ಆದರೆ ಈ ಅಭಿಪ್ರಾಯಕ್ಕೂ ಸಾಕಷ್ಟು ಪ್ರಬಲವಾದ ಸಾಕ್ಷ್ಯ ದೊರಕಲಿಲ್ಲ. ಇದರಿಂದ ಒಂದು ಕುತೂಹಲಕಾರಿ ಸಾಧ್ಯತೆ ಎದುರಾಗುತ್ತದೆ. ನಾವು 'ಚಿಂತನೆ' ಮತ್ತು 'ಯೋಜನೆ'ಗೆ ಮುಖ್ಯವೆಂದು ಭಾವಿಸುವ ಮೆದುಳಿನ ಭಾಗಗಳೇ ಅನುಭ ವದ ಮೂಲ ಕೇಂದ್ರವಾಗಿರಬೇಕೆಂಬುದು ಅನಿವಾರ್ಯವಿಲ್ಲದಿರ ಬಹುದು.

**ಅಧ್ಯಯನ ವಿಧಾನ ಮತ್ತು ಫಲಿತಾಂಶಗಳು**

ಈ ಅಧ್ಯಯನದಲ್ಲಿ 256 ಮಂದಿ ಭಾಗವಹಿಸಿದ್ದರು. ಚೇತನತೆ ಕುರಿತ ಸಂಶೋಧನೆಗಳಲ್ಲಿ ಇದು ಅಪರೂಪದಷ್ಟು ದೊಡ್ಡ ಪ್ರಮಾಣದ ಪ್ರಯೋಗವಾಗಿದೆ. ಭಾಗವಹಿಸಿದವರಿಗೆ ವಿವಿಧ ದೃಶ್ಯ ಸಂಕೇತಗಳನ್ನು ತೋರಿಸಿ, ಮೆದುಳಿನ ರಕ್ತಪ್ರವಾಹ, ಕಾಂತೀಯ ಹಾಗೂ ವಿದ್ಯುತೀಯ ಚಟುವಟಿಕೆಗಳನ್ನು ಮಾಪನ ಮಾಡಲಾಗಿದೆ.

ಮೆದುಳಿನ ದೃಶ್ಯ ಪ್ರದೇಶಗಳು ಮತ್ತು ಇತರ ಭಾಗಗಳ ನಡುವಿನ ಕಾರ್ಯಾತ್ಮಕ ಸಂಪರ್ಕ ಗಳನ್ನು ವಿಶ್ಲೇಷಿಸಲಾಗಿದೆ. ಈ ಮಾಹಿತಿಗಳ ಆಧಾರದಲ್ಲಿ, ದೃಶ್ಯಾನುಭವಕ್ಕೆ ಸಂಬಂಧಿಸಿದ ಮಾಹಿತಿಯನ್ನು ಮೆದುಳಿನಲ್ಲಿ ಯಾವಾಗ ಮತ್ತು ಎಲ್ಲಿಂದ ಸಂಕೇತಭೇದ ಮಾಡಬಹುದು ಎಂಬುದರ ಬಗ್ಗೆ ಹೊಸ ಒಳನೋಟಗಳು ದೊರೆತಿವೆ.

ಇದನ್ನು ಇನ್ನಷ್ಟು ಸರಳವಾಗಿ ಹೇಳುವುದಾದರೆ, ಇದು ಒಂದು ರೇಡಿಯೋ ಪ್ರಸಾರವನ್ನು ಹಿಡಿಯುವಂತಿದೆ. ಅನೇಕ ಸಂಕೇತಗಳು ಸುತ್ತಮುತ್ತಲೂ ಹರಡುತ್ತಿದ್ದರೂ, ಸರಿಯಾದ ಆವೃತ್ತಿಗೆ ಹೊಂದಿಸಿದಾಗ ಮಾತ್ರ ಸ್ಪಷ್ಟವಾದ ಧ್ವನಿಯನ್ನು ಕೇಳಲು ಸಾಧ್ಯವಾಗುತ್ತದೆ. ಅದೇ ರೀತಿ, ಮೆದುಳಿನ ಚಟುವಟಿಕೆಗಳಲ್ಲಿ ಅಡಗಿರುವ ಮಾಹಿತಿಯನ್ನು ಸರಿಯಾದ ಸಮಯ ಮತ್ತು ಸ್ಥಳದಲ್ಲಿ ಗುರುತಿಸಿದಾಗ ಮಾತ್ರ ಅನುಭವದ ಅರ್ಥವನ್ನು ಸ್ಪಷ್ಟವಾಗಿ ಗ್ರಹಿಸಲು ಸಾಧ್ಯವಾಗುತ್ತದೆ.

ಈ ಅಧ್ಯಯನವು ಮತ್ತೊಂದು ಸೂಕ್ಷ್ಮ ಸೂಚನೆಯನ್ನು ನೀಡುತ್ತದೆ. ಭಾಗವು ಯೋಚನೆ, ಯೋಜನೆ ಮತ್ತು ನಿರ್ಧಾರಗಳಿಗೆ ಮಹತ್ವದ್ದಾಗಿದ್ದರೂ ಅದು ಜಾಗೃತ ಅನುಭವದ ಏಕೈಕ ಕೇಂದ್ರವಾಗಿರಬೇಕೆಂಬುದು ಸ್ಪಷ್ಟವಾಗಿಲ್ಲ. ಅದರ ಬದಲು, ಪ್ರಜ್ಞೆ ಸಂವೇದಿ ಗ್ರಹಣ ಪ್ರಕ್ರಿಯೆಗಳೊಂದಿಗೆ ಹೆಚ್ಚು ನಿಕಟವಾಗಿ ಸಂಬಂಧಿಸಿರಬಹುದೆಂಬ ಸೂಚನೆಗಳು ದೊರಕುತ್ತವೆ.

**ವೈಜ್ಞಾನಿಕ ಮಿತಿಗಳು ಮತ್ತು ನಿರ್ಬಂಧಗಳು**

ಯಾವುದೇ ಒಂದು ಪ್ರಯೋಗದಿಂದ ಈ ಸಿದ್ಧಾಂತಗಳಲ್ಲಿ ಒಂದನ್ನು ಸಂಪೂರ್ಣವಾಗಿ ತಳ್ಳಿಹಾಕುವುದು ಸಾಧ್ಯವಿಲ್ಲ ಎಂದು ವಿಜ್ಞಾನಿ ಅನಿಲ್ ಸೆತ್ ಅಭಿಪ್ರಾಯಪಟ್ಟಿದ್ದಾರೆ.

ಈ ಸಿದ್ಧಾಂತಗಳ ಮೂಲ ಊಹೆಗಳು ತುಂಬಾ ವಿಭಿನ್ನವಾಗಿವೆ. ಜೊತೆಗೆ, ಲಭ್ಯವಿರುವ ಪ್ರಯೋಗಾತ್ಮಕ ವಿಧಾನಗಳು ಇನ್ನೂ ಸಾಕಷ್ಟು ನಿಖರವಾಗಿಲ್ಲ. ಆದ್ದರಿಂದ, ಒಂದು ಸಿದ್ಧಾಂತ ಇನ್ನೊಂದನ್ನು ಸ್ಪಷ್ಟವಾಗಿ ಮೀರಿಸುವುದು ಈಗಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ಇದೇ ವಿಜ್ಞಾನದ ಸ್ವಭಾವವೂ ಹೌದು ಪ್ರತಿಯೊಂದು ಉತ್ತರ ಹೊಸ ಪ್ರಶ್ನೆಗಳತ್ತ ದಾರಿ ಮಾಡಿಕೊಡುತ್ತದೆ.

ಈ ಅಧ್ಯಯನವು ಚೇತನತೆ ಮತ್ತು ಬುದ್ಧಿಮತ್ತೆಯ ಬಗ್ಗೆ ನಮ್ಮ ಅರ್ಥವನ್ನು ಇನ್ನಷ್ಟು ವಿಸ್ತರಿಸುತ್ತದೆ. ವಿಶೇಷವಾಗಿ ಅಚೇತನ ಅಥವಾ ಸಸ್ಯಾವಸ್ಥೆಯಂತಹ ಸ್ಥಿತಿಗಳನ್ನು ಅರ್ಥಮಾಡಿ ಕೊಳ್ಳಲು ಇದು ಸಹಾಯಕವಾಗಬಹುದು.

ಪ್ರಜ್ಞೆಯ ಮೂಲಗಳನ್ನು ಹೆಚ್ಚು ನಿಖರವಾಗಿ ಗುರುತಿಸಲು ಸಾಧ್ಯವಾದರೆ, ಪ್ರತಿಕ್ರಿಯೆ ನೀಡದ ರೋಗಿಗಳಲ್ಲಿಯೂ 'ಗುಪ್ತ ಜಾಗೃತ ಸ್ಥಿತಿ'ಯನ್ನು ಪತ್ತೆಹಚ್ಚುವ ಅವಕಾಶ ಹೆಚ್ಚಬಹುದು.

ಬಹುಶಃ ಭವಿಷ್ಯದಲ್ಲಿ, ಹೊರಗಿನಿಂದ ಪ್ರತಿಕ್ರಿಯೆ ಕಾಣಿಸದಿದ್ದರೂ, ರೋಗಿಯೊಳಗೆ ಯಾವುದೋ ಮಟ್ಟದ ಅನುಭವ ಅಥವಾ ಅರಿವು ಉಳಿದಿದೆಯೇ ಎಂಬುದನ್ನು ಹೆಚ್ಚು ನಿಖರವಾಗಿ ಗುರುತಿಸಲು ವಿಜ್ಞಾನಕ್ಕೆ ಸಾಧ್ಯವಾಗಬಹುದು. ಇದು ಕೊನೆಗೆ ನಮ್ಮದೇ ಒಂದು ಮೂಲಭೂತ ಪ್ರಶ್ನೆಗೆ ತಲುಪುತ್ತದೆ ನಾವು ಏಕೆ ಮತ್ತು ಹೇಗೆ ಅನುಭವಿಸುತ್ತೇವೆ?

**ಅಂತಿಮ ಸಾರಾಂಶ**

ಏಳು ವರ್ಷಗಳ ದೀರ್ಘಾವಧಿಯ ಈ ಅಧ್ಯಯನವು ಚೇತನತೆಯ ಪ್ರಮುಖ ಎರಡು ಸಿದ್ಧಾಂತಗಳಲ್ಲಿ ಯಾವುದನ್ನೂ ಅಂತಿಮವಾಗಿ ದೃಢಪಡಿಸದಿದ್ದರೂ, ಮೆದುಳು ಜಾಗೃತ ಅನು ಭವವನ್ನು ಹೇಗೆ ರೂಪಿಸುತ್ತದೆ ಎಂಬುದರ ಬಗ್ಗೆ ಹೊಸ ಮತ್ತು ಆಳವಾದ ಅರಿವನ್ನು ನೀಡಿದೆ.

ಇದಕ್ಕಿಂತ ಮುಖ್ಯವಾಗಿ, ಭಿನ್ನಾಭಿಪ್ರಾಯಗಳ ನಡುವೆಯೂ ತೆರೆದ ವಿಜ್ಞಾನಾಧಾರಿತ ಸಹಕಾರದ ಮೂಲಕ ಜ್ಞಾನವನ್ನು ವಿಸ್ತರಿಸಬಹುದು ಎಂಬುದನ್ನು ಈ ಸಂಶೋಧನೆ ತೋರಿಸಿದೆ.

ಚೇತನತೆಯ ರಹಸ್ಯ ಇನ್ನೂ ಸಂಪೂರ್ಣವಾಗಿ ಬಿಚ್ಚುಗೊಂಡಿಲ್ಲ. ಆದರೆ ಮಾನವ ಮೆದುಳು ತನ್ನನ್ನೇ ಅರ್ಥಮಾಡಿಕೊಳ್ಳಲು ನಡೆಸುತ್ತಿರುವ ಈ ಪ್ರಯತ್ನ, ಆ ರಹಸ್ಯದತ್ತ ನಮ್ಮನ್ನು ಇನ್ನೊಂದು ಹೆಜ್ಜೆ ಹತ್ತಿರಕ್ಕೆ ಕರೆದೊಯ್ಯುತ್ತಿದೆ.

**-ಪ್ರೊ. ಎಲ್.ಎ.ಸತೀಶ್, ಭೌತಶಾಸ್ತ್ರ ಪ್ರಾಧ್ಯಾಪಕರು**

# ಒಂದೇ ದೋಣಿಯ ಪ್ರಯಾಣಿಕರು



**ಜೀವನದಲ್ಲಿ** ನಾವು ಎದುರಿಸುವ, ಅನುಭವಿಸುವ ಕಷ್ಟ ನಷ್ಟಗಳೇನೇ ಇರಲಿ ನಮ್ಮ ಪಾಲಿಗೆ ಬಂದುದನ್ನು ಸ್ವೀಕರಿಸಿ ಜೀವಿಸುವ ರೀತಿ ನಮ್ಮ ಆಯ್ಕೆಯದ್ದಾಗಿರುತ್ತದೆ. ಈ ಆಯ್ಕೆ ಮಾಡುವಾಗ ನಮ್ಮ ಸಹಾಯಕ್ಕೆ ಬರುವುದು ನಮ್ಮ ಸಂಸ್ಕಾರ, ನಮ್ಮ ಮನಸ್ಸು , ನಮ್ಮ ಆತ್ಮವಿಶ್ವಾಸ, ಮತ್ತು ನಾವು ಕಂಡುಕೊಂಡ ಜೀವನಾದರ್ಶನವಲ್ಲದೆ ಬೇರೇನೂ ಅಲ್ಲ.

ಶಿವರಾಂ ಮತ್ತು ಕಲ್ಯಾಣಿಯವರಿಗೆ ಆರತಿಗೊಬ್ಬಳು ಕೀರ್ತಿಗೊಬ್ಬ ಎನ್ನುವಂತೆ ಇಬ್ಬರು ಮಕ್ಕಳು. ಅವರಿಬ್ಬರೂ ಅವರವರ ಜೀವನದಲ್ಲಿ ತೃಪ್ತರು. ಶಿವರಾಂರವರಿಗೆ ಹೇಳಿಕೊಳ್ಳುವಂಥಹ ತಲೆಬಿಸಿಗಳೇನೂ ಇರಲಿಲ್ಲ. ಅಮೇರಿಕಾದಲ್ಲಿದ್ದ ಮಗ ಅಲ್ಲಿಗೆ ಬಂದಿರಲು ಒತ್ತಾಯಿಸುತ್ತಿದ್ದ. ಆದರೆ, ಅಮೇರಿಕಾದ ಮನುಷ್ಯ ಮನುಷ್ಯರಿಗೆ ಆತ್ಮೀಯತೆಯಿಲ್ಲದ ವ್ಯವಸ್ಥೆ ಅವರಿಗೆ ಉಸಿರು ಕಟ್ಟಿಸುತ್ತಿತ್ತು. ಮಗ ಸೊಸೆ ಇಬ್ಬರೂ ದುಡಿಯುವವರು. ಮೊಮ್ಮಕ್ಕಳಂತೂ ಅಲ್ಲೇ ಹುಟ್ಟಿ ಬೆಳೆದವರು. ಅಲ್ಲಿಯ ಸಂಸ್ಕೃತಿಯನ್ನೇ ಮೈಗೂಡಿಸಿಕೊಂಡವರು. ಅಲ್ಲಿಗೆ ಎರಡು ಬಾರಿ ಹೋದಾಗಲೂ ಒಂದು ರೀತಿಯ ಪರಕೀಯತೆ ಅವರನ್ನು ಕಾಡಿಸಿತ್ತು. ಮಗಳು ಆಸ್ಟ್ರೇಲಿಯಾಕ್ಕೆ ಬರಲು ಪುಸಲಾಯಿಸುತ್ತಿದ್ದಳು. ಮೊಮ್ಮಕ್ಕಳ ವ್ಯಾಮೋಹ ಸೆಳೆಯುತ್ತಿದ್ದರೂ ಯಂತ್ರದಂತೆ ದುಡಿಯುತ್ತಿದ್ದ ಅಳಿಯನ ಹತ್ತಿರ ಇರಲು ಕಲ್ಯಾಣಿಗೆ ಸಂಕೋಚ. ಮನಸ್ಸು ಬಿಚ್ಚಿ ಮಾತಾಡದ ಅಳಿಯ, ಕಲ್ಲನ್ನಾದರೂ ಮಾತಾಡಿಸುವ ಪತಿ ಸರಿಯಾದ ಜತೆ ಅಲ್ಲವೆಂದು ಅವರಿಗನಿಸಿತ್ತು. ಅಳಿಯ ಒಳ್ಳೆಯವನೇ. ಆದರೆ, ಯಾರೊಡನೆಯೂ ಸಲುಗೆ ಇಲ್ಲ, ಅವನಾಯಿತು ಅವನ ಕೆಲಸವಾಯಿತು ಎನ್ನುವ ಜಾತಿಗೆ ಸೇರಿದವನು. ಅದೂ ಒಂದು ರೀತಿಯಲ್ಲಿ ಉಸಿರುಗಟ್ಟಿಸುವ ವಾತಾವರಣವೇ. ಅಲ್ಲಿಗೆಲ್ಲ ಹೋಗಿ ಅಲ್ಲಿಯ ಪರಿಸರಕ್ಕೆ ಒಗ್ಗಿಕೊಳ್ಳಲಾಗದೆ ಒದ್ದಾಡುವುದು ಬೇಡವೆಂದು ಅವರು ಊರಲ್ಲೇ ಇದ್ದರು. ಶಿವರಾಂಗೆ ಸಿಗುತ್ತಿದ್ದ ಪಿಂಚಣಿಯಲ್ಲಿ ಜೀವನದ ನಿರ್ವಹಣೆಗೆ ತೊಂದರೆ ಇರಲಿಲ್ಲ. ಮಗ ಆಗಾಗ ಹಣ ಕಳುಹಿಸಿಕೊಡುತ್ತಿದ್ದ. ಆದರೆ ಮಕ್ಕಳ, ಮೊಮ್ಮಕ್ಕಳ ಸಾಮಿಪ್ಯ ಬಯಸುತ್ತಿದ್ದ ಅವರಿಗೆ ಕೆಲವೊಮ್ಮೆ ಬದುಕು ಬಹಳ ಬರಡೆನಿಸುತ್ತಿತ್ತು ಒಂಟಿತನ ಅವರನ್ನು ಆವರಿಸುತ್ತಿತ್ತು.

ನಿಜ ಸಂಗತಿಯೆಂದರೆ ಸೀನಿಯರ್ ಸಿಟಿಜನ್ ಎಂದು ನಾವು ಯಾರನ್ನು ಕರೆಯುತ್ತೇವೆಯೋ ಅವರನ್ನೆಲ್ಲ ಕಲೆಹಾಕಿ ಅವರ ಬಾಯಿಯಿಂದ ಅವರವರ ಜೀವನದ ಕತೆ ಕೇಳಿದರೆ ಒಬ್ಬೊಬ್ಬರದ್ದು ಒಂದೊಂದು ಕತೆಯಾದರೂ ಕತೆಯೊಳಗಿರುವ ವ್ಯಥೆ ಮಾತ್ರ ಒಂದೇ ಆಗಿರುತ್ತದೆ.

ಶಿವರಾಂ ಅವರಿಗೆ ವಾಮನರಾಯರ ಪರಿಚಯವಾದದ್ದೂ ಆಕಸ್ಮಿಕ. ಒಮ್ಮೆ ಡಾಕ್ಟರ್ ಅವಿನಾಶ್‌ರವರ ಕ್ಲಿನಿಕ್‌ಗೆ ಹೋಗಿದ್ದಾಗ ಅಲ್ಲಿ ಅವರ ಭೇಟಿಯಾಗಿತ್ತು. ಅಲ್ಲಿ ಆದ ಪರಿಚಯ ಗೆಳೆತನಕ್ಕೆ ತಿರುಗಿತ್ತು. ಮನೆಗಳೂ ಹತ್ತಿರದಲ್ಲಿ ಇದ್ದುದರಿಂದ ಆಗಾಗ ಭೇಟಿಯಾಗುವುದು ಸಾಧ್ಯವಾಗಿ ಗೆಳೆತನ ಗಟ್ಟಿಯಾಗಿತ್ತು.

ವಾಮನರಾಯರು ಮತ್ತು ವಸಂತಲಕ್ಷ್ಮಿಯವರಿಗೆ ಮಕ್ಕಳಿರಲಿಲ್ಲ. ತಾವು ದುಡಿಯಲು ಸಾಧ್ಯವಾಗುವ ತನಕ ಹಳ್ಳಿಗಳಲ್ಲಿ ದುಡಿದು ಇನ್ನು ತಮ್ಮ ಕೈಯಿಂದ ಸಾಧ್ಯವಿಲ್ಲವೆಂದು ಅನಿಸಿದಾಗ, ಹಳ್ಳಿಯ ಆಸ್ತಿಯನ್ನು ಮಾರಿ ಪಟ್ಟಣ ಸೇರಿದ್ದರು. ಒಂದು ಮನೆಕಟ್ಟಿಸಿ ಮೇಲೆ ಬಾಡಿಗೆಗೆ ಕೊಟ್ಟು ಕೆಳಗಿನ ಮನೆಯಲ್ಲಿ ವಾಸಿಸುತ್ತಿದ್ದರು. ಮನೆ ಕೆಲಸಕ್ಕೆ ಒಬ್ಬ ಹುಡುಗನನ್ನು ಇಟ್ಟುಕೊಂಡಿದ್ದರು. ಜೀವನವಿಡೀ ಮಕ್ಕಳಿಲ್ಲವೆನ್ನುವ ಕೊರಗಿನಲ್ಲಿ ಬದುಕಿದ್ದ ಇವರಿಗೆ ತಮ್ಮ ಕೊನೆಯ ಕಾಲ ಹೇಗೋ ಎನ್ನುವ ಹೆದರಿಕೆ. ಇದನ್ನು ಶಿವರಾಂರೊಡನೆ ಹಂಚಿಕೊಂಡಾಗ ಅವರು ನಕ್ಕು, ಆಆಇಲ್ಲೇ ಜೀವನದ ವೈಪರೀತ್ಯ ಅಡಗಿರುವುದು ನೋಡಿ. ನಿಮಗೆ ಮಕ್ಕಳಿಲ್ಲ, ನಿಮ್ಮ ಹತ್ತಿರ ಯಾರೂ ಇಲ್ಲ. ಇದು ನೀವು ಒಪ್ಪಿಕೊಂಡು ಬಂದ ಸತ್ಯ. ನನಗೆ ಇಬ್ಬರು ಮಕ್ಕಳು ನಾಲ್ವರು ಮೊಮ್ಮಕ್ಕಳು ಎಲ್ಲಾ ಇದ್ದಾರೆ. ಅವರ ಸಾಮಿಪ್ಯ ಸುಖವನ್ನು ನಾವು ಅನುಭವಿಸಿದ್ದೇವೆ. ಈಗ ಅವರ ಸಾಮಿಪ್ಯ ನಮಗೆ ಬೇಕೆನಿಸುವಾಗ ಅವರೆಲ್ಲೋ ನಾವೆಲ್ಲೋ, ನಮ್ಮನ್ನ ಕಾಡುವ ಒಂಟಿತನ ನಿಮಗಿಂತ ಗಾಢವಾದದ್ದು. ನಿಮಗೆ ಇಲ್ಲ ಎನ್ನುವ ಒಂದೇ ನೋವು. ನಮಗೆ ಇದ್ದೂ ಇಲ್ಲ ಎನ್ನುವ ನೋವು.

ಶಿವರಾಂ ದಿಲ್ದಾರ್ ಮನುಷ್ಯ. ಅವರ ಮನೆಯಲ್ಲಿ ಯಾವಾಗ ನೋಡಿದರು ನೆಂಟರು, ಗೆಳೆಯರು ಇರುತ್ತಿದ್ದರು. ವಾಮನರಾಯರು ಇದಕ್ಕೆ ವ್ಯತಿರಿಕ್ತ ಪತಿ ಪತ್ನಿ ಇಬ್ಬರದ್ದೂ ಕೈ ಸ್ವಲ್ಪ ಗಿಡ್ಡ. ಹಣ ಇದ್ದರೂ ಖರ್ಚು ಮಾಡುವುದೆಂದರೆ ಇಬ್ಬರಿಗೂ ಬೇಸರ, ನಾಳೆ ಏನಾದರೂ ಕೈಕಾಲು ಬಿದ್ದರೆ ನೋಡಿಕೊಳ್ಳಲು ಮಕ್ಕಳೂ ಇಲ್ಲ. ಕೈಯಲ್ಲಿ ಹಣವಿದ್ದರೆ ಯಾರಾದರೂ ಅದರ ಆಸೆಗಾದರೂ ನೋಡಿಕೊಂಡಾರು ಎನ್ನುವ ಭ್ರಮೆ. ಹಾಗಾಗಿ ಜಿಪುಣತನದಿಂದ ಖರ್ಚುಮಾಡುತ್ತಿದ್ದರು. ಇದರಿಂದ ವಾಮನರಾಯರ ತಮ್ಮನ ಮಕ್ಕಳು. ವಸಂತಲಕ್ಷ್ಮಿಯ ಅಕ್ಕ ತಂಗಿಯರ ಮಕ್ಕಳು ಯಾರೂ ಅಲ್ಲಿ ಒಂದು ದಿನಕ್ಕಿಂತ ಹೆಚ್ಚಿಗೆ ನಿಲ್ಲಲು ಇಷ್ಟಪಡುತ್ತಿರಲಿಲ್ಲ. ಸ್ವಲ್ಪವಾದರೂ ಅವರನ್ನು ಹಚ್ಚಿಕೊಂಡಿದ್ದವಳೆಂದರೆ ವಾಮನರಾಯರ ತಂಗಿಯ ಮಗಳು ಕೀರ್ತಿ. ಅವಳಿಗೆ ಅತ್ತೆ ಮಾವನ ಮೇಲೆ ವಿಪರೀತ ಅಕ್ಕರೆ, ಅವಳು ಚಿಕ್ಕವಳಿರುವಾಗ ವಸಂತಲಕ್ಷ್ಮಿಗೆ ಅವಳನ್ನು ದತ್ತಕ್ಕೆ ತೆಗೆದುಕೊಳ್ಳಲು ಬಹಳ ಮನಸ್ಸಿತ್ತು. ಆದರೆ ಅವಳ ತಂದೆ ಒಪ್ಪದೆ ಅದು ಸಾಧ್ಯವಾಗಿರಲಿಲ್ಲ. ವಸಂತಲಕ್ಷ್ಮಿಗೆ ಅವಳ ಮೇಲೆ ಯಾವಾಗಲೂ ಹೆಚ್ಚಿನ ಪ್ರೀತಿ, ಯಾರಿಗಾದರೂ ಏನಾದರೂ ಕೈಯೆತ್ತಿಕೊಡುತ್ತಿದ್ದರೆ ಅದು ಕೀರ್ತಿಗೆ ಮಾತ್ರ.

ಕೀರ್ತಿಗೆ ಅವರು ಈ ಪ್ರಾಯದಲ್ಲಿ ಆ ಕೆಲಸದವನೊಡನೆ ಏಗಾಡುವುದನ್ನು ನೋಡಿ ಬೇಸರ. ಆ ಕೆಲಸದ ಹುಡುಗ ಅವರನ್ನು ಬಹಳ ಗೋಳಾಡಿಸುತ್ತಿದ್ದ. ಅವರಿಗೆ ಬೇಕಾದ ಹಾಗೆ ಅಡುಗೆ ಮಾಡಿ ಹಾಕದೇ ಅವನು ಮಾಡಿ ಹಾಕಿದ್ದನ್ನು ಅವರು ಬಾಯಿ ಮುಚ್ಚಿ ತಿನ್ನಬೇಕಿತ್ತು. ಇಬ್ಬರೂ ಅವನಿಗೆ ಹೆದರಿ ಅವನೇನು ಮಾಡಿದರೂ ಬಾಯಿಮುಚ್ಚಿ ಸಹಿಸುತ್ತಿದ್ದರು. ಈ ಹುಡುಗನೋ ಒಂದು ದಿನ ಹಣಕ್ಕಾಗಿ ಈ ಮುದುಕರನ್ನು ಕೊಂದರೂ ಕೊಂದನೇ, ಕೇಳುವವರಿಲ್ಲ. ತಿಂಗಳಿಗೆ ಬರುವ ಬಾಡಿಗೆ ಮತ್ತು ಬಡ್ಡಿ ಹಣದಲ್ಲಿ ಆರಾಮ ಜೀವನ ನಡೆಸುವುದು ಸಾಧ್ಯ ಇರುವಾಗ ಇವನು ಹಾಕಿದ್ದನ್ನು ಹಾಕಿದ ಹೊತ್ತಿಗೆ ಅವನ ಮರ್ಜಿಗೆ ತಕ್ಕಂತೆ ತಿಂದುಕೊಂಡು ಬದುಕುವುದು ಯಾಕೆ, ಇದ್ದೂ ಇಲ್ಲದ ಹಾಗೆ ಬದುಕುವ ಅವರ ಅವಸ್ಥೆ ಅವಳಿಗೆ ಬೇಸರ ತರಿಸುತ್ತಿತ್ತು. ಯಾರಿಗಾಗಿ ಇವರು ಹಣ ಉಳಿಸಬೇಕು? ಇದ್ದದ್ದನ್ನು ಖರ್ಚುಮಾಡಿಕೊಂಡು ಸುಖವಾಗಿರಬಾರದೇ ಎಂದು ಯೋಚಿಸುತ್ತಿದ್ದಳು.

ಕೀರ್ತಿ ಈ ವಿಚಾರದಲ್ಲಿ ಅತ್ತೆ ಮಾವನೊಡನೆ ಮಾತಾಡಿದಾಗ ಅವರಿಂದ ಬಂದ ಉತ್ತರ ಇದ್ದ ಹಣ ಖರ್ಚು ಮಾಡಿದರೆ ಮತ್ತೆ ನಮಗೇನಾದರೂ ಆದರೆ ನೋಡಿಕೊಳ್ಳುವವರು ಯಾರು? ಹಣದ ಆಸೆಗೆ ನಿಮ್ಮನ್ನ ನೋಡುವವರು ಎಷ್ಟು ಚೆನ್ನಾಗಿ ನೋಡಿಕೊಂಡಾರು, ಅವರು ನಿಮ್ಮ ಹಣವನ್ನು ಖರ್ಚು ಮಾಡಲಿಕ್ಕೇ ಬಿಡಲಿಕ್ಕಿಲ್ಲ. ನಿಮಗೆ ಬೇಕಾದುದಕ್ಕೆ ಖರ್ಚುಮಾಡಿಕೊಂಡು ಸುಖವಾಗಿರಬಾರದೇ?

ಎಷ್ಟು ಹೇಳಿದರೂ ಅರ್ಥಮಾಡಿಕೊಳ್ಳದ ಅತ್ತೆ ಮಾವನಲ್ಲಿ ಕೀರ್ತಿಗೆ ಸಿಟ್ಟೂ ಬರುತ್ತಿತ್ತು. ತಾನೇ ಏನಾದರೂ ಉಪಾಯಮಾಡಬೇಕೆಂದು ಕೀರ್ತಿ ಯೋಚಿಸುತ್ತಿದ್ದಳು. ಹೇಗಾದರೂ ಅವರನ್ನು ಒಪ್ಪಿಸಿ ಚೆನ್ನಾಗಿರುವ ವೃದ್ಧಾಶ್ರಮಕ್ಕೆ ಸೇರಿಸಬೇಕು ಎಂದವಳ ಯೋಚನೆಯಾಗಿತ್ತು. ಶಿವರಾಂರವರ ಗೆಳೆತನವಾದ ಮೇಲೆ ಎರಡೂ ಮನೆಗಳ ಮಧ್ಯೆ ಓಡಾಟ ಶುರುವಾಗಿ ಎರಡೂ ಕುಟುಂಬಗಳ ಒಂಟಿತನಕ್ಕೆ ಸ್ವಲ್ಪ ಪರಿಹಾರ ಸಿಕ್ಕಿದಂತಾಗಿತ್ತು. ವಾಮನರಾಯರ ಮತ್ತು ವಸಂತಲಕ್ಷ್ಮಿಯವರ ಮಾನಸಿಕ ಒದ್ದಾಟ ನೋಡಿದಾಗಲೆಲ್ಲ ಶಿವರಾಂರವರು, ನೀವಿಬ್ಬರೂ ಒಮ್ಮೆ ನನ್ನಕ್ಕನನ್ನು ಭೇಟಿಯಾಗಬೇಕು. ಅವರ ಜೀವನದ ಎದುರು ನಮ್ಮದೆಲ್ಲ ಏನೂ ಅಲ್ಲ. ಅವರೊಡನೆ ಮಾತಾಡಿದರೆ ಜೀವನದ ನಿಲುವುಗಳೇ ಬದಲಾಗುತ್ತವೆ. ನನಗೆ ಬೇಸರವಾದಾಗಲೆಲ್ಲ ನಾನು ಕಲ್ಯಾಣಿ ಸೀದಾ ಎದ್ದು ನನ್ನಕ್ಕನಲ್ಲಿ ಹೋಗಿ ಬರುತ್ತೇವೆ. ಅವರನ್ನು ನೋಡಿದರೆ ಸಾಕು ಜೀವಿಸುವ ಎದೆಗಾರಿಕೆ ಹೆಚ್ಚುತ್ತದೆ.

ಹಾಗಾದರೆ ಇನ್ನೊಮ್ಮೆ ನಮ್ಮನ್ನು ಕರೆದುಕೊಂಡು ಹೋಗಿ, ಆ ಕೀರ್ತಿ ನೋಡಿದರೆ ನಿಮಗೆ ವೃದ್ಧಾಶ್ರಮಕ್ಕೆ ಸೇರಿದರೆ ಏನು ಎಂದು ಕಿರಿಕಿರಿ ಮಾಡುತ್ತಿದ್ದಾಳೆ ನಮಗೆ ಏನು ಮಾಡುವುದೆಂದೂ ತಿಳಿಯೋದಿಲ್ಲ. ನಿಮ್ಮಕ್ಕನ ಹತ್ತಿರ ಮಾತಾಡಿದರೆ ನಮ್ಮ ಸಮಸ್ಯೆಗಳಿಗೆ ಉತ್ತರ ಸಿಗುವುದೋ ನೋಡೋಣ. ನಮಗೆಲ್ಲ ನಮ್ಮ ಸಮಸ್ಯೆಗಳಿಗೆ ಉತ್ತರ ಇದೆ. ಆದರೆ, ನಮ್ಮ ಅಕ್ಕ ಎದುರಿಸುವ ಸಮಸ್ಯೆಗಳಿಗೆ ಉತ್ತರವೇ ಇಲ್ಲ. ಆದರೂ ಅವರು ಹೇಗೆ ಸಮಸ್ಯೆಗಳನ್ನು ಎದುರಿಸಿ ಸಾಮಾನ್ಯವೆನ್ನುವಂತೆ ಜೀವಿಸುತ್ತಿದ್ದಾರೆಂದು ನೀವು ನೋಡಬೇಕು.

ಹಾಗಾದರೆ ಯಾವಾಗ ಭೇಟಿ ಮಾಡಿಸುತ್ತೀರಿ ಹೇಳಿ. ಸದ್ಯದಲ್ಲೇ, ಅವರು ಅವರ ಕಾಲಿನ ಆಪರೇಷನ್‌ಗೆ ಬರ್ತಿದ್ದಾರೆ. ಅವರನ್ನು ನೋಡಿದರೆ ನಮ್ಮ ಜೀವನ ಸಂಘರ್ಷಗಳು ಏನೂ ಅಲ್ಲವೆಂದು ಅನಿಸುತ್ತದೆ. ಅವರು ಬದುಕುತ್ತಿರುವುದೂ ತನ್ನ ಜವಾಬ್ದಾರಿ ಕಳಚಿ ಸಾಯುವುದು ಸಾಧ್ಯವಿಲ್ಲ ಎನ್ನುವ ಅನಿವಾರ್ಯತೆಯಿಂದ. ಅವರ ಮಾನಸಿಕ ಸ್ಥೈರ್ಯ, ಜೀವಿಸಲೇ ಬೇಕೆನ್ನುವ ಹಟ ಅವರನ್ನು ಜೀವಂತವಾಗಿಸಿದೆಯಲ್ಲದೆ ಬೇರೇನೂ ಅಲ್ಲ.ಬಿಟಿ ಶಿವರಾಂ ಬಾವುಕರಂತೆ ನುಡಿಯುವಾಗ ವಾಮನರಾಯರು.

ಅವರಿಗೆಷ್ಟು ಪ್ರಾಯವಾಗಿದೆ? ಎಪ್ಪತ್ತು, ಮತ್ತೇಕೆ ಜೀವಿಸಬೇಕೆನ್ನುವ ಹಠ? ಜೀವಿಸುವುದು ಅವರ ಮಟ್ಟಿಗೆ ಅನಿವಾರ್ಯತೆ. ಹಾಗೆಂದರೆ? ಮೊದಲು ಅವರನ್ನು ನೋಡಿ, ಆಮೇಲೆ ಅವರ ಕತೆ ಹೇಳುತ್ತೇನೆ. ಶಿವರಾಂ ಹೇಳಿದಂತೆ ಅವರಕ್ಕ ರುಕ್ಕಿಣಿ ಬಂದಿದ್ದರು. ವಾಮನರಾಯರಿಗೆ, ವಸಂತಲಕ್ಷ್ಮಿಗೆ ಅವರ ಪರಿಚಯವೂ ಆಗಿತ್ತು. ಕಲ್ಯಾಣಿ ಅವರ ಶುಶ್ರೂಷೆ ಮಾಡಲು ತುದಿಗಾಲಲ್ಲಿ ನಿಂತಿದ್ದರು. ಅತ್ತಿಗೆ ಬಂದರೆ ಇಡೀ ಮನೆಗೆ ಜೀವಕಳೆ ಬಂದಂತೆ ಎಂದು ವಸಂತಲಕ್ಷ್ಮಿಯವರೊಡನೆ ಹೇಳುವಾಗ ಕಲ್ಯಾಣಿಯವರಲ್ಲಿ ಯಾವಾಗಲೂ ಕಂಡು ಬರುತ್ತಿದ್ದ ಒಂಟಿತನದ ಭಾವ ಕಿಂಚಿತ್ತೂ ಗೋಚರಿಸುತ್ತಿರಲಿಲ್ಲ.

ಎಪ್ಪತ್ತರ ಹರೆಯದ ರುಕ್ಕಿಣಿ ಜೀವಂತಿಕೆಯ ಮೂರ್ತಿ, ಕಾಲು ನೋವಿನ ಕಾರಣದಿಂದ ಹೆಚ್ಚು ಓಡಾಡುತ್ತಿರಲಿಲ್ಲ. ಆದರೆ ಕುಳಿತಲ್ಲಿಯೇ ಎಲ್ಲರೊಡನೆ ಮಾತಾಡುತ್ತಿದ್ದ ರೀತಿ, ಮಾತು ಮಾತಿಗೆ ಎಬ್ಬಿಸುತ್ತಿದ್ದ ನಗೆ ಹೊನಲು ಎಲ್ಲರನ್ನೂ ಅವರೆಡೆಗೆ ಸೆಳೆಯುತ್ತಿತ್ತು. ಅವರ ಹಸನ್ಮುಖ ಅವರ ಮುಖಕ್ಕೆ ಒಂದು ವಿಶಿಷ್ಟ ಶೋಭೆ ತಂದಿತ್ತು. ಅವರ ವಯಸ್ಸು ಮತ್ತು ಅವರಿಗಿದ್ದ ಸಕ್ಕರೆ ಕಾಯಿಲೆಯಿಂದ ಅವರಿಗೆ ಆಪರೇಷನ್ ಮಾಡಿಸಲು ಯಾರಿಗೂ ಮನಸ್ಸಿರಲಿಲ್ಲ. ಆದರೆ, ಅವರಿಗೆ ಆಚೆ ಈಚೆ ಓಡಾಡದ ಜೀವನ ಬೇಸರ ತರಿಸಿತ್ತು. ತಾನೇನೂ ಈಗಲೇ ಸಾಯುವುದಿಲ್ಲ. ನನ್ನ ಕರ್ಮ ಇನ್ನೂ ಮುಗಿದಿಲ್ಲ. ಬದುಕಿದ್ದಷ್ಟು ದಿನ ಓಡಾಡುವುದು ಆಗಲೇ ಬೇಕಲ್ಲ. ಓಡಾಡಬೇಕಿದ್ದರೆ ಇನ್ನೊಂದು ಆಪರೇಷನ್ ಆಗಲೇ ಬೇಕೆನ್ನುವ ಹಠದಲ್ಲಿ ಇದ್ದರು. ಅವರ ಹಟಕ್ಕೆ ತಲೆದೂಗಿದ್ದವರು ತಮ್ಮ ಶಿವರಾಂ ಮಾತ್ರ. ಡಾಕ್ಟರು ಒಂದು ಲಕ್ಷ ಹಣ ಬೇಕಾದೀತು ಎಂದಿದ್ದರು. ಖರ್ಚು ಎಷ್ಟಾದರೂ ಚಿಂತಿಲ್ಲ ಅಕ್ಕ ನಡೆದಾಡುವಂತಾದರೆ ಸಾಕು ಎಂದು ಅವರಿಗನಿಸಿತ್ತು. ಅದರಿಂದಾಗಿ ಅರ್ಧ ಖರ್ಚು ಅವರೇ ಕೊಡಲು ಮುಂದಾಗಿದ್ದರು. ರುಕ್ಕಿಣಿಯವರ ಮೇಲಿನ ಪ್ರೀತಿಯಿಂದ ಕುಟುಂಬದವರೆಲ್ಲರೂ ಅವರ ಆಪರೇಷನ್‌ಗೆ ತಮ್ಮಿಂದಾದಷ್ಟು ಧನ ಸಹಾಯ ಮಾಡಲು ಮುಂದೆ ಬಂದಿದ್ದರು.

ರುಕ್ಮಿಣಿಯವರು ಬಂದ ಮೂರನೇ ದಿನಕ್ಕೆ ಅವರ ಆಪರೇಷನ್ ಆಗಿತ್ತು. ಶಿವರಾಂ ಆಸ್ಪತ್ರೆಯಲ್ಲಿ ಅಕ್ಕನ ಹತ್ತಿರವೇ ಇದ್ದುದರಿಂದ ವಾಮನರಾಯರಿಗೆ ನಾಲ್ಕು ದಿನ ಅವರ ಭೇಟಿ ಆಗಿರಲಿಲ್ಲ. ಆಪರೇಷನ್ ಆದ ಮರು ದಿನ ವಾಮನರಾಯರೂ ಹೆಂಡತಿಯೊಡಗೂಡಿ ಆಸ್ಪತ್ರೆಗೆ ಹೋಗಿ ನೋಡಿ ಬಂದಿದ್ದರು.

ನಾಲ್ಕನೇ ದಿನ ಗೆಳೆಯನನ್ನು ಹುಡುಕಿಕೊಂಡು ಬಂದ ಶಿವರಾಂ, ಅಂತೂ ಸಾವಿನೊಡನೆ ಸೆಣಸಾಡಿ ಈ ಬಾರಿಯೂ ಅಕ್ಕ ಗೆದ್ದರು. ವಿಪರೀತ ಬ್ಲೀಡಿಂಗ್ ಆಗಿ ಅವರ ಪಲ್ಸ್ ರೇಟ್ ಇಳಿದಿತ್ತು. ಅವರ ಮಕ್ಕಳ ಪುಣ್ಯ ಬಹಳ ದೊಡ್ಡದು. ವಾಮನರಾಯರು ಕೇಳಲೋ ಬೇಡವೋ ಎನ್ನುವ ಸಂಶಯದಲ್ಲಿಯೇ, ನಾನು ಹೀಗನ್ನುತ್ತೇನೆಂದು ಬೇಸರಿಸಬೇಡಿ. ಈ ಪ್ರಾಯದಲ್ಲಿ ಅಷ್ಟು ಮೇಜರ್ ಆಪರೇಷನ್‌ಗೆ ಅವರು ಒಪ್ಪಿದ್ದೇ ಆಶ್ಚರ್ಯ. ಇನ್ನೂ ಅವರಿಗೆ ಸಾವನ್ನು ಜಯಿಸುವ ಹಠ ಏಕೆ?

ಶಿವರಾಂ ಗೆಳೆಯನ ಮುಖವನ್ನೇ ನೋಡುತ್ತಾ ನಾನು ಅವತ್ತೇ ಹೇಳಿದ್ದೇನೆ. ಇದು ಸಾವನ್ನು ಜಯಿಸಬೇಕೆನ್ನುವ ಹಠವಲ್ಲ. ಅವರು ಸಾಯುವ ಹಾಗಿಲ್ಲ. ಅವರ ಮೇಲಿರುವ ಜವಾಬ್ದಾರಿ ಅಂಥಾದ್ದು. ಬದುಕು ಬೇಡವೆಂದರೂ ಅವರು ಬದುಕಲೇಬೇಕು. ಬದುಕು ಅವರಿಗೆ ಅನಿವಾರ್ಯ. ಅವರುಂಡ ಕಷ್ಟಕ್ಕೆ ಬೇರೆಯಾರಾದರೂ ಆಗಿದ್ದರೆ ಯಾವಾಗಲೋ ಪ್ರಾಣ ಕಳೆದುಕೊಳ್ಳುತ್ತಿದ್ದರು. ಏನು ಕಷ್ಟ? ಅವರನ್ನು ನೋಡುವಾಗ ಅವರು ಸುಖದಿಂದ ತಮ್ಮ ಜೀವನ ಕಳೆದಿರಬೇಕೆಂದು ಅನಿಸುವುದಿಲ್ಲ?

ಅದಕ್ಕೇ ಹೇಳುವುದು ಅದು ಅವರು ಮೈಗೂಡಿಸಿಕೊಂಡಿರುವ ಸಂಸ್ಕಾರವೆಂದು. ನನ್ನಕ್ಕ ಜೀವನದ ಕಷ್ಟಗಳಿಗೆ ಹೆದರಿ ಓಡಿದವರಲ್ಲ. ಕಷ್ಟಗಳನ್ನು ಎದುರಿಸಿ ಹೋರಾಡಿದವರು. ಅದಕ್ಕೆ ಅವರ ನಡೆಯಲ್ಲಿ, ನುಡಿಯಲ್ಲಿ, ಮನದಲ್ಲಿ, ಹೃದಯದಲ್ಲಿ ಇನ್ನೂ ಜೀವಂತಿಕೆ ತುಂಬಿದೆ. ನಾವೆಲ್ಲ ಮಕ್ಕಳು ಹತ್ತಿರ ಇಲ್ಲವೆಂದು ಅಳುವವರು. ಅವರು ಮಕ್ಕಳನ್ನು ಹತ್ತಿರ ಇಟ್ಟುಕೊಂಡರೂ ಸುಖವಿಲ್ಲದವರು. ಹೂವನ್ನು ಕಳಕೊಂಡು ಬರೇ ಮುಳ್ಳಿನ ಗಿಡವನ್ನು ಹಿಡಿದುಕೊಂಡು ಜೀವಿಸುವವರು. ಮಕ್ಕಳಿಲ್ಲ ಎನ್ನುವ ನಿಮ್ಮ ನೋವಾಗಲೀ, ಮಕ್ಕಳಿದ್ದೂ ಹತ್ತಿರದಲ್ಲಿಲ್ಲ ಎನ್ನುವ ನನ್ನ ನೋವಾಗಲೀ ಅವರ ನೋವುಗಳ ಎದುರು ಏನೂ ಅಲ್ಲ. ಹೋರಾಟದಲ್ಲಿ ನನ್ನಕ್ಕ ಯಾವ ಹಿಟ್ಲರ್‌ಗೂ ಕಮ್ಮಿಯಿಲ್ಲ. ವಿಧಿಯೊಡ್ಡಿದ ಹಲವು ಸವಾಲುಗಳ ಎದುರು ಅವರದ್ದು ವನ್ ಮ್ಯಾನ್ ಆರ್ಮಿ. ನನಗೆ ಸ್ವಲ್ಪ ಬಿಚ್ಚಿ ಹೇಳಿ, ಹೀಗೆ ಹೊಗಳುತ್ತಾ ಕುಳಿತರೆ ನನಗೇನು ತಿಳಿಯುತ್ತೆ? ಅಕ್ಕನ ಸುದ್ದಿ ಬಂದರೆ ದೊಡ್ಡ ಹೊಗಳು ಭಟ್ಟನೇ ಆಗುತ್ತೀರಿ. ನಿಮಗೆ ನನ್ನ ಅಕ್ಕನಂಥ ಅಕ್ಕನಿಲ್ಲ ಬಿಡಿ. ನಿಮಗೆ ಹೇಗೆ ತಿಳಿಯುತ್ತೆ ನನ್ನ ಫೀಲಿಂಗ್ಸ್ ? ಕತ್ತೆ ಬಲ್ಲುದೆ ಕಸ್ತೂರಿಯ ಪರಿಮಳವ?

ಇಷ್ಟೆಲ್ಲಾ ಹೇಳುವ ಬದಲು ಅಕ್ಕನ ಜೀವನ ಚರಿತ್ರೆ ಹೇಳಿಬಿಡಿ. ನಾನು ಕೇಳುತ್ತೇನೆ. ಹಾಗೆ ನಿಮಗೆ ಮಾತ್ರ ಹೇಳಿದರೆ ಸಾಕಾಗೋದಿಲ್ಲ ನಿಮ್ಮ ಹೆಂಡತಿಯೂ ಒಟ್ಟಿಗಿರಬೇಕು. ಅಕ್ಕ ಸ್ವಲ್ಪ ಹುಶಾರಾಗಲಿ, ಮತ್ತೆ ಹೇಳೋಣ. ಇಲ್ಲ, ಇಷ್ಟು ಹೊತ್ತು ನನ್ನ ಕುತೂಹಲ ಕೆರಳಿಸಿ ಇನ್ನು ಕಾಯಬೇಕೆಂದರೆ ಕಷ್ಟ. ಈಗ ನಾನು ಆಸ್ಪತ್ರೆಗೆ ಹೋಗಬೇಕು. ಇಲ್ಲಿ ಕಥೆ ಹೇಳ್ತಾ ಕುಳಿತರೆ ಕಲ್ಯಾಣಿ ನನ್ನ ಕಥೆ ಮುಗಿಸುತ್ತಾಳೆ. ಆದರೂ ಒಂದು ಉದಾಹರಣೆ ಬೇಕಾ? ಅವರ ಜತೆಗೆ ಮಗಳಿದ್ದಳಲ್ಲ? ಅವಳನ್ನು ಸರಿಯಾಗಿ ನೋಡಿದ್ದೀರಾ?

ಇಲ್ಲ ಯಾಕೆ?

ಅವಳು ಮದುವೆಯಾಗಿ ಎರಡು ಮಕ್ಕಳ ತಾಯಿಯಾದ ಮೇಲೆ ಗಂಡನನ್ನು ಬಿಟ್ಟು ಬಂದವಳು. ನನ್ನಕ್ಕನೇ ಅವಳನ್ನು ಗಂಡನನ್ನು ಬಿಟ್ಟು ಬರಲು ಹೇಳಿದ್ದು. ಅವರಿಗೆ ಮಗಳ ಜೀವನ ಮುಖ್ಯವಾಗಿತ್ತು. ಅವಳನ್ನು ಅಲ್ಲೇ ಬಿಟ್ಟಿದ್ದರೆ ಅವಳು ಮಕ್ಕಳ ಜತೆಗೆ ಪ್ರಾಣ ಕಳಕೊಳ್ಳುತ್ತಿದ್ದಳು. ಅವಳು ಅನುಭವಿಸಿದ್ದ ಕಷ್ಟ ಅಂಥಾದ್ದು. ನಮ್ಮಕ್ಕ ಮಗಳಿಗೆ ಬೇಗ ಮದುವೆ ಮಾಡಿದ್ದರು. ಅವಳು ಹೆಚ್ಚು ಕಲಿತಿರಲಿಲ್ಲ. ಒಂದು ನೆಂಟಸ್ತಿಕೆ ಬಂದ ಕೂಡಲೇ ಹಿಂದೆ ಮುಂದೆ ನೋಡದೇ ಕೊಟ್ಟು ಬಿಟ್ಟಿದ್ದರು. ಮತ್ತೆ ನೋಡಿದರೆ ಅವನು ಮಹಾ ಡೋಂಗಿ, ಬೊಂಬಾಯಿಯಲ್ಲಿ ಮೊದಲೇ ಒಂದು ಮದುವೆಯಾಗಿ ಅವನಿಗೆ ಇಬ್ಬರು ಮಕ್ಕಳೂ ಇದ್ದರು. ಇವಳಿಗೂ ಇಬ್ಬರು ಮಕ್ಕಳು. ಹೆತ್ತವರಿಗೆ ನೋವಾಗುವುದೆಂದು ಪಾಪ ಆ ಹುಡುಗಿ ಸ್ವಲ್ಪ ಸಮಯ ಸುಮ್ಮನಿದ್ದಳು. ಕೊನೆಗೊಂದು ದಿನ ತಿಳಿದಾಗ ಭಾವ ಕಂಗೆಟ್ಟರು. ಆದರೆ ಅಕ್ಕ ಕಂಗೆಡಲಿಲ್ಲ. ಹೃದಯ ಕಲ್ಲು ಮಾಡಿಕೊಂಡು ಮಗಳನ್ನು ಮಕ್ಕಳನ್ನು ತಂದು ಜತೆಗಿಟ್ಟುಕೊಂಡರು. ಮಗಳನ್ನು ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಕುಳ್ಳಿರಿಸಿದರು. ಜತೆಗೆ ಟೈಪಿಂಗ್ ಕಲಿಸಿ ಅವರೇ ಬ್ಯಾಂಕಿನ ಚೇರ್‌ಮ್ಯಾನ್ ಹತ್ತಿರ ಮಾತಾಡಿ ಬ್ಯಾಂಕಿನಲ್ಲಿ ಕೆಲಸ ತೆಗೆಸಿಕೊಟ್ಟರು. ಅವಳನ್ನು ತನ್ನ ಕಾಲಲ್ಲಿ ನಿಲ್ಲುವಂತೆ ಮಾಡಿದರು. ಮಕ್ಕಳನ್ನು ತಾವೇ ಸಾಕಿದರು. ಈಗ ಒಬ್ಬಳು ಇಂಜಿನೀಯರ್ ಆಗಿ ಮದುವೆಯಾಗಿದ್ದಾಳೆ. ಇನ್ನೊಬ್ಬಳೂ ಕಂಪ್ಯೂಟರ್ ಕೋರ್ಸ್ ಮಾಡುತ್ತಿದ್ದಾಳೆ. ಅವರ ಪ್ರಯತ್ನದಲ್ಲಿ ಅವರ ಮಗಳು ಗಂಡನನ್ನು ಮರೆತು ಬದುಕುವುದು ಸಾಧ್ಯವಾಗಿದೆ. ಮೊಮ್ಮಕ್ಕಳು ಸೆಟಲ್ ಆದರು ಮಗಳಿಗೆ ಜತೆಯಾಗಿ ಇರುವುದು ತಾಯಿ ಮಾತ್ರ.

ಅವರಿಗೆ ಒಟ್ಟು ನಾಲ್ಕು ಮಕ್ಕಳು. ಇದರ ಮಧ್ಯೆ ಎರಡನೆಯವಳಿಗೆ ಮದುವೆಯಾಯಿತು. ಅವಳು ಅವಳಷ್ಟಕ್ಕೆ ಚೆನ್ನಾಗಿದ್ದಾಳೆ. ಆದರೆ ಮೊದಲ ಮಗಳ ಜೀವನದ ಸೋಲು ಅಕ್ಕ ಭಾವ ಇಬ್ಬರನ್ನೂ ಬಹಳ ಘಾಸಿ ಮಾಡಿತ್ತು. ಅವಳ ಜೀವನವನ್ನು ಒಂದು ನೆಲೆಗೆ ತಂದ ನಮ್ಮಕ್ಕನ ಸಹನೆಯನ್ನು ಪರೀಕ್ಷಿಸಲೋ ಎನ್ನುವಂತೆ ಅವರ ಸಂಸಾರಕ್ಕೆ ಇನ್ನೊಂದು ಬರಸಿಡಿಲು ಬಡಿಯಿತು. ಆ ದಾರುಣ ಘಟನೆಯನ್ನು ಎಣಿಸಿದರೇ ಹೃದಯ ಒಡೆದಂತಾಗುತ್ತದೆ. ಮೂರನೆಯ ಮಗಳು ಡಿಗ್ರಿ ಮುಗಿಸಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಲು ತಾಯಿಯ ಜತೆಗೆ ಮಂಗಳೂರಿಗೆ ಹೋದಾಗ ಅವರು ಕುಳಿತ್ತಿದ್ದ ರಿಕ್ಷಾಕ್ಕೆ ಬಸ್ಸು ಹೊಡೆದು ಮಗಳು ಅಲ್ಲೇ ಅಸು ನೀಗಿದಳು. ನಮ್ಮಕ್ಕನಿಗೆ ತಲೆಗೆ ಪೆಟ್ಟಾಗಿ, ಕಾಲು ಫಾಕ್ಚರ್ ಆಗಿತ್ತು. ಅವರಿಗೆ ನಾಲ್ಕು ದಿನದ ನಂತರ ಸ್ಮೃತಿ ಬರುವಾಗ ಆಕ್ಸಿಡೆಂಟ್ ಆದದ್ದೇ ಮರೆತು ಹೋಗಿತ್ತು. ಅವರಿಗೆ ನೆನಪು ಹುಟ್ಟಿಸುವ ಹಾಗೂ ಇರಲಿಲ್ಲ. ತಲೆಗೆ ಪೆಟ್ಟಾಗಿದ್ದುದರಿಂದ ಯಾವುದೇ ಶಾಕಿಂಗ್ ಸುದ್ದಿ ಹೇಳುವ ಹಾಗಿರಲಿಲ್ಲ. ಭಾವನ ಅವಸ್ಥೆ ಹೇಳಿ ಪ್ರಯೋಜನವಿಲ್ಲ. ಒಂದು ತಿಂಗಳ ನಂತರ ಅವರನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡುವಾಗ ಅವರಿಗೆ ಮಗಳ ಸಾವಿನ ಸುದ್ದಿ ತಿಳಿದದ್ದು. ಆ ಮಗಳು ಎಲ್ಲ ರೀತಿಯಲ್ಲೂ ದಿ ಬೆಸ್ಟ್ ಹುಡುಗಿ, ದೇವರಿಗೆ ಬೇಕಾಗುವುದೂ ಎಲ್ಲಕ್ಕಿಂತ ಒಳ್ಳೆಯ ವಸ್ತುವೇ. ಎದುರಿಗೆ ಯಾರಿಗೂ ಬೇಡವಾದ ಒಂದು ವಸ್ತುವನ್ನು ಇಟ್ಟುಕೊಂಡು ಎಲ್ಲರಿಗೂ ಬೇಕಾಗಿದ್ದ ಆ ಹುಡುಗಿಯನ್ನು ಕಳಕೊಂಡಾಗ ಅಕ್ಕ ಭಾವ ಇಬ್ಬರೂ ಜೀವಿಸುವ ಇಚ್ಛೆಯನ್ನೇ ಕಳಕೊಂಡರು. ಅದರಲ್ಲೂ ನಮ್ಮ ಭಾವ ದೇವತಾ ಮನುಷ್ಯ ಯಾರಿಗೂ ಯಾವತ್ತೂ ನೋವುಂಟುಮಾಡಿದವರೇ ಅಲ್ಲ. ವೈದ್ಯನಾಗಿ ಅವರು ದುಡ್ಡು ಮಾಡಿದ್ದಕ್ಕಿಂತಲೂ ಬಡವರಿಗೆ ಸಹಾಯ ಮಾಡಿದ್ದೇ ಜಾಸ್ತಿ. ಅವರಿಗೆ ಇಂತಹ ಕಷ್ಟಗಳನ್ನು ಕೊಟ್ಟ ದೇವರ ಮೇಲಿನ ನಂಬುಗೆಯೇ ನಮಗೆಲ್ಲ ಹೊರಟುಹೋಯಿತು.

ಶಿವರಾಂರವರ ದನಿ ಗದ್ಗದಿತವಾಗಿತ್ತು. ವಾಮನರಾಯರ ಹೃದಯವೂ ಭಾರವಾಗಿತ್ತು. ಹೇಗೂ ಕತೆ ಶುರುಮಾಡಿದ್ದಾಗಿದೆ ಪೂರ್ತಿ ಕೇಳೇ ಬಿಡೋಣವೆಂದು ವಾಮನರಾಯರು, ಆಆಬೇಡವಾದುದ್ದನ್ನು ಇಟ್ಟುಕೊಂಡು ಬೇಕಾದುದನ್ನು ಕಳಕೊಂಡರು ಎಂದಿರಲ್ಲ? ಅದೇನು?

ಶಿವರಾಂ ಈ ಲೋಕದಲ್ಲಿ ಇದ್ದ ಹಾಗಿರಲಿಲ್ಲ. ಇವರ ಪ್ರಶ್ನೆಗೆ ಉತ್ತರಿಸದೆ, ಈ ನೋವನ್ನು ಇಬ್ಬರಿಗೂ ಸಹಿಸುವುದು ಸಾಧ್ಯವಾಗದಿದ್ದರೂ ಅಕ್ಕ ತನ್ನ ಮುಂದಿರುವ ಇನ್ನೊಂದು ಜವಾಬ್ದಾರಿಯಿಂದ ಸಾವನ್ನು ಸ್ವಾಗತಿಸಲಿಲ್ಲ. ಆದರೆ ಭಾವನಿಗೆ ಈ ನೋವು ಸಹಿಸಲಾಗಲಿಲ್ಲ. ಮಗಳು ಸತ್ತ ಆರೇ ತಿಂಗಳಲ್ಲಿ ಹೃದಯಾಘಾತದಿಂದ ಮೃತರಾದರು. ನೀವೇ ಯೋಚಿಸಿ ಅಕ್ಕನ ಪರಿಸ್ಥಿತಿ ಹೇಗಾಗಿರಬೇಡ? ನಮ್ಮಕ್ಕ ಕಷ್ಟದಲ್ಲಿ ಒಂಟಿಯಾದರು. ಆದರೆ, ಅವರಿಗೆ ಅದರ ನಂತರ ಕಷ್ಟ ಸುಖ ಎಲ್ಲಾ ಒಂದೇ ಆಯಿತು. ಅವರು ಇನ್ನೂ ಸಾಯುವ ಹಾಗಿರಲಿಲ್ಲ. ಬದುಕಲೇಬೇಕಿತ್ತು. ಹಾಗೆ ಇಷ್ಟು ವರುಷ ಬದುಕಿದರು. ಇನ್ನೂ ಎಷ್ಟು ವರುಷ ಅವರು ಈ ಕಷ್ಟ ಅನುಭವಿಸಬೇಕೋ? ಅವರ ಮೇಲಿರುವ ಜವಾಬ್ದಾರಿ ಅಂಥಾದ್ದು.

ಇನ್ನೆಂತಹ ಜವಾಬ್ದಾರಿ? ಸಾವು, ವಿಧಿ ಅವರ ಜೀವನದೊಡನೆ ಆಟವಾಡಿ ಅವರದ್ದೆಲ್ಲವನ್ನೂ ಕಸಿದುಕೊಂಡ ಮೇಲೆ ಅವರು ಬದುಕುಳಿಯಬೇಕಾದದ್ದು ಯಾಕೆ? ನಿಮಗೆ ಅವರಿಗೆ ನಾಲ್ಕು ಮಕ್ಕಳೆಂದು ಹೇಳಿದ್ದು ಮರೆತು ಹೋಯಿತೇನೋ? ಬದುಕು ಅವರಿಗೇನೂ ಕೊಡಲಿಲ್ಲ. ಆದರೆ ಅವರಿಂದ ಎಲ್ಲವನ್ನೂ ಅಪೇಕ್ಷಿಸಿತು. ಅವರು ಕಳಕೊಂಡದ್ದರ ಮುಂದೆ ನಮ್ಮದು ಏನೂ ಇಲ್ಲ. ಅವರಿಗೆ ಮೂರು ಹೆಣ್ಣು ಮಕ್ಕಳ ನಂತರ ಒಬ್ಬ ಮಗ ಹುಟ್ಟಿದ್ದ. ಹುಟ್ಟುವಾಗ ಸಂತಸದ ಮಹಾಪೂರವನ್ನೇ ತಂದಿದ್ದರೂ ಬೆಳೆಯುತ್ತಾ ಕಷ್ಟದ ಜಲಪಾತವನ್ನೇ ಸೃಷ್ಟಿಸಿದ್ದ. ಗಂಡು ಮಗನೆಂದು ಹೆಸರಿಗೆ ಮಾತ್ರ. ಅವನು ಹುಟ್ಟುತ್ತಲೇ ಮೆಂಟಲೀ ರಿಟಾರ್ಡೆಡ್ ಮಗುವಾಗಿದ್ದ. ಅವನಿಗೀಗ ನಲ್ವತ್ತರ ಪ್ರಾಯ. ಕಷ್ಟದ ಹಿಮಾಲಯ ಪರ್ವತವನ್ನೇ ಎದುರಿಗಿಟ್ಟುಕೊಂಡು ಬದುಕುತ್ತಿದ್ದ ಅವರಿಗೆ ಒಂದರ ಹಿಂದೆ ಒಂದರಂತೆ ಸಾಲಾಗಿ ಹೃದಯ ಕಿತ್ತು ತೆಗೆಯುವಂತಹ ನೋವುಗಳೇ ಸಿಕ್ಕಿದ್ದು. ಮಗನನ್ನು ಮುಂದಿಟ್ಟುಕೊಂಡು ನಮ್ಮಕ್ಕ ಸಾಯುವುದು ಹೇಗೆ ಹೇಳಿ? ಅವನ ಜವಾಬ್ದಾರಿ ಯಾರು ತೆಗೆದು ಕೊಳ್ಳುತ್ತಾರೆ? ಅವರೊಡನೆ ಇರುವ ಮಗಳು ಮೊದಲೇ ನೊಂದವಳು. ಅಲ್ಲದೆ ಒಬ್ಬಂಟಿ. ಅವಳನ್ನು ಬಿಟ್ಟು ತಾಯಿ ಹೇಗೆ ಸಾಯುವುದು? ನನಗೆ ಮಕ್ಕಳ ಜತೆ ಇಲ್ಲವೆಂದು ನೋವು ನಿಮಗೆ ಮಕ್ಕಳೇ ಇಲ್ಲವೆಂದು ನೋವು. ಅವರಿಗೆ ಇದ್ದೂ ಇಲ್ಲದಂತಹ ನೋವು, ಅವರ ಮುಂದೆ ನಮ್ಮದು ಏನೂ ಅಲ್ಲ.

ಶಿವರಾಂ ಕಣ್ಣುಮುಚ್ಚಿ ಹೇಳಿ ಮುಗಿಸಿ ಕಣ್ಣು ಬಿಡುವಾಗ ವಾಮನರಾಯರು ಕಣ್ಣು ಮುಚ್ಚಿಕುಳಿತಿದ್ದರು. ಅವರ ಕಣ್ಣಿನಿಂದ ಒಂದೊಂದೇ ತೊಟ್ಟು ನೀರು ಕೆಳಗಿಳಿಯುತ್ತಿತ್ತು. ಶಿವರಾಂ ಹತ್ತಿರ ಹೋಗಿ ಗೆಳೆಯನ ಭುಜ ಹಿಡಿದಲುಗಿಸಿದಾಗ ಮೆಲ್ಲನೆ ಕಣ್ಣು ಬಿಟ್ಟ ವಾಮನರಾಯರು. ಆಆನಮ್ಮಂತೆ ಮಕ್ಕಳಿಲ್ಲದವರಿಗೆ ಒಂದೇ ಚಿಂತೆ. ಮಕ್ಕಳಿದ್ದವರಿಗೆ ಸಾವಿರ ಚಿಂತೆ. ಮಕ್ಕಳು ಹತ್ತಿರವಿದ್ದರೂ ಚಿಂತೆ, ದೂರದಲ್ಲಿದ್ದರೂ ಚಿಂತೆ. ನನಗದು ತಿಳಿದಿರಲಿಲ್ಲ. ನನಗೆ ಯಾವ ಬಂಧನಗಳೂ ಇಲ್ಲ. ನಾಳೆ ಬೇಕಾದರೆ ಕೀರ್ತಿ ಹೇಳಿದಂತೆ ಯಾವುದಾದರೂ ವೃದ್ಧಾಶ್ರಮಕ್ಕೆ ಸೇರಬಹುದು. ಅಕ್ಕನಂತೆ ಸಾಯಲಾಗದೆ ಜೀವಿಸಬೇಕಿಲ್ಲ. ಸಾವು ಬಂದಾಗ ಯಾವ ಯೋಚನೆಯೂ ಇಲ್ಲದೆ ಕಣ್ಣು ಮುಚ್ಚಬಹುದು.

ಇಲ್ಲಿ ಅದಲ್ಲ ಸಂಗತಿ. ಇಷ್ಟು ಅನುಭವಿಸಿಯೂ ಯಾರನ್ನೂ ದೂರದೆ, ದೇವರನ್ನು ಅಷ್ಟೇ ಶ್ರದ್ಧೆಯಿಂದ ಪೂಜಿಸಿಕೊಂಡು, ನಗುವಿನ ಮುಖವಾಡ ಹಾಕಿಕೊಂಡು ಜೀವನದೊಡನೆ ರಾಜಿ ಮಾಡಿಕೊಂಡು, ತಮ್ಮ ನೋವು ಯಾರಿಗೂ ಅರಿವಾಗದಂತೆ ಜೀವಿಸುತ್ತಿದ್ದಾರಲ್ಲ ಅದು ದೊಡ್ಡ ಸಂಗತಿ. ಇವತ್ತು ಹೇಳುವುದಿಲ್ಲ ಎಂದುಕೊಂಡೇ ಎಲ್ಲ ಕತೆ ಹೇಳಿದ್ದಕ್ಕೆ ನಿಮಗೆ ನಾನು ಅಭಾರಿ. ಜೀವನದ ಸತ್ಯವನ್ನು ನಿಮ್ಮಕ್ಕನ ಜೀವನ ತೋರಿಸಿಕೊಟ್ಟಿತು. ನಾನವರನ್ನು ನೋಡಿ ಅವರ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಬೇಕೆಂದು ಅನಿಸುತ್ತಿದೆ.

ಅವರ ಜೀವನ ಒಂದು ಹೋಮದ ಅಗ್ನಿಕುಂಡ, ಎಲ್ಲ ಸುಖಗಳನ್ನು ಎರೆಸಿಕೊಂಡು ಅದನ್ನೆಲ್ಲಾ ಸುಟ್ಟು ಬರೇ ಕಷ್ಟಗಳ ಕೆಂಡದ ರಾಶಿಯನ್ನು ಅವರಿಗೆ ಬಿಟ್ಟುಕೊಟ್ಟ ಹೋಮದ ಕುಂಡ, ಆದರೆ ಅವರು ಬೆಂಕಿಯೊಳಗಿಂದ ಅರಳಿದ ಹೂವಿನಂತೆ ಎಲ್ಲಾ ನೋವುಗಳನ್ನು ಮೆಟ್ಟಿ ನಗುತ್ತಿದ್ದಾರೆ. ಅದು ಅವರನ್ನು ಬದುಕಿಸಿದೆ. ಜೀವಂತವಾಗಿಸಿದೆ. ಸುಖ ದುಃಖ ಎರಡನ್ನೂ ಮೀರಿ ಬರೇ ಕರ್ತವ್ಯಕ್ಕಾಗಿ ಅವರು ಉಸಿರಾಡುತ್ತಿದ್ದಾರೆ. ನಾನು ಹೊತ್ತೆಲ್ಲ ಇಲ್ಲೇ ಕಳೆದೆ. ಅಲ್ಲಿ ಕಲ್ಯಾಣಿ ಎಷ್ಟು ಗಲಾಟೆ ಮಾಡುತ್ತಿದ್ದಾಳೋ? ನಾನಿನ್ನು ಬರ್ತೇನೆ.

ಶಿವರಾಂ ಓಡು ನಡಿಗೆಯಲ್ಲಿ ಮನೆ ಸೇರಿದ್ದರು. ಎರಡು ದಿನ ಅಕ್ಕನ ಜೀವನವನ್ನು ಮೆಲುಕು ಹಾಕಿ ಹೃದಯ ಭಾರವಾಗಿತ್ತು. ಗೆಳೆಯನೊಡನೆ ಹಂಚಿಕೊಂಡ ಮೇಲೆ ಹಗುರವಾಗಿತ್ತು. ನಾವು ಎಲ್ಲವನ್ನೂ ಹಂಚಿಕೊಳ್ಳುತ್ತೇವೆ. ಅಕ್ಕ ಯಾವತ್ತೂ ನೋವನ್ನು ಹಂಚಿಕೊಂಡುದೇ ಇಲ್ಲ. ಆದರೂ ಎಷ್ಟು ನಿರಾಳವಾಗಿರುತ್ತಾರೆ. ಮನೆ ತಲುಪುವಾಗ ಕಲ್ಯಾಣಿ ಮನೆಯ ಮುಂದೇನೆ ಕಾಯುತ್ತಿದ್ದಳು. ಇವರನ್ನು ನೋಡಿದವಳೇ, ನೀವು ಎಲ್ಲಿ ಮಾಯವಾದದ್ದು? ಅತ್ತಿಗೆಯ ಊರಿಂದ ಫೋನಿತ್ತು. ಅವರ ಮಗ ಎರಡು ದಿನದಿಂದ ನಾಪತ್ತೆಯಂತೆ. ಯಾರಿಗೂ ಗೊತ್ತಿಲ್ಲ. ಎಲ್ಲಿ ಹೋಗಿದ್ದಾನೆಂದು, ಅತ್ತಿಗೆಗೆ ಈಗ ಹೇಳುವುದು ಸಾಧ್ಯವಿಲ್ಲ. ಏನು ಮಾಡುತ್ತೀರಿ?

ಇದನ್ನು ಕೇಳುತ್ತಲೇ ಶಿವರಾಂ ಕುಸಿದಿದ್ದರು. ಊರಿಡೀ ಸುತ್ತುತ್ತಾನೆ. ಕೆರೆಯ ಬಳಿ ಕೂರುತ್ತಾನೆ. ಏನಾಗಿರಬಹುದು? ಅವನಿಗಾಗಿ ಜೀವ ಹಿಡಿದಿರುವ ಅಕ್ಕನಿಗೆ ಇದು ತಿಳಿದರೆ ಏನಾಗಬಹುದು.? ಮಕ್ಕಳಿಂದ ಎಷ್ಟು ಕಷ್ಟ ಅನುಭವಿಸಿದಳು? ಈಗೇನು ಮಾಡಲಿ? ಶಿವರಾಂ ಊರಿಗೆ ಫೋನು ಮಾಡಿದಾಗ ಅಲ್ಲಿಂದ ಯಾರದೋ ಸ್ವರ ಕೇಳಿಸಿತ್ತು. ಏನಾಯಿತು? ಹುಡುಗ ಸಿಕ್ಕಿದನೇ? ಸಿಕ್ಕಿಲ್ಲ. ಅವನು ಯಾವಾಗಲೂ ಹೋಗುತ್ತಿದ್ದ ಕೆರೆಯಲ್ಲಿ ಅವನ ದೇಹ ಹುಡು ಕುತ್ತಿದ್ದಾರೆ. ಈಗೇನು ಮಾಡಲಿ? ನಾನು ಪುನಹಾ ಫೋನಿಸುತ್ತೇನೆ. ಶಿವರಾಂ ಫೋನಿಟ್ಟುಗೆಳೆಯನ ನಂಬರ್ ತಿರುಗಿಸಿದ್ದರು. ವಾಮನರಾಯರ ಸ್ವರ ಕೇಳುತ್ತಲೇ ಎಲ್ಲಾ ಮುಗಿಯಿತು. ಅಲ್ಲಿ ಮಗ ನೀರುಪಾಲಾಗಿದ್ದಾನೆ. ಅವನಿಗೇನಾದರೂ ಆದರೆ ಅಕ್ಕ ಬದುಕುವುದಿಲ್ಲ. ನೀವು ಕೂಡಲೇ ಆಸ್ಪತ್ರೆಗೆ ಬನ್ನಿ, ಅಲ್ಲಿಯ ಪರಿಸ್ಥಿತಿ ನೋಡಿ ನಾನು ಕೂಡಲೇ ಊರಿಗೆ ಹೋಗಬೇಕು.

ಶಿವರಾಂ ಆಸ್ಪತ್ರೆಗೆ ಬರುವಾಗ ಇಬ್ಬರೂ ಮಕ್ಕಳು ಬಹಳ ಚಿಕ್ಕದು ಮುಖ ಮಾಡಿ ಕುಳಿತಿದ್ದರು. ಅಕ್ಕನನ್ನು ಎಮರ್‌ಜೆನ್ಸಿ ವಾರ್ಡ್‌ಗೆ ತೆಗೆದುಕೊಂಡು ಹೋಗಿದ್ದರು. ಅಮ್ಮನಿಗೆ ಸಡನ್ ಆಗಿ ಬಿ.ಪಿ. ಕೆಳಗಿಳಿಯಿತು. ಈಗ ಐ.ಸಿ.ಯು.ನಲ್ಲಿದ್ದಾರೆ. ಶಿವರಾಂ ಡಾಕ್ಟರನ್ನು ನೋಡಲು ಓಡಿದ್ದರು. ಆದರೆ ಅಷ್ಟು ಹೊತ್ತಿಗೆ ಅವರ ಕತೆ ಮುಗಿದಿತ್ತು. ತಾಯಿ ಹೃದಯಕ್ಕೆ ಮಗನ ಸಾವಿನ ಸುಳಿವು ಸಿಕ್ಕಿ ತನ್ನ ಕರ್ತವ್ಯ ಮುಗಿಯಿತೆಂದು ಅವರೂ ತನ್ನ ಜೀವನವನ್ನು ಸುಲಭವಾಗಿ ಕಳಚಿಕೊಂಡಿರಬೇಕು.

ಶಿವರಾಂಗೆ ಅಕ್ಕನ ಅಗಲಿಕೆಯಿಂದ ತಮ್ಮ ಜೀವನದಲ್ಲಿ ಒಂದು ಶೂನ್ಯತೆ ಉಂಟಾದಂತೆ ಅನಿಸಿದರೂ ನೋವಾಗಲಿಲ್ಲ. ಈಗಲಾದರೂ ಅವರ ಜೀವನದ ಅಗ್ನಿಕುಂಡ ತಣ್ಣಗಾಯಿತಲ್ಲ ಎಂದು ಅನಿಸಿತ್ತು. ಅವರ ಹೆಣವನ್ನು ತೆಗೆದುಕೊಂಡು ಊರಿಗೆ ಪ್ರಯಾಣಿಸುವಾಗ ಮಗುವಿನಂತೆ ಬಿಕ್ಕಿ ಬಿಕ್ಕಿ ಅಳುತ್ತಿದ್ದ ದೊಡ್ಡ ಮಗಳನ್ನು ನೋಡಿ ವಾಮನರಾಯರು ಮಗೂ, ನೀನು ಅಮ್ಮನಿಲ್ಲವೆಂದು ಬೇಸರಿಸಬೇಡ. ಇಲ್ಲಿಗೆ ಟ್ರಾನ್ಸ್ ಫರ್ ತೆಗೆದುಕೊಂಡು ಬಾ. ನಮ್ಮ ಜತೆಗಿರು. ನಮಗೂ ಯಾರೂ ಇಲ್ಲ. ನಿನಗೂ ಇಲ್ಲ. ನಾವು ಜತೆಯಾಗಿರೋಣ. ನಾವೆಲ್ಲ ಒಂದೇ ದೋಣಿಯ ಪ್ರಯಾಣಿಕರು. ಪ್ರಯಾಣವೂ ಒಂದೇ ಕಡೆಗೆ, ನಾನೇ ಒಂದು ವೃದ್ಧಾಶ್ರಮ ಶುರು ಮಾಡುತ್ತೇನೆ. ನಮ್ಮ ಮನೆಯಲ್ಲೇ ಶುರು ಮಾಡೋಣ. ರುಕ್ಕಿಣಿಯಕ್ಕನ ಹೆಸರೇ ಅದಕ್ಕಿಡೋಣ. ನಾವೆಲ್ಲ ಅಲ್ಲೇ ಇರೋಣ ಒಬ್ಬರಿಗೊಬ್ಬರು ಸಹಾಯ ಮಾಡಿಕೊಂಡು, ನಿನ್ನಮ್ಮನ ಹಾಗೇ ಒಬ್ಬೊಬ್ಬರೇ ಕಷ್ಟ ಅನುಭವಿಸುವುದು ಬೇಡ.

ವಾಮನರಾಯರಿಗೆ ಅರಿವಾಗದಂತೆ ಅವರ ಜೀವನದ ದಾರಿ ಗೋಚರಿಸಿತ್ತು. ಗೆಳೆಯನ ಮಾತು ಕೇಳಿದ ಶಿವರಾಂ, ನಿಮ್ಮ ಆಶ್ರಮದಲ್ಲೇ ನನಗೂ ಒಂದು ರೂಂ ಕೊಟ್ಟುಬಿಡಿ. ನನ್ನೊಡನಿರುವ ಹಣವೂ ಆ ವೃದ್ಧಾಶ್ರಮಕ್ಕೇ ಸಲ್ಲುತ್ತೆ. ಬದುಕು ಜಟಕಾ ಬಂಡಿ ವಿಧಿಯದರ ಸಾಹೇಬ ನಮ್ಮದೇನಿದೆ ಅಲ್ಲಿ? ನಾವು ಬರೇ ಪ್ರಯಾಣಿಕರು.

## ಮೈಸೂರು ದಸರಾ ಗಜಪಯಣಕ್ಕೆ ಚಾಲನೆ



• ಪ್ರಜೋದಯ ವರದಿ

**ಮೈಸೂರು:** ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ 2026ರ ದಸರಾ ಗಜಪಯಣಕ್ಕೆ ಚಾಲನೆ ದೊರೆತಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ದಸರಾ ಗಜಪಡೆಗೆ ಚಾಲನೆ ನೀಡಿದ್ದಾರೆ.

ಹುಣಸೂರಿನ ವೀರನಹೊಸಳ್ಳಿಯಲ್ಲಿ ಗಜಪಯಣದ ಕಾರ್ಯಕ್ರಮ ಜರುಗಿದ್ದು, ಬೆಳಿಗ್ಗೆ 10 ರಿಂದ 10.28ರ ಶುಭ ತುಲಾ ಲಗ್ನದಲ್ಲಿ ಗಜಪಡೆಗೆ ಪೂಜೆ ಸಲ್ಲಿಕೆಯಾಗಿದೆ. ದಸರಾ ಗಜಪಡೆಗೆ ಪೂಜೆ ಸಲ್ಲಿಸಿದ ಬಳಿಕ ಫಲತಾಂಬೂಲ ನೀಡುವ ಮೂಲಕ ಚಾಲನೆ ನೀಡಲಾಯಿತು. ಆ ನಂತರ ಗಜಪಡೆ ಕಾಡಿನಿಂದ ನಾಡಿನತ್ತ ಹೆಜ್ಜೆ ಹಾಕಿವೆ.

ದಸರಾ ಗಜಪಯಣದ ಮೊದಲ ಹಂತದಲ್ಲಿ ಒಟ್ಟು 9 ಆನೆಗಳಾದ ಧನಂಜಯ, ಮಹೇಂದ್ರ, ಏಕಲವ್ಯ, ಪ್ರಶಾಂತ, ಗೋಪಿ, ಶ್ರೀರಾಮ, ಸುಗ್ರೀವ, ಲಕ್ಷ್ಮೀ ಹಾಗು ಅಭಿಮನ್ಯು ಆಗಮಿಸಿವೆ.

**ಅಭಿಮನ್ಯುಗೆ ಬೀಳ್ಕೊಡುಗೆ:**

ಸತತ 6 ವರ್ಷಗಳ ಕಾಲ ನಿರ್ವಿಘ್ನವಾಗಿ ಜಂಬೂ ಸವಾರಿ ನೆರವೇರಿಸಿಕೊಟ್ಟಿದ್ದ ಅಭಿಮನ್ಯು ಆನೆಗೆ ಗಜಪಯಣದ ವೇಳೆ ಅರಣ್ಯ ಇಲಾಖೆಯು ವಿಶೇಷ ಬೀಳ್ಕೊಡುಗೆ ಸಲ್ಲಿಸಿದೆ. ಬಣ್ಣ ಬಣ್ಣದ ಚಿತ್ತಾರ ಬಿಡಿಸಿಕೊಂಡು ಸಿಂಗಾರಗೊಂಡ ಅಭಿಮನ್ಯುವನ್ನು ಶಂಖ, ಚಕ್ರ, ಗಂಡಭೇರುಂಡ ಹೂವಿನ ಬಳ್ಳಿ ಬಿಡಿಸಿದ ದಾರಿಯುದ್ದಕ್ಕೂ ಹೂಮಳೆ ಸುರಿಸಿ ಸಿಬ್ಬಂದಿ ಕರೆತಂದಿದ್ದಾರೆ. ಅರಣ್ಯ ಇಲಾಖೆಯ ಅಚ್ಚುಮೆಚ್ಚಿನ ಆನೆಯಾಗಿರುವ ಅಭಿಮನ್ಯುಗೆ ಬೀಳ್ಕೊಡುಗೆ ನೀಡಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದರು. ಈ ಹಿನ್ನಲೆ ಗಜಪಯಣ ವೇಳೆ ಅಭಿಮನ್ಯುವಿಗೆ ಬೀಳ್ಕೊಡುಗೆ ಹಮ್ಮಿಕೊಳ್ಳಲಾಗಿತ್ತು.

# ನನ್ನಿಂದಲೇ ಪರಮೇಶ್ವರ್ ಡಿಸಿಎಂ

### ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಸಮ್ಮತಿ ಸೂಚಿಸಿದ ಉಪಮುಖ್ಯಮಂತ್ರಿ

• ಪ್ರಜೋದಯ ವರದಿ

**ಬೆಂಗಳೂರು:** ಡಾ.ಜಿ.ಪರಮೇಶ್ವರ್ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ಕಲ್ಪಿಸಿದ್ದು ನಾನೇ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದು ಆ ಮೂಲಕ ಸರ್ಕಾರದಲ್ಲಿ ಹಿಡಿತ ಹೊಂದಿರುವುದಾಗಿ ಪರೋಕ್ಷವಾಗಿ ಹೇಳಿದ್ದಾರೆ.

ಗಾಂಧಿ ಭವನದಲ್ಲಿ ಬುಧವಾರ ನಡೆದ ಸಾಮಾಜಿಕ ನ್ಯಾಯ ವಿಚಾರ ಸಂಕೀರಣದಲ್ಲಿ ಒಳಮೀಸಲಾತಿ ಕುರಿತು ಮಾತನಾಡುತ್ತಿದ್ದ ಸಂದರ್ಭದಲ್ಲಿ, ಸಭಿಕರು ರಾಜ್ಯಕ್ಕೆ ದಲಿತ ಮುಖ್ಯಮಂತ್ರಿ ಬೇಕು ಎಂದು ಕೂಗಿದರು. ಆಗ ಸಿದ್ದರಾಮಯ್ಯ ಅವರು ದಲಿತ ಮುಖ್ಯಮಂತ್ರಿ ಬೇಕಾದರೆ ನೀವು ಹೋರಾಟ ನಡೆಸಬೇಕು. ಈ ಕುರಿತು ಮುಂದಿನ ಚುನಾವಣೆ ಸಂದರ್ಭದಲ್ಲಿ ಚರ್ಚೆ ಮಾಡಬೇಕೆಂದರು.

ದಲಿತ ಮುಖ್ಯಮಂತ್ರಿ ಬೇಕೆಂದರೆ ನೀವು ಹೋರಾಟ ಮಾಡಿ. ಈ ಕುರಿತು 2028ರ ವಿಧಾನಸಭೆ ಚುನಾವಣೆಯಲ್ಲಿ ಚರ್ಚೆ ಮಾಡೋಣ. ನಾನು ಈಗಾಗಲೇ ಡಾ. ಜಿ. ಪರಮೇಶ್ವರ್ ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡಿದ್ದೇನೆ. ಹೈಕಮಾಂಡ್ ನಾಲ್ಕು ಉಪಮುಖ್ಯಮಂತ್ರಿ ಸ್ಥಾನ ಸೃಷ್ಟಿಸಲು ಮುಂದಾಗಿತ್ತು. ಆದರೆ ನಾನು ಒಂದೇ ಸ್ಥಾನಕ್ಕೆ ಪಟ್ಟು ಹಿಡಿದು, ಪರಮೇಶ್ವರ್ ಅವರನ್ನು ಉಪಮುಖ್ಯಮಂತ್ರಿ ಮಾಡಿಸಿದೆ ಎಂದು ಸೂಚ್ಯವಾಗಿ ಹೇಳಿದರು.



**ಸಮ್ಮತಿ ಸೂಚಿಸಿದ ಪರಮೇಶ್ವರ್:**

ಇನ್ನು ಸಿದ್ದರಾಮಯ್ಯ ಅವರ ಹೇಳಿಕೆಗೆ ಸಮ್ಮತಿ ಸೂಚಿಸಿರುವ ಡಾ.ಜಿ.ಪರಮೇಶ್ವರ್ ಅವರು, ಸಿದ್ದರಾಮಯ್ಯ ಅವರು ಹೇಳುವುದರಲ್ಲಿ ಸತ್ಯವಿದೆ. ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿಗೆ ಸಂಬಂಧಿಸಿ ಸಿದ್ದರಾಮಯ್ಯ ಅವರು ಹೇಳಿದ್ದರಲ್ಲಿ ಸತ್ಯಾಂಶವಿದೆ. ಕಳೆದ ಬಾರಿಯೂ ಒಂದೇ ಡಿಸಿಎಂ ಹುದ್ದೆ ಇತ್ತು. ಅದರಂತೆ ಈ ಬಾರಿಯೂ ಒಂದೇ ಹುದ್ದೆ ಸೃಷ್ಟಿಸಲು ತೀರ್ಮಾನ ಮಾಡಲಾಯಿತು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

**ಸಿ.ಎಂ. ಡಿ.ಕೆ.ಶಿವಕುಮಾರ್ ನಾನು ಹೇಳಿದಂತೆ ಕೇಳ್ತಾರೆ:**

ಇನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿಚಾರವಾಗಿ ಕುತೂಹಲಕಾರಿ ಹೇಳಿಕೆ ನೀಡಿರುವ ಸಿದ್ದರಾಮಯ್ಯ ಅವರು, ಆಂತರಿಕ ಮೀಸಲಾತಿಗೆ ಸಂಬಂಧಿಸಿದ ಎಲ್ಲಾ ಗೊಂದಲಗಳನ್ನು ನಿವಾರಿಸಿ ಅದನ್ನು ಸರಿಯಾಗಿ ಜಾರಿಗೆ ತರುವಂತೆ ನಾನು ಅವರನ್ನು ಕೋರುತ್ತೇನೆ. ಸಚಿವ ಸಂಪುಟವು ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ ಮತ್ತು ಅವರು ನನ್ನ ಮಾತನ್ನು ಆಲಿಸುತ್ತಾರೆಂಬ ವಿಶ್ವಾಸವಿದೆ ಎಂದು ಅವರು ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ವಿವರವಾಗಿ ಪೋಸ್ಟ್ ಮಾಡಿದ್ದಾರೆ.

ಒಟ್ಟಿನಲ್ಲಿ ಸಾಮಾಜಿಕ ನ್ಯಾಯ ವಿಚಾರ ಸಂಕಿರಣದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಡಿರುವ ಮಾತುಗಳು, ರಾಜ್ಯ ರಾಜಕಾರಣದಲ್ಲಿ ಹೊಸ ಸಂಚಲನ ಸೃಷ್ಟಿಸಿದೆ. ರಾಜ್ಯದಲ್ಲಿ ಒಂದೇ ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿ ಮತ್ತು ಡಾ. ಜಿ. ಪರಮೇಶ್ವರ್ ಅವರ ಆಯ್ಕೆ ಮಾಡಲು ತಾವೇ ಕಾರಣ ಎಂಬ ಅವರ ಹೇಳಿಕೆ ಕುತೂಹಲಕಾರಿಯಾಗಿದ್ದು, ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

## ಹಲವು ಜಿಲ್ಲೆಗಳಲ್ಲಿ 2 ದಿನ ಮಳೆ ಸೂಚನೆ

• ಪ್ರಜೋದಯ ವರದಿ



**ಬೆಂಗಳೂರು:** ರಾಜ್ಯದಲ್ಲಿ ಮುಂಗಾರು ಮತ್ತೆ ಚುರುಕುಗೊಂಡಿದ್ದು, ರಾಜ್ಯದ ಹಲವು ಜಿಲ್ಲೆಗಳಲ್ಲಿ ಮುಂದಿನ ಎರಡು ದಿನ ಮಳೆಯಾಗುವ ಸಾಧ್ಯತೆ ಇದೆ. ಕರಾವಳಿ ಕರ್ನಾಟಕದ ಬಹುತೇಕ ಭಾಗಗಳು, ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳು ಹಾಗೂ ಉತ್ತರ ಒಳನಾಡಿನ ಕೆಲವೆಡೆ ಮಳೆ ಮುನ್ಸೂಚನೆ ನೀಡಲಾಗಿದೆ.

ಕೊಡಗಿನ ಭಾಗಮಂಡಲದಲ್ಲಿ ಈಗಾಗಲೇ 15 ಸೆಂ.ಮೀ. ಮಳೆ ದಾಖಲಾಗಿದ್ದು, ರಾಜ್ಯದ ಹಲವೆಡೆ ವರುಣನ ಆರ್ಭಟ ಮುಂದುವರಿಯುವ ನಿರೀಕ್ಷೆಯಿದೆ. ಭಾರತೀಯ ಹವಾಮಾನ ಇಲಾಖೆ ಬೆಂಗಳೂರು ಕೇಂದ್ರದ ಮುನ್ಸೂಚನೆಯ ಪ್ರಕಾರ, ಆ.27 ಮತ್ತು 28 ರಂದು ಕರಾವಳಿ ಕರ್ನಾಟಕದ ಬಹುತೇಕ ಪ್ರದೇಶಗಳು, ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳು ಹಾಗೂ ಉತ್ತರ ಒಳನಾಡಿನ ಕೆಲವೆಡೆ ಮಳೆಯಾಗಲಿದೆ.

ಮುಂದಿನ ಎರಡು ದಿನಗಳಲ್ಲೂ ಕರಾವಳಿ ಜಿಲ್ಲೆಗಳಲ್ಲಿ ಮಳೆಯ ವಾತಾವರಣ ಮುಂದುವರಿಯಲಿದೆ. ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ ಕಳೆದ 24 ಗಂಟೆಗಳಲ್ಲಿ ಬರೋಬ್ಬರಿ 15 ಸೆಂ.ಮೀ ಮಳೆ ದಾಖಲಾಗಿದ್ದು, ರಾಜ್ಯದ ಹಲವು ಭಾಗಗಳಲ್ಲಿ ಉತ್ತಮ ಮಳೆಯಾಗಿದೆ.

ಉತ್ತರ ಒಳನಾಡಿನಲ್ಲಿ ಹಗುರದಿಂದ ಸಾಧಾರಣ ಮಳೆಯಾಗಲಿದ್ದು, ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಬಾಗಲಕೋಟೆ, ಬೀದರ್, ಗದಗ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಹಗುರ ಮಳೆಯ ಮುನ್ಸೂಚನೆ ನೀಡಲಾಗಿದೆ.

ಆಗಸ್ಟ್ 27ರಂದು ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳ ಕೆಲವು ಭಾಗಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಇದೇ ವೇಳೆ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರು ಮತ್ತು ವಿಜಯನಗರ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಹಗುರ ಮಳೆಯಾಗುವ ಮುನ್ಸೂಚನೆ ಇದೆ.

## ನಾಳೆ ಬ್ರಹ್ಮಶ್ರೀ ನಾರಾಯಣಗುರು ಜಯಂತಿ

**ಹಾಸನ:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಕಾರ್ಯಕ್ರಮವನ್ನು ಆ.28 ರಂದು ಬೆಳಿಗ್ಗೆ 11 ಗಂಟೆಗೆ ಹಾಸನಾಂಬ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ಉದ್ಘಾಟನೆ ಮಾಡಲಿದ್ದು, ಶಾಸಕ ಸ್ವರೂಪ್ ಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಎಂ.ಪಟೇಲ್, ಶಾಸಕರಾದ ಹೆಚ್.ಡಿ ರೇವಣ್ಣ, ಸಿ.ಎನ್ ಬಾಲಕೃಷ್ಣ, ಎ.ಮಂಜು, ಹೆಚ್.ಕೆ ಸುರೇಶ್, ಸಿಮೆಂಟ್ ಮಂಜು ಅವರು ಭಾಗವಹಿಸಲಿದ್ದಾರೆ.

ಹೊಳೆನರಸೀಪುರ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಮತ್ತು ಸಾಹಿತಿ ಎಂ.ಜಿ ಪರಮೇಶ್ ಮಡಬಲು ಅವರು ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಲಿದ್ದಾರೆ.

## ಆರೋಗ್ಯ ತಪಾಸಣೆ -ರಕ್ತದಾನ ಶಿಬಿರ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ಅತ್ನಿ ಗ್ರಾಮದಲ್ಲಿ ಷಣ್ಮುಖ ಎಂ.ಸಿ. ಅವರ ಪುಣ್ಯಸ್ಮರಣೆ ಅಂಗವಾಗಿ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರ ಆಯೋಜನೆ ಮಾಡಲಾಗಿತ್ತು.

ಶಿಬಿರದಲ್ಲಿ ಹಾಸನದ ಪುಣ್ಯ ಆಸ್ಪತ್ರೆಯ ಸಹಯೋಗದೊಂದಿಗೆ ನಡೆದ ಆರೋಗ್ಯ ತಪಾಸಣೆಯ ಕಾರ್ಯಕ್ರಮದಲ್ಲಿ ಸುಮಾರು 800ಕ್ಕೂ ಹೆಚ್ಚು ಮಂದಿ ತಪಾಸಣೆಗೆ ಒಳಗಾದರು. ಸುಮಾರು 30ಕ್ಕೂ ಹೆಚ್ಚುಮಂದಿ ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿದರು.

ವೈದ್ಯರಾದ ಡಾ.ಪೂರ್ಣೇಶ್, ಡಾ.ಮಹೇಶ್, ಡಾ ನಂದನ್, ಡಾ.ಶರತ್, ಡಾ.ಪ್ರೀತಮ್, ಡಾ. ಯಶವಂತ್ ಹಾಗೂ ಇನ್ನಿತರ ವೈದ್ಯಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಶಿಬಿರದಲ್ಲಿ ಭಾಗವಹಿಸಿದ ಎಲ್ಲರನ್ನು ತಪಾಸಣೆಗೆ ಒಳಪಡಿಸಿ ಸೂಕ್ತ ಔಷಧ, ಮಾತ್ರೆ ಮತ್ತು ಅನಾರೋಗ್ಯ ಕಂಡುಬಂದವರನ್ನು ಹೆಚ್ಚಿನ ಚಿಕಿತ್ಸೆಗೆ ಸಲಹೆ ನೀಡಿದರು.



ಬಿಎಸ್ಪಿ ರಾಜ್ಯ ಮುಖಂಡ ಅತ್ನಿ ಹರೀಶ, ಪ್ರಸ್ತುತ ದಿನಮಾನದಲ್ಲಿ ಉನ್ನತ ವಿದ್ಯೆ ಗಳಿಸಿದಂತೆ, ಆಡಂಬರ ಜೀವನಕ್ಕೋಸ್ಕರ ಕೆಲವು ಮಕ್ಕಳು ತಂದೆ -ತಾಯಿ ಅನ್ನುವುದನ್ನೇ ಮರೆತು ಹೆತ್ತವರನ್ನು ವೃದ್ಧಾಶ್ರಮಕ್ಕೆ ಸೇರಿಸುತ್ತಿದ್ದಾರೆ. ಇಲ್ಲಿ ಪೂರ್ಣೇಶ್ ಅವರು ತನ್ನ ತಂದೆ ಆಸೆಯಂತೆ ಬಡಜನರಿಗೆ ಅನುಕೂಲವಾಗುವಂತೆ ಈ ರೀತಿಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಮೂಲಕ ಮಾದರಿಯಾಗಿದ್ದಾರೆ ಎಂದು ತಿಳಿಸಿದರು.

ಡಾ ಪೂರ್ಣೇಶ್ ಅವರು ತಾನು ಹಿಂದೆ ಬೆಳೆದ ದಿನಮಾನಗಳನ್ನು ಗಮನದಲ್ಲಿ ಇಟ್ಟುಕೊಂಡು ನನ್ನ ವಿದ್ಯೆಯಿಂದ ನನ್ನ ಗ್ರಾಮದ ಮತ್ತು ಸುತ್ತಮುತ್ತಲಿನ ಗ್ರಾಮದ ಜನಗಳಿಗೆ ಉತ್ತಮವಾದ ಆರೋಗ್ಯವನ್ನು ಕಲ್ಪಿಸಿಕೊಡಬೇಕೆಂಬ ಜನಪರ ಕಾಳಜಿಯನ್ನು ಇಟ್ಟುಕೊಂಡು, ಪುಣ್ಯ ಆಸ್ಪತ್ರೆಯ ಸಹಯೋಗದೊಂದಿಗೆ ಎಲ್ಲಾ ತರಹದ ತಜ್ಞ ವೈದ್ಯರನ್ನು ಗ್ರಾಮಕ್ಕೆ ಕರೆಸಿ ಜನಗಳಿಗೆ ಸಹಕಾರಿಯಾಗಿದ್ದಾರೆ ಎಂದರು.

ಗ್ರಾಮದ ಲೋಕೇಶ್, ಮನು ಕುಮಾರ್, ಕೃಷ್ಣೆಗೌಡ ಕುಟುಂಬದವರು ಉಪಸ್ಥಿತರಿದ್ದರು.

## ವಿಧಾನ ಪರಿಷತ್ ಗೆಲುವಿಗೆ ಬಿಜೆಪಿ ರಣತಂತ್ರ: ವಿಜಯೇಂದ್ರ

• ಪ್ರಜೋದಯ ವರದಿ

**ಬೆಂಗಳೂರು:** ಮುಂಬರುವ ವಿಧಾನ ಪರಿಷತ್ ಚುನಾವಣೆಗೆ ಬಿಜೆಪಿ ಈಗಿನಿಂದಲೇ ಸಿದ್ಧತೆ ಆರಂಭಿಸಿದೆ. ಅಕ್ಟೋಬರ್-ನವೆಂಬರ್‌ನಲ್ಲಿ ನಡೆಯಲಿರುವ ಆಗ್ನೇಯ ಪದವೀಧರರ ಕ್ಷೇತ್ರ, ಪಶ್ಚಿಮ ಪದವೀಧರರ ಕ್ಷೇತ್ರ ಹಾಗೂ ಈಶಾನ್ಯ ಶಿಕ್ಷಕರ ಕ್ಷೇತ್ರಗಳ ಚುನಾವಣೆಯಲ್ಲಿ ಗೆಲುವು ಸಾಧಿಸಲು ಕಾರ್ಯತಂತ್ರ ರೂಪಿಸಲಾಗುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಸಂಬಂಧ ಪಕ್ಷದ ಶಾಸಕರ ವಿಶೇಷ ಸಭೆ ನಡೆಸಿ, ಅಭ್ಯರ್ಥಿ ಮತ್ತು ಸಂಘಟನೆಯನ್ನು ಸಮನ್ವಯಗೊಳಿಸಿ ಚುನಾವಣೆಯನ್ನು ಎದುರಿಸುವ ಕುರಿತು ಚರ್ಚಿಸಲಾಗಿದೆ. ನಮ್ಮೆಲ್ಲ ಶಾಸಕರ ವಿಶೇಷ ಸಭೆ ನಡೆಸಿ ಅಕ್ಟೋಬರ್, ನವೆಂಬರ್‌ನಲ್ಲಿ ನಡೆಯುವ ಆಗ್ನೇಯ ಪದವೀಧರರ ಕ್ಷೇತ್ರ, ಪಶ್ಚಿಮ ಪದವೀಧರರ ಕ್ಷೇತ್ರ ಮತ್ತು ಈಶಾನ್ಯ ಶಿಕ್ಷಕರ ಕ್ಷೇತ್ರಗಳ ಚುನಾವಣೆಯಲ್ಲಿ ಗೆಲುವಿನ ಕುರಿತು ಚರ್ಚಿಸಿದ್ದೇವೆ. ಈ ಮೂರೂ ಕಡೆಯಲ್ಲಿ ಈಗ ನಮ್ಮದೇ ವಿಧಾನ ಪರಿಷತ್ ಸದಸ್ಯರು ಇದ್ದಾರೆ ಎಂದು ತಿಳಿಸಿದರು.



ಯಾವ ರೀತಿ ರಣತಂತ್ರ ರೂಪಿಸಬೇಕು, ಚುನಾವಣೆ ಗೆಲ್ಲಲು ಅಭ್ಯರ್ಥಿ ಮತ್ತು ಸಂಘಟನೆಯನ್ನು ಜೋಡಿಸುವುದು- ಇವೆಲ್ಲ ವಿಚಾರ ಇಟ್ಟುಕೊಂಡು ಸಭೆ ನಡೆಸಲಾಗಿದೆ. ಕೇಂದ್ರ ಸಚಿವರ ಸರ್ಕಾರಿ ಬಂಗಲೆ ನವೀಕರಣಕ್ಕೆ ಬರೋಬ್ಬರಿ 92.35 ಕೋಟಿ ರೂ. ವೆಚ್ಚ, ಏನೆಲ್ಲ ಬದಲಾಗಿದೆ ?

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಲೂಟಿ ಮಾಡಿದ ಹಗರಣದ ಪ್ರಮುಖ ಆರೋಪಿ- ಸಚಿವ ನಾಗೇಂದ್ರ ಅವರು ತನಿಖೆಯ ಬಳಿಕ ನಿರಪರಾಧಿ ಎಂದು ಸಾಬೀತಾದರೆ ಅವರನ್ನು ಮುಖ್ಯಮಂತ್ರಿಯಾಗಿ ಮಾಡಿಕೊಳ್ಳಲಿ. ಇ.ಡಿ. ಚಾರ್ಜ್‌ಶೀಟಿನಲ್ಲೂ ಅವರ ಹೆಸರು ಉಲ್ಲೇಖವಾಗಿದೆ ಎಂದರು.

ಶಿವಮೊಗ್ಗದಲ್ಲಿ ಪ್ರಾಮಾಣಿಕ ಅಧಿಕಾರಿ, ಬೋವಿ ಸಮಾಜದ ಚಂದ್ರಶೇಖರ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಡೆತ್ ನೋಟಿನಲ್ಲೂ ಅಂದಿನ ಸಚಿವ ನಾಗೇಂದ್ರರ ಮೌಖಿಕ ಆದೇಶದ ಮೇರೆಗೆ ಹಣವನ್ನು ತೆಲಂಗಾಣ ರಾಜ್ಯಕ್ಕೆ ವರ್ಗಾಯಿಸಿದ್ದಾಗಿ ತಿಳಿಸಿದ್ದರು. ಬಿಜೆಪಿ ಎತ್ತಿದ ಪ್ರಶ್ನೆ ಗಂಭೀರವಾಗಿದೆ. ದಲಿತರ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಕಾಂಗ್ರೆಸ್ಸಿನವರು ಕೊಳ್ಳೆ ಹೊಡೆದಿದ್ದಾರೆ. ಯಾವುದೇ ಕಾರಣಕ್ಕೂ ಇಂಥ ಭ್ರಷ್ಟರನ್ನು ಮುಂದುವರೆಸಬಾರದು ಎಂದು ಆಗ್ರಹಿಸಿದರಲ್ಲದೆ, ಸಚಿವ ಸ್ಥಾನದಿಂದ ತಕ್ಷಣ ಅವರನ್ನು ಕೈಬಿಡಿ ಎಂದು ಒತ್ತಾಯಿಸಿದರು.

ದಲಿತರ ಪರವಾಗಿ ಧ್ವನಿ ಎತ್ತಿದ ಬಿಜೆಪಿ- ಜೆಡಿಎಸ್‌ನವರನ್ನು ಗೂಂಡಾಗಳೆಂದು ಹೇಳುತ್ತೀರಾ ಎಂದು ಪ್ರಶ್ನಿಸಿದರು. 187 ಕೋಟಿ ಹಣ ಲೂಟಿ ಆಗಿದೆ. ದಲಿತರಿಗೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಆ ಹಣ ವಾಪಸ್ ಬರಬೇಕು. ಆ ಸಮುದಾಯದ ಅಭಿವೃದ್ಧಿಗೆ ಹಣ ಬಳಕೆ ಆಗಬೇಕು ಎಂದು ತಿಳಿಸಿದರು. ಎಲ್ಲಿವರೆಗೆ ಬೇಕೋ ಅಲ್ಲಿಯವರೆಗೆ ಹೋರಾಟಕ್ಕೆ ಸಿದ್ಧ ಎಂದು ಘೋಷಿಸಿದರು.

## ಈದ್ ಮಿಲಾದ್: ಅನ್ನಸಂತರ್ಪಣೆ



• ಪ್ರಜೋದಯ ವರದಿ

**ಅರಕಲಗೂಡು:** ಮುಸ್ಲಿಂ ಧರ್ಮ ಗುರು ಪೈಗಂಬರ್ ಹಜರತ್ ಮಹಮ್ಮದ್ ಅವರ ಜನ್ಮದಿನದ ಸ್ಮರಣಾರ್ಥ ಆಚರಿಸಲಾಗುವ ಈದ್ ಮಿಲಾದ್ ಹಬ್ಬದ ಅಂಗವಾಗಿ ಪಟ್ಟಣದ ಮುಸ್ಲಿಂ ಯುವಕರು ವಿವಿಧ ಸೇವಾ ಕಾರ್ಯಗಳನ್ನು ಬುಧವಾರ ಹಮ್ಮಿಕೊಂಡು ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿದರು.

ಮುಸ್ಲಿಂ ಯುವಕರು ಒಗ್ಗೂಡಿ ಬೆಳಿಗ್ಗೆಯಿಂದಲೇ ಪಟ್ಟಣದ ಬಸ್ ನಿಲ್ದಾಣ ಎದುರು ಪೆಂಡಾಲ್ ನಿರ್ಮಿಸಿ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಹಾಗೂ ತಂಪು ಪಾನೀಯ ನೀಡಿದರು.

ಅಲ್ಲದೆ, ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ಹಣ್ಣು- ಹಂಪಲುಗಳನ್ನು ವಿತರಿಸಿ, ಅವರ ಆರೋಗ್ಯಕ್ಕಾಗಿ ಹಾರೈಸಿದರು. ಇದೇ ಸಂದರ್ಭದಲ್ಲಿ ತಾಲ್ಲೂಕಿನ ಜನರ ಒಳಿತಿಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿ, ಸಮಾಜದಲ್ಲಿ ಸಹೋದರತ್ವ, ಸೌಹಾರ್ದತೆ ಹಾಗೂ ಮಾನವೀಯತೆಯ ಸಂದೇಶವನ್ನು ಸಾರಿದರು.

ಅನ್ನಸಂತರ್ಪಣೆ, ತಂಪು ಪಾನೀಯ ಹಾಗೂ ಸಾರ್ವಜನಿಕ ಆಸ್ಪತ್ರೆಯ ಒಳ ಮತ್ತು ಹೊರ ರೋಗಿಗಳಿಗೆ ಹಣ್ಣು ಹಂಪಲು ನೀಡಿದರು.

ಜಾಮಿಯಾ ಮಸೀದಿಯ ಅಧ್ಯಕ್ಷ ಅಬ್ದುಲ್ ಬಾಸಿತ್, ಮುಖಂಡರಾದ ಮುಸ್ಸು, ಫರಾಜ್, ಗುತ್ತಿಗೆದಾರರಾದ ಸೈಯದ್ ಸಮೀರ್, ಮುಸವಿರ್ ಪಾಷಾ, ಮೋಸಿನ್ ಪಾಷಾ, ರಫಿ, ಮಾಜಿ ಕೆಡಿಪಿ ಸದಸ್ಯ ನಸ್ರುಲ್ಲಾ ಟಿಪ್ಪು ಸೇರಿದಂತೆ ಹಲವಾರು ಮುಸ್ಲಿಂ ಯುವಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಗಗನಕ್ಕೇರಿದ ಸಕ್ಕರೆ, ಈರುಳ್ಳಿ ಬೆಲೆ..!

**ಬೆಂಗಳೂರು:** ರಾಜ್ಯದಲ್ಲಿ ಎದುರಾಗಿರುವ ತೀವ್ರ ಬರಗಾಲ ಮತ್ತು ಮುಂಗಾರು ಮಳೆಯ ಅಭಾವವು ಇದೀಗ ಜನಸಾಮಾನ್ಯರ ಮೇಲೆ ಪರಿಣಾಮ ಬೀರತೊಡಗಿದೆ. ಮಾರುಕಟ್ಟೆಯಲ್ಲಿ ಸಕ್ಕರೆ ಮತ್ತು ಈರುಳ್ಳಿ ಬೆಲೆಗಳು ದಿಢೀರ್ ಗಗನಕ್ಕೇರಿದ್ದು, ಗ್ರಾಹಕರು ಕಂಗಾಲಾಗಿದ್ದಾರೆ.

ಕಳೆದ ಕೆಲವು ವಾರಗಳಿಂದ ಈರುಳ್ಳಿ ಸಗಟು ದರದಲ್ಲಿ ಸರಾಸರಿ ಪ್ರತಿ ಕೆಜಿಗೆ 15 ರೂಪಾಯಿ ಏರಿಕೆಯಾಗಿದೆ. ರಾಜಧಾನಿ ಬೆಂಗಳೂರಿನ ಚಿಲ್ಲರೆ ಮಾರುಕಟ್ಟೆಗಳಲ್ಲಿ ಈ ಹಿಂದೆ 20 ರಿಂದ 30 ರೂಪಾಯಿ ಇದ್ದ ಒಂದು ಕೆಜಿ ಈರುಳ್ಳಿ ಬೆಲೆ, ಇದೀಗ 40 ರಿಂದ 52 ರೂಪಾಯಿ ತಲುಪಿದೆ.

ಮುಂಗಾರು ಮಳೆ ಕೈಕೊಟ್ಟಿದ್ದರಿಂದ ಬಿತ್ತನೆ ಕುಂಠಿತಗೊಂಡಿರುವುದು ಮತ್ತು ನೆರೆ ರಾಜ್ಯ ಮಹಾರಾಷ್ಟ್ರದಲ್ಲೂ ಬೆಳೆ ಹಾನಿಯಾಗಿರುವುದು ಈರುಳ್ಳಿ ಅಭಾವಕ್ಕೆ ಮುಖ್ಯ ಕಾರಣವಾಗಿದೆ. ಮತ್ತೊಂದೆಡೆ, ಎಥೆನಾಲ್ ಉತ್ಪಾದನೆ ಹಾಗೂ ಹಬ್ಬದ ಋತುವಿನ ಹಿನ್ನೆಲೆಯಲ್ಲಿ ಸಕ್ಕರೆಗೆ ಬೇಡಿಕೆ ಹೆಚ್ಚಾಗಿದೆ. ಆದರೆ, ಕಳಪೆ ಇಳುವರಿಯಿಂದ ಪೂರೈಕೆ ಕುಸಿದಿದೆ ಎಂದು ತಿಳಿಸಿದ್ದಾರೆ.

## 2ನೇ ಟೆಸ್ಟ್; ಗೆಲುವಿನ ಸನಿಹದಲ್ಲಿ ಭಾರತ

• ಪ್ರಜೋದಯ ವರದಿ

**ಕೊಲಂಬೊ:** ಇಲ್ಲಿ ನಡೆಯುತ್ತಿರುವ ಭಾರತ ಹಾಗೂ ಶ್ರೀಲಂಕಾ ನಡುವಿನ ಎರಡನೇ ಟೆಸ್ಟ್ ಪಂದ್ಯದ ನಾಲ್ಕನೇ ದಿನದಾಟವನ್ನು ಸಹ ಬೇಗನೇ ಅಂತ್ಯಗೊಳಿಸಲಾಗಿದೆ. ಕೊನೆಯ ಸೆಷನ್ ವೇಳೆ ಆಟಕ್ಕೆ ಮಳೆ ಅಡ್ಡಿಪಡಿಸಿತು. ಹೀಗಾಗಿ ಆಟವನ್ನು ಅಂತ್ಯಗೊಳಿಸಲಾಯಿತು.

ನಾಲ್ಕನೇ ದಿನದ ಆಟದ ಅಂತ್ಯಕ್ಕೆ, ಆತಿಥೇಯ ಶ್ರೀಲಂಕಾ ತನ್ನ ಎರಡನೇ ಇನ್ನಿಂಗ್ಸ್ ನಲ್ಲಿ 6 ವಿಕೆಟ್‌ಗಳನ್ನು ಕಳೆದುಕೊಂಡು 229 ರನ್‌ಗಳನ್ನು ಕಲೆಹಾಕಿದೆ. ಇದರೊಂದಿಗೆ 16 ರನ್‌ಗಳ ಮುನ್ನಡೆ ಸಾಧಿಸಿದೆ. ಪ್ರಸ್ತುತ ಕೇಶರ ನುವಂಥ ಮೂರು ರನ್ ಮತ್ತು ಸೋನಾಲ್ ಸೋನಾಲ್ ದಿನುಷಾ ಏಳು ರನ್ ಬಾರಿಸಿ ಅಜೇಯರಾಗಿ ಉಳಿದಿದ್ದು, ಐದನೇ ದಿನದಾಟಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಭಾರತದ ಪರ ಎರಡನೇ ಇನ್ನಿಂಗ್ಸ್ ನಲ್ಲಿ ಮಾನವ್ ಸುತಾರ್ 2 ವಿಕೆಟ್ ಪಡೆದರೆ, ಉಳಿದವರು ತಲಾ ಒಂದೊಂದು ವಿಕೆಟ್ ಪಡೆದಿದ್ದಾರೆ.



**ಸೋನಲ್ ದಿನುಷಾ ಶತಕ**

ನಾಲ್ಕನೇ ದಿನದಂದು ಶ್ರೀಲಂಕಾ ದಿನವಿಡೀ ಬ್ಯಾಟಿಂಗ್ ಮಾಡಿತು. ಶ್ರೀಲಂಕಾದ ಮೊದಲ ಇನ್ನಿಂಗ್ಸ್‌ನಲ್ಲಿ ಸೋನಲ್ ದಿನುಷಾ ತಮ್ಮ ಸರಣಿಯ ಸತತ ಎರಡನೇ ಶತಕ ಬಾರಿಸುವುದರೊಂದಿಗೆ ದಿನ ಆರಂಭವಾಯಿತು. ಆದಾಗ್ಯೂ, ಶ್ರೀಲಂಕಾ 4ನೇ ದಿನದಂದು ತನ್ನ ಒಟ್ಟು ಮೊತ್ತಕ್ಕೆ ಕೇವಲ 22 ರನ್ ಸೇರಿಸಲಷ್ಟೇ ಶಕ್ತವಾಯಿತು. ಆಫ್-ಸ್ಪಿನ್ನರ್ ಸರಾಂಶ್ ಜೈನ್ ಕೊನೆಯ ಎರಡು ವಿಕೆಟ್‌ಗಳನ್ನು ಪಡೆದು ಲಂಕಾ ಇನ್ನಿಂಗ್ಸ್ ಅಂತ್ಯ ಹಾಡಿದರು. ಹೀಗಾಗಿ ಶ್ರೀಲಂಕಾ ತಂಡಕ್ಕೆ ಫಾಲೋ- ಆನ್ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ.

**92 ರನ್‌ಗಳಿಗೆ ಪಸಿಂದು ಔಟ್**

ಆದ್ದರಿಂದ ನಾಯಕ ಶುಭ್‌ಮನ್ ಗಿಲ್ ಶ್ರೀಲಂಕಾ ತಂಡದ ಮೇಲೆ ಫಾಲೋ-ಆನ್ ಹೇರಿದರು. ಹೀಗಾಗಿ ಎರಡನೇ ಇನ್ನಿಂಗ್ ಆರಂಭಿಸಿದ ಶ್ರೀಲಂಕಾಕ್ಕೆ ಮತ್ತೊಮ್ಮೆ ಉತ್ತಮ ಆರಂಭ ಸಿಗಲಿಲ್ಲ. ಆರಂಭಿಕ ಬ್ಯಾಟ್ಸ್‌ಮನ್ ಲಹಿರು ಉದಾರ ಬೇಗನೆ ಔಟಾದರು. ಆದಾಗ್ಯೂ, ಪಸಿಂದು ಸೂರ್ಯಬಂಡಾರ ಸತತ ಎರಡನೇ ಇನ್ನಿಂಗ್ಸ್‌ನಲ್ಲಿ ಅರ್ಧಶತಕದ ಇನ್ನಿಂಗ್ಸ್ ಆಡಿದರು. ಮೊದಲ ಇನ್ನಿಂಗ್ಸ್‌ನಲ್ಲಿ 80 ರನ್‌ಗಳಿಗೆ ಔಟಾಗಿದ್ದ ಪಸಿಂದು ಎರಡನೇ ಇನ್ನಿಂಗ್ಸ್‌ನಲ್ಲಿ 92 ರನ್‌ಗಳಿಗೆ ಔಟಾಗುವ ಮೂಲಕ ಶತಕ ವಂಚಿತರಾದರು. ಆದಾಗ್ಯೂ ಕಮಿಂದು ಮೆಂಡಿಸ್ ಅವರೊಂದಿಗೆ 115 ರನ್‌ಗಳ ಪಾಲುದಾರಿಕೆಯನ್ನು ಹಂಚಿಕೊಂಡು ತಂಡವನ್ನು ಆರಂಭಿಕ ಆಘಾತದಿಂದ ಹೊರ ತಂದರು.

**4ನೇ ದಿನದಾಟ ಬೇಗನೇ ಅಂತ್ಯ**

ಕಮಿಂದು ಮೆಂಡಿಸ್ ಸರಣಿಯ ಮೊದಲ ಅರ್ಧಶತಕ ಬಾರಿಸಿ ತಂಡವನ್ನು 200 ರನ್‌ಗಳ ಗಡಿ ದಾಟಿಸಿ ಔಟಾದರು. ಇತ್ತ ಪಸಿಂದು ಸೂರ್ಯಬಂಡಾರ 92 ರನ್‌ಗಳ ಇನ್ನಿಂಗ್ಸ್ ಆಡಿ ವಿಕೆಟ್ ಒಪ್ಪಿಸುವ ಮೂಲಕ ಶತಕ ವಂಚಿತರಾದರು. ಹೀಗಾಗಿ ಶ್ರೀಲಂಕಾ 209 ಮತ್ತು 218 ರನ್‌ಗಳ ನಡುವೆ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿತು. ಮಳೆಯಿಂದಾಗಿ ದಿನದ ಆಟ ಸುಮಾರು 45 ನಿಮಿಷಗಳ ಮೊದಲೇ ಮುಕ್ತಾಯವಾಯಿತು.

## ಚ.ರಾ.ಪ.ದಲ್ಲಿಂದು ಯುವ ಸೌರಭ

**ಹಾಸನ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಯುವ ಸೌರಭ ಕಾರ್ಯಕ್ರಮವನ್ನು ಆ.27 ರಂದು ಬೆಳಿಗ್ಗೆ 10.30 ಕ್ಕೆ ಚನ್ನರಾಯಪಟ್ಟಣ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿದೆ.

ಹಾಸನ ಮತ್ತು ಕೊಡಗು ಜಿಲ್ಲೆಯ ಶ್ರೀ ಆದಿಚುಂಚನಗಿರಿ ಶಾಖಾ ಮಠದ ಕಾರ್ಯದರ್ಶಿ ಶ್ರೀ ಶಂಭುನಾಥ ಸ್ವಾಮೀಜಿ ಅವರು ಕಾರ್ಯಕ್ರಮದಲ್ಲಿ ಆಶೀರ್ವಚನ ವಹಿಸಲಿದ್ದಾರೆ, ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ ಶಿವಲಿಂಗೇಗೌಡ ಅವರು ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದು, ಶ್ರವಣಬೆಳಗೊಳ ಶಾಸಕ ಡಾ.ಸಿ.ಎನ್. ಬಾಲಕೃಷ್ಣ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಎಂ.ಪಟೇಲ್, ಶಾಸಕರಾದ ಹೆಚ್.ಡಿ ರೇವಣ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ಸೂರಜ್ ರೇವಣ್ಣ, ನಗರಾಭಿವೃದ್ಧಿ ಪ್ರಾಧಿಕಾರಾದ ಅಧ್ಯಕ್ಷ ಪಟೇಲ್ ಶಿವಪ್ಪ, ಇನ್ನಿತರರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

### ದೇಶದಲ್ಲಿ ಶಾಂತಿ, ಸೌಹಾರ್ದತೆ, ಸಹಬಾಳ್ವೆ ನೆಲೆಸಲಿ ಎಂದು ವಿಶೇಷ ಪ್ರಾರ್ಥನೆ

## ಶಾಂತಿ, ಸೌಹಾರ್ದತೆಯ ಸಂದೇಶ ಸಾರಿದ ನಬಿ ದಿನಾಚರಣೆ

• ಪ್ರಜೋದಯ ವರದಿ

**ಸಕಲೇಶಪುರ:** ಪ್ರವಾದಿ ಮಹಮ್ಮದ್ (ಸ) ಅವರ 1501ನೇ ಜನ್ಮದಿನದ ಅಂಗವಾಗಿ ತಾಲ್ಲೂಕಿನ ವಿವಿಧೆಡೆ ಮುಸ್ಲಿಮರು ಸಂತಸ ಹಾಗೂ ಸಂಭ್ರಮದಿಂದ ನಬಿ ದಿನಾಚರಣೆಯನ್ನು ಆಚರಿಸಿದರು.

ತಾಲ್ಲೂಕಿನ ಹಾನುಬಾಳು, ಕಾಡುಮನೆ, ಮಾರನಹಳ್ಳಿ, ದೇಕ್ಲಾ, ರಕ್ಷಿದಿ, ಆನೆಮಹಲ್, ಕುಡುಗರಹಳ್ಳಿ, ಆಚಂಗಿ, ಹಲಸುಲಿಗೆ, ಸುಂಡೆಕೆರೆ, ಬಾಳ್ಳುಪೇಟೆ, ಹೊಸೂರು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ನಬಿ ದಿನಾಚರಣೆಯನ್ನು ಆಚರಿಸಿ, ದೇಶದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಸಹಬಾಳ್ವೆ ನೆಲೆಸಲಿ ಎಂದು ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

ಆಚಂಗಿ ಜುಮಾ ಮಸೀದಿಯ ಅಧ್ಯಕ್ಷ ಹಮೀದ್ ಹಾಜಿ ಮಾತನಾಡಿ, ಪ್ರವಾದಿ ಮಹಮ್ಮದ್ (ಸ) ಅವರ 1501ನೇ ಜನ್ಮದಿನದ ಅಂಗವಾಗಿ ಆಚಂಗಿ ಜಮಾತಿನ ಆಡಳಿತ ಸಮಿತಿ ಹಾಗೂ ಸದಸ್ಯರ ನೇತೃತ್ವದಲ್ಲಿ ಮೀಲಾದ್ ರ್‍ಯಾಲಿ ಆಯೋಜಿಸಲಾಗಿದೆ. ಪ್ರವಾದಿಯವರ ಜೀವನ ಸಂದೇಶಗಳನ್ನು ಪಾಲಿಸುವುದರೊಂದಿಗೆ ದೇಶದ ಶಾಂತಿ, ಸೌಹಾರ್ದತೆ ಹಾಗೂ ಸಮೃದ್ಧಿಗಾಗಿ ಪ್ರಾರ್ಥಿಸುವುದು ಆಚರಣೆಯ ಉದ್ದೇಶವಾಗಿದೆ ಎಂದರು.



ಅಬ್ಬು ಉಸ್ತಾದ್ ಮಾತನಾಡಿ, ಧರ್ಮ ಹಾಗೂ ಜಾತಿಯ ಎಲ್ಲೆಗಳನ್ನು ಮೀರಿ ಸ್ನೇಹ, ಪ್ರೀತಿ ಮತ್ತು ಮಾನವೀಯ ಸಂಬಂಧಗಳನ್ನು ಬೆಳೆಸಿಕೊಳ್ಳಬೇಕು. ಪರಸ್ಪರರ ಹಬ್ಬ, ಆಚರಣೆ ಹಾಗೂ ಸಂಭ್ರಮಗಳಲ್ಲಿ ಭಾಗವಹಿಸುವ ಮೂಲಕ ಸಮಾಜದಲ್ಲಿ ಉತ್ತಮ ಬಾಂಧವ್ಯ ಬೆಳೆಸಬೇಕು ಎಂದು ಹೇಳಿದರು.

ದೇಶವು ಶಾಂತಿ ಮತ್ತು ಸೌಹಾರ್ದತೆಯ ಬೀಡಾಗಿ ಮುಂದುವರಿಯಬೇಕು. ಎಲ್ಲರೂ ಸಹಬಾಳ್ವೆಯಿಂದ ಬದುಕುವ ವಾತಾವರಣ ನಿರ್ಮಾಣವಾಗಬೇಕು. ದೇಶದ ಜನತೆಗೆ ಎಲ್ಲ ರೀತಿಯಲ್ಲೂ ಒಳಿತಾಗಲಿ ಹಾಗೂ ಶಾಂತಿ ನೆಲೆಸಲಿ ಎಂದು ಪ್ರಾರ್ಥಿಸಿದರು.

ಮಸೀದಿ ಆವರಣವನ್ನು ನಬಿ ದಿನಾಚರಣೆಯ ಅಂಗವಾಗಿ ಬಂಟಿಂಗ್‌ಗಳು ಹಾಗೂ ವಿವಿಧ ಅಲಂಕಾರಗಳಿಂದ ಸಿಂಗಾರಿಸಲಾಗಿತ್ತು. ವಿವಿಧ ಮೊಹಲ್ಲಾಗಳ ಮಸೀದಿಗಳ ನಿವಾಸಿಗಳು ಮೆರವಣಿಗೆಯಲ್ಲಿ ಭಾಗವಹಿಸಿ ಪ್ರವಾದಿಯವರ ಗುಣಗಾನ ಹಾಗೂ ಸಲಾತ್ ಸಲ್ಲಿಸಿದರು. ಮಕ್ಕಳಿಗಾಗಿ ವಿವಿಧ ವಿಭಾಗಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಆಚಂಗಿ ಜುಮಾ ಮಸೀದಿಯ ಅಧ್ಯಕ್ಷ ಹಮೀದ್ ಹಾಜಿ, ಕಾರ್ಯದರ್ಶಿ, ಉಪಾಧ್ಯಕ್ಷ ಶಂಶು, ಖತೀಬರಾದ ರಫೀಕ್ ಮದನಿ, ಇಬ್ರಾಹಿಂ, ಖಲೀಲ್, ಅಝೀಜ್ ಸೇರಿದಂತೆ ಜಮಾತಿನ ಸದಸ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಇಂದು ವಿಶೇಷ ಅರಿವು

**ಹಾಸನ:** ಭಾರತೀಯ ರೆಡ್ ಕ್ರಾಸ್ ಜಿಲ್ಲಾ ಘಟಕ ಹಾಗೂ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಯುವ ರೆಡ್ ಕ್ರಾಸ್ ಘಟಕ ಮತ್ತು ಅರ್ಥಶಾಸ್ತ್ರ ವಿಭಾಗದ ಸಂಯುಕ್ತಾಶ್ರಯದಲ್ಲಿ ಆ.27 ರಂದು ಬೆಳಿಗ್ಗೆ 11 ಗಂಟೆಗೆ ಕಾಲೇಜಿನ ಆವರಣದಲ್ಲಿ ವಿಶ್ವ ಜನಸಂಖ್ಯಾ ದಿನಾಚರಣೆ ಅಂಗವಾಗಿ ''ವಿಶೇಷ ಅರಿವು ಹಾಗೂ ಆಧ್ಯಾತ್ಮಿಕ ಚಿಂತನಾ ಸಭೆ'' ಆಯೋಜಿಸಲಾಗಿದೆ.

ಕೆಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ಡಾ. ನಿಶ್ಚಲಾನಂದನಾಥ ಸ್ವಾಮೀಜಿ ಅವರು ಆಶೀರ್ವಚನ ನೀಡಲಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ ಅವರು ಉದ್ಘಾಟಿಸಲಿದ್ದು, ಪ್ರಾಂಶುಪಾಲ ಪ್ರೊ.ಬಾಲಕೃಷ್ಣ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಪದಾಧಿಕಾರಿಗಳು, ನಿರ್ದೇಶಕರು, ಕಾಲೇಜಿನ ಬೋಧಕ ವೃಂದ ಹಾಗೂ ಯುವ ರೆಡ್ ಕ್ರಾಸ್ ಸ್ವಯಂ ಸೇವಕರು ಭಾಗವಹಿಸಲಿದ್ದಾರೆ.

ಜನಸಂಖ್ಯೆ, ಆರೋಗ್ಯ, ಶಿಕ್ಷಣ, ಪರಿಸರ ಸಂರಕ್ಷಣೆ ಹಾಗೂ ಸಾಮಾಜಿಕ ಜವಾಬ್ದಾರಿಯ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ.

ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸುವಂತೆ ಮನವಿ ಮಾಡಲಾಗಿದೆ.

## ಗೃಹರಕ್ಷಕ ದಳದ ಸಿಬ್ಬಂದಿ ನೆರವಿಗೆ ಧಾವಿಸಿ

• ಪ್ರಜೋದಯ ವರದಿ

### ಸಚಿವ ಕೆ.ಎಂ.ಶಿವಲಿಂಗೇಗೌಡರಿಗೆ ಮನವಿ

**ಅರಸೀಕೆರೆ:** ಶಿಸ್ತು ಮತ್ತು ಸಮ್ಯಮದ ಜತೆಗೆ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಗೃಹ ರಕ್ಷಕ ದಳದ ಸಿಬ್ಬಂದಿಗಳು ಶ್ರಮಿಸುತ್ತಿದ್ದರೂ ಗೃಹರಕ್ಷಕ ಮತ್ತು ರಕ್ಷಕಿ ಸಿಬ್ಬಂದಿಗಳಿಗೆ ಅಭದ್ರತೆ ಕಾಡುತ್ತಿದ್ದು, ನಮ್ಮ ನೆರವಿಗೆ ಬರುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರಿಗೆ ಗೃಹ ರಕ್ಷಕ ದಳದ ಸಿಬ್ಬಂದಿಗಳು ಮನವಿ ಮಾಡಿದರು.

ಗೃಹ ರಕ್ಷಕ ದಳದ ಜಿಲ್ಲಾ ಕಮಾಂಡ್ ಕೆ.ಪಿ.ವಿರೂಪಾಕ್ಷ ಅವರ ನೇತೃತ್ವದಲ್ಲಿ ಸಚಿವರನ್ನು ಭೇಟಿ ಮಾಡಿದ ನೂರಾರು ಗೃಹರಕ್ಷಕ ಮತ್ತು ರಕ್ಷಕಿಯರು ತಾವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸಚಿವರ ಮುಂದೆ ಅಳಲು ತೋಡಿಕೊಂಡರು.

ಕೆ.ಪಿ.ವಿರೂಪಾಕ್ಷ ಅವರು ಮಾತನಾಡಿ, ಸಮಾಜಕ್ಕೆ ಸೇವೆ ಸಲ್ಲಿಸುವ ದೀಕ್ಷೆಯೊಂದಿಗೆ ಗೃಹರಕ್ಷಾ ದಳದ ಸಿಬ್ಬಂದಿಗಳು ಸೇವೆ ಸಲ್ಲಿಸುತಿದ್ದೇವೆ. ಆದರೆ, ನಮ್ಮ ಕುಟುಂಬಕ್ಕೆ ಅಭದ್ರತೆ ಕಾಡುತ್ತಿದೆ ಪೊಲೀಸ್ ಇಲಾಖೆ ಕೂಡ ನಮ್ಮ ಸೇವೆಯನ್ನು ಪುರಸ್ಕರಿಸುತ್ತಿಲ್ಲ. ಸಚಿವರು ಇದನ್ನು ಗಂಭೀರವಾಗಿ ಪರಿಗಣಿಸಿ ಪೊಲೀಸ್ ಇಲಾಖೆ ಸೇರಿದಂತೆ ತಾಲ್ಲೂಕು ಕಚೇರಿ, ರಾಜ್ಯ ಸಾರಿಗೆ ಸಂಸ್ಥೆ, ಅಗ್ನಿಶಾಮಕ ದಳ ಹಾಗೂ ಇತರೆ ಸರ್ಕಾರಿ ಕಚೇರಿಗಳಲ್ಲಿ ಹೋಮ್ ಗಾರ್ಡ್ಸ್‌ಗಳು ಕೆಲಸ ಮಾಡಲು ಅವಕಾಶಗಳಿದ್ದು, ಈ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರೊಂದಿಗೆ ಮಾತನಾಡಿ, ಗೃಹ ರಕ್ಷಕ ದಳದ ಸಿಬ್ಬಂದಿಗಳ ನೆರವಿಗೆ ಬರುವಂತೆ ಮನವಿ ಮಾಡಿಕೊಂಡರು.



ಹೋಮ್ ಗಾರ್ಡ್ಸ್‌ಗಳ ಮನವಿಯನ್ನು ಆಲಿಸಿದ ಸಚಿವರು, ತಾವು ಎದುರಿಸುತ್ತಿರುವ ಸಮಸ್ಯೆ ನನ್ನ ಗಮನದಲ್ಲಿದ್ದು ನಿಮಗೆ ಮತ್ತು ನಿಮ್ಮ ಕುಟುಂಬಕ್ಕೆ ಸೂಕ್ತ ಭದ್ರತೆ ಒದಗಿಸಿಕೊಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿಯೂ ಅವರು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಗೃಹ ರಕ್ಷಕ ದಳದ ಸಹಾಯಕ ಬೋಧಕರಾದ ಹಾಜಿ ರಾಖಾನಂ,ಎಸ್,ಜೆ ಶರತ್, ತಾಲ್ಲೂಕು ಘಟಕ ಅಧಿಕಾರಿ ಶಿವರಾಜ್, ಕಣಕಟ್ಟೆ ಘಟಕ ಅಧಿಕಾರಿ ಮಹಮ್ಮದ್ ಕಲಂದರ್, ಬಾಣಾವರ ಘಟಕದ ಅಧಿಕಾರಿ ಕುಮಾರ್ ನಾಯ್ಕ, ಹಾರನಹಳ್ಳಿ ಘಟಕ ಅಧಿಕಾರಿ ದೇವರಾಜ್ ನಾಯ್ಕ, ಗಂಡಸಿ ಘಟಕ ಅಧಿಕಾರಿ ಕೆಂಪ ತಿಮ್ಮೇಗೌಡ, ದೊಡ್ಡ ಮೇಟಿಕುರ್ಕೆ ಘಟಕದ ಅಧಿಕಾರಿ ರೇಣುಕ ಕುಮಾರ್, ಬೆಳಗುಂಬ ಘಟಕಾಧಿಕಾರಿ ವಿಶ್ವನಾಥ್, ಕೋಳಗುಂದ ಘಟಕದ ಅಧಿಕಾರಿ ಹೇಮಣ್ಣ ಮತ್ತಿತರರು ಉಪಸ್ಥಿತರಿದ್ದರು.

CMYK CMYK CMYK CMYK

# ಉತ್ತರ ನೇಪಾಳದಲ್ಲಿ ಪ್ರವಾಹ

## 22 ಮಂದಿ ಮೃತ | ಬಿಹಾರದಲ್ಲಿ ಹೈ ಅಲರ್ಟ್

• ಪ್ರಜೋದಯ ವರದಿ

**ಪಟ್ನಾ:** ಉತ್ತರ ನೇಪಾಳದಲ್ಲಿ ಬುಧವಾರ ದಿಢೀರ್ ಪ್ರವಾಹ ಉಂಟಾಗಿದ್ದು, ಗಡಿ ಪ್ರದೇಶ ಮತ್ತು ತಗ್ಗು ಪ್ರದೇಶದ ಜಿಲ್ಲೆಗಳಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ. ಭೋಟೆ ಕೊಶಿ ಮತ್ತು ತ್ರಿಶೂಲಿ ನದಿಗಳು ಉಕ್ಕಿ ಹರಿಯುತ್ತಿವೆ. ಅದರ ಪರಿಣಾಮ ಬಿಹಾರದಲ್ಲಿ ಪ್ರವಾಹ ಸೃಷ್ಟಿಯಾಗುವ ಸಾಧ್ಯತೆ ಇದ್ದು, ಇಲ್ಲಿಯೂ ಮುನ್ನೆಚ್ಚರಿಕೆ ಕ್ರಮಗಳನ್ನು ಘೋಷಿಸಲಾಗಿದೆ.

ನದಿ ನೀರಿನಲ್ಲಿ ದಿಢೀರ್ ಏರಿಕೆಯು ನೇಪಾಳದ ರಸುವಾ ಜಿಲ್ಲೆಯ ಟಿಮೂರ್ ಮತ್ತು ಸಮೀಪದ ಸ್ಯಾಫ್ರುಬೆಸಿಯಲ್ಲಿ ಭಾರಿ ವಿನಾಶ ಸೃಷ್ಟಿಸಿದೆ. ವಾಹನ ಮತ್ತು ಇತರೆ ಸಾಮಗ್ರಿಗಳು ನೀರಿನಲ್ಲಿ ಕೊಚ್ಚಿ ಹೋಗಿವೆ ಎಂದು ನೇಪಾಳ ಸೇನೆ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಹಿನ್ನಲೆಯಲ್ಲಿ ಬಿಹಾರದ ಗಂಡಕ್ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗುವ ಸಾಧ್ಯತೆ ಇದ್ದು, ಪಶ್ಚಿಮ ಚಂಪಾರನ್ ಜಿಲ್ಲೆಯ ಬಗಹಾ ಅಧಿಕಾರಿಗಳಿಗೆ ಮುನ್ನೆಚ್ಚರಿಕಾ ಕ್ರಮಕ್ಕೆ ಸೂಚಿಸಲಾಗಿದೆ. ವಾಲ್ಮೀಕಿ ನಗರ ಬ್ಯಾರೇಜ್‌ಗೆ ಭದ್ರತೆ ಹೆಚ್ಚಿಸಲಾಗಿದ್ದು, ಎಚ್ಚರವಹಿಸುವಂತೆ ನೀರಾವರಿ ಇಲಾಖೆಯು ಅಧಿಕಾರಿಗಳಿಗೆ ಸೂಚಿಸಿದೆ.

ಗಂಡಕ್ ನದಿಪಾತ್ರದಲ್ಲಿ ವಾಸಿಸುವ ಜನರು ಮತ್ತು ತಗ್ಗುಪ್ರದೇಶಗಳ ಜನರಿಗೆ ಮುನ್ನೆಚ್ಚರಿಕೆ ನೀಡಲಾಗಿದ್ದು, ಅಧಿಕಾರಿಗಳ ಸೂಚನೆಗಳನ್ನು ಪಾಲಿಸುವಂತೆ ತಿಳಿಸಲಾಗಿದೆ. ಪರಿಸ್ಥಿತಿ ನಿರ್ವಹಣೆಗೆ ಉನ್ನತ ಮಟ್ಟದ ಅಧಿಕಾರಿಗಳ ತಂಡ ರಚಿಸಲಾಗಿದ್ದು, ಮುಖ್ಯ ಕಾರ್ಯದರ್ಶಿ ಮತ್ತು ಡಿಜಿಪಿ ಖುದ್ದು ಪರಿಸ್ಥಿತಿಯ ಅವಲೋಕನ ನಡೆಸಲಿದ್ದಾರೆಂದು ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಹೇಳಿದ್ದಾರೆ.

ಭೋಟೆ ಕೊಶಿ ಮತ್ತು ತ್ರಿಶೂಲಿ ನದಿಗಳ ಪ್ರವಾಹದ ಹಿನ್ನಲೆಯಲ್ಲಿ ರಸುವಾ, ನುವಾಕೋಟ್, ಧಾಡಿಂಗ್, ಚಿತಾವನ್ ಮತ್ತು ಗೊರ್ಖಾ ಜಿಲ್ಲೆಗಳ ಜನರು ಮುಂದಿನ ಆದೇಶದವರೆಗೂ ಎಚ್ಚರಿಕೆ ವಹಿಸುವಂತೆ ನೇಪಾಳದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಹೇಳಿಕೆಯಲ್ಲಿ ತಿಳಿಸಿದೆ.

ಪ್ರವಾಹದ ಹಾನಿಯ ಪ್ರಮಾಣವು ಅತ್ಯಂತ ದೊಡ್ಡದಾಗಿದ್ದು, ಭಾರಿ ವಿನಾಶ ಆಗಿದೆ ಎಂದು ರಸುವಾದ ಸಹಾಯಕ ಮುಖ್ಯ ಜಿಲ್ಲಾ ಅಧಿಕಾರಿ ಧ್ರುವ ಪ್ರಸಾದ್ ಅಧಿಕಾರಿ ತಿಳಿಸಿದ್ದಾರೆ.

ಕಸ್ಟಮ್ಸ್ ಇಲಾಖೆಯ ಕಟ್ಟಡದ ಬಳಿ ನಿಲ್ಲಿಸಿದ್ದ ಹಲವು ವಾಹನಗಳು ಮತ್ತು ವಸ್ತುಗಳು ಸಹ ನೀರಿನಲ್ಲಿ ಕೊಚ್ಚಿಹೋಗಿವೆ ಎಂದು ರಸುವಾದ ಮುಖ್ಯ ಕಸ್ಟಮ್ಸ್ ಅಧಿಕಾರಿ ರಾಜೇಂದ್ರ ದುಂಗಾನಾ ತಿಳಿಸಿದ್ದಾರೆ.

ನೇಪಾಳ ಸೇನೆ, ಸಶಸ್ತ್ರ ಪೊಲೀಸ್ ಪಡೆ ಮತ್ತು ನೇಪಾಳ ಪೊಲೀಸ್ ಅಧಿಕಾರಿಗಳನ್ನು ರಸುವಾ ಮತ್ತು ಸುತ್ತಮುತ್ತಲಿನ ಪ್ರದೇಶಕ್ಕೆ ಕಳುಹಿಸಲಾಗಿದೆಂದು ನೇಪಾಳದ ಪ್ರಧಾನಿ ಕಚೇರಿ ತಿಳಿಸಿದೆ.



## 105 ಭಾರತೀಯರು ಸೇರಿ 400 ಮಂದಿ ನಾಪತ್ತೆ

ಉತ್ತರ ನೇಪಾಳದಲ್ಲಿ ಹಠಾತ್ ಪ್ರವಾಹ ಸಂಭವಿಸಿದ್ದು, ರಸುವಾ ಜಿಲ್ಲೆಯಲ್ಲಿರುವ ಹಳ್ಳಿಗಳ ಹಲವು ಮನೆಗಳು ಕೊಚ್ಚಿ ಹೋಗಿವೆ. ಅಧಿಕಾರಿಗಳು ಹೈ ಅಲರ್ಟ್ ಘೋಷಿಸಿದ್ದಾರೆ. ಪ್ರವಾಹದಲ್ಲಿ 22 ಮಂದಿ ಮೃತಪಟ್ಟಿರುವುದಾಗಿ ಪ್ರಾಥಮಿಕ ವರದಿ ತಿಳಿಸಿದೆ.

ಟಿಬೆಟ್‌ನಲ್ಲಿ ಹಿಮನದಿ ಸ್ಫೋಟ ಸಂಭವಿಸಿದ ಕಾರಣ ಅಪಾರ ಪ್ರಮಾಣದ ನೀರು ಹರಿದುಬಂದು ಪ್ರವಾಹ ಸ್ಥಿತಿ ಎದುರಾಗಿದೆ ಎಂದು ಅಂದಾಜಿಸಲಾಗಿದೆ.

ಸ್ಥಳೀಯ ಕಾಲಮಾನ ಬೆಳಿಗ್ಗೆ 9ಕ್ಕೆ ಭೋಟೆ ಕೋಸಿ ನದಿಯಲ್ಲಿ ಏಕಾಏಕಿ ನೀರಿನ ಪ್ರಮಾಣ ಏರಿಕೆಯಾಗಿದೆ. ಅದರಿಂದಾಗಿ ನದಿ ತಟದಲ್ಲಿರುವ ರಸುವಾ ಜಿಲ್ಲೆ ಭೀಕರ ಪ್ರವಾಹಕ್ಕೆ ತುತ್ತಾಗಿದೆ. ಹಲವು ಹಳ್ಳಿಗಳಲ್ಲಿ ಮನೆಗಳು, ವಾಹನ, ಸೇತುವೆಗಳು ಕೊಚ್ಚಿಹೋಗಿವೆ ಎಂದು ನೇಪಾಳ ಸೇನೆ ಹೇಳಿಕೆಯಲ್ಲಿ ತಿಳಿಸಿದೆ.

ರಸುವಾ ಜಿಲ್ಲೆಯು ಕಠ್ಮಂಡುವಿನ ಈಶಾನ್ಯ ಭಾಗದಲ್ಲಿದ್ದು, ಟಿಬೆಟ್ ಗಡಿಯಿಂದ ಸುಮಾರು 125 ಕಿ.ಮೀ ದೂರದಲ್ಲಿದೆ. ಈ ಭೀಕರ ಹಠಾತ್ ಪ್ರವಾಹದಲ್ಲಿ ಸುಮಾರು 400 ಮಂದಿ ನಾಪತ್ತೆಯಾಗಿದ್ದು, ಅವರಲ್ಲಿ ಕನಿಷ್ಠ 105 ಭಾರತೀಯರು ಸೇರಿದ್ದಾರೆ. ಪ್ರವಾಹದಲ್ಲಿ ಹಲವರು ಮೃತಪಟ್ಟಿರುವ ಶಂಕೆಯಿದೆ. ಜೊತೆಗೆ ಕನಿಷ್ಠ 12 ಜಲವಿದ್ಯುತ್ ಯೋಜನೆಗಳಿಗೆ ಹಾನಿಯಾಗಿದೆ.

ರಸುವಾದಲ್ಲಿ ಉಂಟಾದ ಪ್ರವಾಹದ ಕಾರಣದಿಂದಾಗಿ ಒಟ್ಟು 384 ಪ್ರಯಾಣಿಕರು, ಅವರಲ್ಲಿ 291 ವಿದೇಶಿಯರು ಮತ್ತು 93 ನೇಪಾಳಿ ಪ್ರಜೆಗಳು ನಾಪತ್ತೆಯಾಗಿದ್ದಾರೆ. ಈ ಪ್ರಯಾಣಿಕರಲ್ಲಿ ಕನಿಷ್ಠ 105 ಭಾರತೀಯ ಪ್ರವಾಸಿಗರು, 37 ಅನಿವಾಸಿ ಭಾರತೀಯರು ಹಾಗೂ ಅಮೇರಿಕಾ, ಮಲೇಷ್ಯಾ, ಯುಕೆ, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ ಮತ್ತು ನೆದರ್‌ಲ್ಯಾಂಡ್ಸ್‌ನ ಪ್ರವಾಸಿಗರು ಸೇರಿದ್ದಾರೆಂದು ನೇಪಾಳ ಪ್ರವಾಸೋದ್ಯಮ ಮಂಡಳಿ ಹೇಳಿದೆ.

ಸಹಾಯಕ್ಕಾಗಿ ನೇಪಾಳ ಪ್ರವಾಸೋದ್ಯಮ ಮಂಡಳಿಯು ಉಚಿತ ತುರ್ತು ಸಹಾಯವಾಣಿ ತೆರೆದಿದ್ದು, 1234, ಹಾಟ್‌ಲೈನ್ ಸಂಖ್ಯೆ 1144 ಅಥವಾ ಪ್ರವಾಸಿ ಪೊಲೀಸ್ ಸಹಾಯವಾಣಿ ಸಂಖ್ಯೆ 9851289445 ಅನ್ನು ಬಿಡುಗಡೆ ಮಾಡಿದೆ. ಕಣಿವೆಗಳ ಮೂಲಕ ರಭಸದಿಂದ ನುಗ್ಗಿ ಬರುತ್ತಿರುವ ಮಣ್ಣು ಮಿಶ್ರಿತ ನೀರಿನ ಪ್ರವಾಹದ ಭೀಕರ ದೃಶ್ಯಗಳ ವಿಡಿಯೋಗಳು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿವೆ.

## ಪ್ರಧಾನಿ ಬಾಲೇಂದ್ರ ಶಾ ಜೊತೆ ಮೋದಿ ಮಾತುಕತೆ: ನೆರವಿನ ಭರವಸೆ

• ಪ್ರಜೋದಯ ವರದಿ

**ನವದೆಹಲಿ:** ನೇಪಾಳದಲ್ಲಿ ಸಂಭವಿಸಿದ ಭೀಕರ ಪ್ರವಾಹಕ್ಕೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರು ನೇಪಾಳದ ಪ್ರಧಾನಿ ಬಾಲೇಂದ್ರ ಶಾ ಅವರೊಂದಿಗೆ ಬುಧವಾರ ದೂರವಾಣಿ ಮೂಲಕ ಮಾತನಾಡಿ, ಮೃತರಿಗೆ ಸಂತಾಪ ಸೂಚಿಸಿದ್ದಾರೆ. ರಕ್ಷಣಾ ಮತ್ತು ಪರಿಹಾರ ಕಾರ್ಯಗಳಿಗೆ ಭಾರತದಿಂದ ಅಗತ್ಯವಿರುವ ಎಲ್ಲಾ ರೀತಿಯ ಮಾನವೀಯ ನೆರವು ನೀಡುವುದಾಗಿ ಭರವಸೆ ನೀಡಿದ್ದಾರೆ.

ಈ ಕಷ್ಟದ ಸಂದರ್ಭದಲ್ಲಿ ನೇಪಾಳದ ಸಹೋದರಸಹೋದರಿಯರೊಂದಿಗೆ ಭಾರತದ ಜನತೆ ನಿಂತಿದ್ದಾರೆ. ನೇಪಾಳಕ್ಕೆ ಅಗತ್ಯವಿರುವ ಎಲ್ಲ ರೀತಿಯ ಮಾನವೀಯ ನೆರವು ನೀಡಲು ಭಾರತ ಸಿದ್ಧವಿದೆ. ರಕ್ಷಣಾ ಮತ್ತು ಪರಿಹಾರ ಕಾರ್ಯಗಳ ಕುರಿತು ನಮ್ಮ ತಂಡಗಳು ನೇಪಾಳದ ಅಧಿಕಾರಿಗಳೊಂದಿಗೆ ನಿಕಟವಾಗಿ ಸಮನ್ವಯ ಸಾಧಿಸುತ್ತಿವೆ ಎಂದು ಮೋದಿ ಎಕ್ಸ್‌ನಲ್ಲಿ ತಿಳಿಸಿದ್ದಾರೆ.

ಇದೇ ವೇಳೆ, ನೇಪಾಳದಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಅಲ್ಲಿನ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದೆ. ಪ್ರವಾಹದಿಂದ ಸಂತ್ರಸ್ತರಾಗಿರುವ ಭಾರತೀಯರನ್ನು ಶೀಘ್ರವಾಗಿ ರಕ್ಷಿಸಲು ಹಾಗೂ ಪರಿಹಾರ ಕಾರ್ಯಾಚರಣೆಗಳನ್ನು ಬಲಪಡಿಸಲು ನೇಪಾಳ ಸರ್ಕಾರದೊಂದಿಗೆ ಸಮನ್ವಯ ಸಾಧಿಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಅರೇಹಳ್ಳಿಯಲ್ಲಿ ಸಂಭ್ರಮದ ಈದ್ ಮಿಲಾದ್




• ಪ್ರಜೋದಯ ವರದಿ

**ಅರೇಹಳ್ಳಿ:** ಬೇಲೂರು ತಾಲ್ಲೂಕು ಅರೇಹಳ್ಳಿಯ ನೂರುಲ್ ಇಸ್ಲಾಂ ಮಸೀದಿ ಹಾಗು ಮದರಸಾ ವತಿಯಿಂದ ಪ್ರವಾದಿ ಮೊಹಮ್ಮದ್ ಪೈಗಂಬರ್ ಅವರ 1501ನೇ ಜನ್ಮದಿನದ ಅಂಗವಾಗಿ ಈದ್ ಮಿಲಾದ್ ಆಚರಣೆ ಹಾಗು ಶಾಂತಿಯುತ ಜಾಥಾ ನಡೆಯಿತು.

ನೂರುಲ್ ಇಸ್ಲಾಂ ಮಸೀದಿ ಬಳಿಯಿಂದ ಆರಂಭಗೊಂಡ ಜಾಥಾದಲ್ಲಿ ಮುಸ್ಲಿಂ ಸಮು ದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಜಾಥಾವು ಅರೇಹಳ್ಳಿಯ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.

ಮೌಲಾನಾ ಶರೀಫ್ ಮಿಸ್ಬಾಹಿ ಅವರು ಮಾತನಾಡಿ, ಇಸ್ಲಾಂ ಎಂದಿಗೂ ಕ್ರೌರ್ಯ, ಭೀಕರತೆ ಹಾಗು ಹಿಂಸೆಯನ್ನು ಪ್ರಚೋದಿಸುವುದಿಲ್ಲ. ಇಸ್ಲಾಂ ವಿಶ್ವಶಾಂತಿ ಮತ್ತು ಸೌಹಾರ್ದತೆಯನ್ನು ಸಾರುವ ಧರ್ಮವಾಗಿದೆ. ಪವಿತ್ರ ಕುರಾನ್‌ನಲ್ಲಿಯೂ ಹಿಂಸೆಯನ್ನು ಪ್ರೋತ್ಸಾಹಿಸುವ ಸಂದೇಶವಿಲ್ಲವೆಂದರು. ಅರಬ್ ರಾಷ್ಟ್ರದಲ್ಲಿ ಸಾಮಾಜಿಕ ಹಾಗು ಧಾರ್ಮಿಕ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗಳನ್ನು ತಂದ ಪ್ರವಾದಿ ಮೊಹಮ್ಮದ್ ಪೈಗಂಬರ್ ಅವರ ಶಾಂತಿ ಹಾಗು ಮಾನವೀಯತೆಯ ಸಂದೇಶದ ಪರಿಣಾಮವಾಗಿ ಅವರನ್ನು ಇತಿಹಾಸದ ಮಹಾನ್ ನಾಯಕ ರಲ್ಲಿ ಒಬ್ಬರೆಂದು ಗುರುತಿಸಲಾಗಿದೆ ಎಂದರು.

ಭಾರತ ಯಾವುದೇ ಒಂದು ಧರ್ಮಕ್ಕೆ ಸೀಮಿತವಾದ ದೇಶವಲ್ಲ. ಹಿಂದೂ, ಕ್ರೈಸ್ತ ಹಾಗು ಮುಸ್ಲಿಂ ಸೇರಿ ವಿವಿಧ ಸಮುದಾಯಗಳ ಜನರು ಪರಸ್ಪರ ಸೌಹಾರ್ದತೆ, ಸಹಬಾಳ್ವೆ ಮತ್ತು ಸಹೋದರತ್ವದಿಂದ ಬದುಕುವ ವಾತಾವರಣ ನಿರ್ಮಾಣವಾದಾಗ ವಿಶ್ವಶಾಂತಿಯ ತತ್ವಕ್ಕೆ ನಿಜವಾದ ಮೌಲ್ಯ ದೊರೆಯುತ್ತದೆಂದರು.

ಜಾಥಾದಲ್ಲಿ ಪಾಲ್ಗೊಂಡಿದ್ದವರಿಗೆ ಹಿಂದೂ ಹಾಗು ಕ್ರೈಸ್ತ ಸಮುದಾಯದವರು ಪಾನೀಯ ವ್ಯವಸ್ಥೆ ಮಾಡುವ ಮೂಲಕ ಸೌಹಾರ್ದತೆ ಮೆರೆದರು. ವಿವಿಧ ಸಮುದಾಯಗಳ ಜನರು ಪರಸ್ಪರ ಸಹಕಾರ ಮತ್ತು ಸಹಬಾಳ್ವೆಯ ಸಂದೇಶ ಸಾರಿದ ಈ ಕಾರ್ಯಕ್ರಮ ಗಮನ ಸೆಳೆಯಿತು.

ನೂರುಲ್ ಇಸ್ಲಾಂ ಸಮಿತಿಯ ಪದಾಧಿಕಾರಿಗಳು ಹಾಗು ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

## ಕುಡಿದ ಮತ್ತಿನಲ್ಲಿ ಯುವಕರ ನಡುವೆ ಮಾರಾಮಾರಿ

• ಪ್ರಜೋದಯ ವರದಿ

**ಹಾಸನ:** ಕುಡಿದ ಮತ್ತಿನಲ್ಲಿ ಯುವಕರಿಬ್ಬರು ಪರಸ್ಪರ ಹಿಗ್ಗಾಮುಗ್ಗಾ ಹೊಡೆದಾಡಿಕೊಂಡ ಘಟನೆ ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ತಡರಾತ್ರಿ ನಡೆದಿದೆ.

ಇಬ್ಬರು ಅಪರಿಚಿತ ಯುವಕರು ಕುಡಿದ ಮತ್ತಿನಲ್ಲಿ ಕ್ಷುಲ್ಲಕ ವಿಚಾರಕ್ಕೆ ಪರಸ್ಪರ ಜಗಳ ಮಾಡಿಕೊಂಡಿದ್ದು, ಬಳಿಕ ಸಾರ್ವ ಜನಿಕರ ಎದುರೇ ಹೊಡೆದಾಡಿಕೊಂಡಿದ್ದಾರೆ. ಯುವಕರ ಹುಚ್ಚಾಟ ಕಂಡು ಬಸ್ ನಿಲ್ದಾಣದಲ್ಲಿದ್ದ ಪ್ರಯಾಣಿಕರು ಆತಂಕಗೊಂಡಿದ್ದಾರೆ. ಕುಡಿದ ಮತ್ತಿನಲ್ಲಿದ್ದ ಯುವಕರನ್ನು ಬಿಡಿಸಲು ಮುಂದಾದರೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸ ಬಹುದೆಂಬ ಕಾರಣಕ್ಕೆ ಬಸ್ ಚಾಲಕರು ಹಾಗೂ ನಿರ್ವಾಹಕರು ಕೂಡ ಮಧ್ಯಪ್ರವೇಶಿಸಲು ಹಿಂದೇಟು ಹಾಕಿದ್ದಾರೆ.

ಬಸ್ ನಿಲ್ದಾಣದಲ್ಲಿ ಇಂತಹ ಘಟನೆಗಳು ಪದೇಪದೇ ಮರುಕಳುಹಿಸುತ್ತಿದ್ದು, ರಾತ್ರಿ ವೇಳೆ ಪ್ರಯಾಣಿಕರ ಸುರಕ್ಷತೆ ಪ್ರಶ್ನೆಯಾಗಿದೆ. ಬಸ್ ನಿಲ್ದಾಣದಲ್ಲಿ ಪುಂಡರ ಹಾವಳಿಗೆ ಕಡಿವಾಣ ಹಾಕಲು ಪೊಲೀಸರು ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗು ರಾತ್ರಿ ವೇಳೆ ಹೆಚ್ಚಿನ ಗಸ್ತು ವ್ಯವಸ್ಥೆ ಮಾಡಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಇಬ್ಬರು ಯುವಕರು ಬಡಿದಾಡಿಕೊಳ್ಳುತ್ತಿರುವ ದೃಶ್ಯವನ್ನು ಸ್ಥಳೀಯರು ತಮ್ಮ ಮೊಬೈಲ್‌ಗಳಲ್ಲಿ ಸೆರೆಹಿಡಿದಿದ್ದು, ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

## ಟೆಸ್ಟ್-ಟ್ರಯಲ್ ಗೊತ್ತಿಲ್ಲ, ಟೈಂ ಬಾಂಡ್‌ನಲ್ಲಿ ಕೆಲ್ಸ ಮುಗಿಸಿ

» ಮೊದಲನೇ ಪುಟದಿಂದ

ನಾನೇ ಖುದ್ದು ಭೇಟಿ ನೀಡಿ ಮುಗಿಸುವ ಭರವಸೆ ನೀಡಿದರು.

**ಪರಿಹಾರ ಹಣಕ್ಕೆ ಜಗಳ**

ಸಚಿವರ ಎದುರೇ ಪರಿಹಾರ ಹಣದ ವಿಚಾರದಲ್ಲಿ ಅಣ್ಣ-ತಮ್ಮ ಜಗಳ ಮಾಡಿಕೊಂಡರು. ಕಾಮಗಾರಿಗೆ ಹೋಗಿರುವ ಜಮೀನಿಗೆ ಬರುವ ಪರಿಹಾರವನ್ನು ನನಗೂ ಕೊಡಬೇಕೆಂದು ತಮ್ಮ ಕೇಳಿದಾಗ ಜಮೀನು ಪಾಲು ನನ್ನ ಹೆಸರಿಗೆ ಬಂದಿರುವುದರಿಂದ ನಾನು ನೀಡುವುದಿಲ್ಲವೆಂದು ಅಣ್ಣ ವೆಂಕಣ್ಣಗೌಡ ಹೇಳಿದರು. ಬಳಿಕ ಸಚಿವರು, ನಿಮ್ಮ ಜಮೀನು ವಿಷಯ, ನೀವು ಸರಿ ಮಾಡಿಕೊಳ್ಳಿ ಎಂದು ಹೇಳಿ ನಂತರ ಪೊಲೀಸರನ್ನು ಕರೆಸಿ ಹೊರಗೆ ಕಳುಹಿಸಿದರು.

ಶಾಸಕ ಹೆಚ್.ಪಿ.ಸ್ವರೂಪ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮತ್ತಿತರರು ಹಾಜರಿದ್ದರು.

**ಸಚಿವರಿಂದ ಎಸ್‌ಎಲ್‌ಒಗೆ ತರಾಟೆ**

ವಿಶೇಷ ಭೂ ಸ್ವಾಧೀನಾಧಿಕಾರಿ ಮಂಜುನಾಥ್ ಅವರನ್ನು ತರಾಟೆಗೆ ತೆಗೆದುಕೊಂಡರು. ನನ್ನದು ಎರಡು-ಮೂರು ಲೈನ್ ಇಲ್ಲ, ಇರೋದು ಒಂದೇ ಲೈನ್. ಬಹಿರಂಗವಾಗಿ ನಿಮಗೆ ಹೇಳುತ್ತಿದ್ದೇನೆ, ಒಂದೇ ಲೈನ್‌ನಲ್ಲಿ ಇರಬೇಕು. ಬೇರೆ ಬೇರೆ ವಿಧದಲ್ಲಿ ವಿಷಯವನ್ನು ಹೊರಳಿಸುವುದು ನನ್ನ ಬಳಿ ನಡೆಯಲ್ಲ, ನನಗೆ ಅವು ಗೊತ್ತಿಲ್ಲ, ಕೆಲಸ ಆಗಬೇಕು, ರಾಜಕಾರಣದಲ್ಲಿ ನಾನು ಬಂದಿರೋದೇ ಹಾಗೆ ಎಂದು ಎಚ್ಚರಿಕೆ ನೀಡಿದರು. ಭಗವಂತ, ಜನರ ಆಶೀರ್ವಾದಿಂದ ಸಚಿವ ಆಗಿದ್ದೇನೆ. ಜಿಲ್ಲೆಯ ಜವಾಬ್ದಾರಿ ನನ್ನ ಕೈಗೆ ಬಂದಿದೆ. ಇಷ್ಟು ಸಣ್ಣ ಕೆಲಸವನ್ನು ಕರೆ ಮಾಡಿ ಹೇಳಿದರೆ ಆಗುವುದಿಲ್ಲವೇ ಎಂದು ಭಾವಿಸಬಹುದು. ಸಣ್ಣ ಕೆಲಸ ಮಾಡಿದರೆ ಅದೇ ದೊಡ್ಡ ಕೆಲಸವಾಗುತ್ತದೆ ಎಂದು ಅಧಿಕಾರಿಗಳಿಗೆ ಪಾಠ ಮಾಡಿದರು.

## ಅರಸೀಕೆರೆಯಲ್ಲಿ ಸಡಗರದ ಈದ್ ಮಿಲಾದ್ ಆಚರಣೆ

• ಪ್ರಜೋದಯ ವರದಿ

**ಅರಸೀಕೆರೆ:** ಪ್ರವಾದಿ ಹಜರತ್ ಮಹಮ್ಮದ್ ಪೈಗಂಬರ ಅವರ 1501ನೇ ಜನ್ಮ ದಿನದ ಸ್ಮರಣಾರ್ಥ ಆಚರಿಸುವ ಈದ್ ಮಿಲಾದ್ ಹಬ್ಬವನ್ನು ನಗರದಲ್ಲಿ ಬುಧವಾರ ಸಂಭ್ರಮದಿಂದ ಆಚರಿಸಲಾಯಿತು.

ಈದ್ ಮಿಲಾದ್ ಹಬ್ಬದ ಪ್ರಯುಕ್ತ ಹಜರತ್ ಸೈಯದ್ ಖಾದರ್ ಶಾ ವಲಿ ದರ್ಗಾ ಆವರ ಣದಲ್ಲಿ ಅಧ್ಯಕ್ಷ ಮಹಬೂಬ್ ಪಾಷಾ ಅವರ ಸಮ್ಮುಖದಲ್ಲಿ ತರಕಾರಿ ಸಗಟು ಮಾರಾಟ ಗಾರರಿಂದ ಸಾವಿರಾರು ಜನರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಅರಸೀಕೆರೆ ಸುನ್ನಿ ಮುಸ್ಲಿಂ ಜಮಾಯತ್ ಸಮಿತಿ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಸ್ಲಿಂ ಸಮು ದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ನಂತರ ಸುನ್ನಿ ಜಾಮಿಯಾ ಮಸೀದಿ ಮುಂಭಾಗದಿಂದ ಈದ್ ಮಿಲಾದ್ ಮೆರವಣಿಗೆ ಆರಂಭಗೊಂಡಿತು. ಸಾವಿರಾರು ಜನರು ಪಾಲ್ಗೊಂಡಿದ್ದ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಹಾಸನ ರಸ್ತೆ ಹಾಗು ಬಿಹೆಚ್ ರಸ್ತೆ ಮೂಲಕ ನಗರದ ವಿವಿಧ ರಸ್ತೆಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮೆರವಣಿಗೆ ಸಾಗಿತು.



**ಸಚಿವ ಕೆ.ಎಂ.ಶಿವಲಿಂಗೇಗೌಡ ಭಾಗಿ**

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ಮೆರವಣಿಗೆಯಲ್ಲಿ ಪಾಲ್ಗೊಂಡು ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಬಳಿಕ ನಾಡಿನ ಸಮಸ್ತ ಮುಸ್ಲಿಂ ಬಾಂಧವರಿಗೆ ಈದ್ ಮಿಲಾದ್ ಹಬ್ಬದ ಶುಭಾಶಯಗಳನ್ನು ಕೋರಿದರು.

ಈ ವೇಳೆ ಮಾತನಾಡಿದ ಸಚಿವರು, ಪ್ರವಾದಿ ಮಹಮ್ಮದ್ ಅವರ ಜೀವನ ಹಾಗು ಸಂದೇಶಗಳು ಶಾಂತಿ, ಸಹಬಾಳ್ವೆ, ಸಹೋದರತ್ವ ಮತ್ತು ಮಾನವೀಯತೆಯ ಮಹತ್ವ ಸಾರು ತ್ತವೆ. ಎಲ್ಲಾ ಧರ್ಮಗಳ ಜನರು ಪರಸ್ಪರ ಗೌರವ ಹಾಗು ಸೌಹಾರ್ದತೆಯಿಂದ ಬದುಕು ವುದರಿಂದ ಸಮಾಜದಲ್ಲಿ ಶಾಂತಿ ಮತ್ತು ಸಾಮರಸ್ಯ ಮತ್ತಷ್ಟು ಬಲಗೊಳ್ಳುತ್ತದೆಂಬ ಆಶಯ ವ್ಯಕ್ತಪಡಿಸಿದರು.

ಈದ್ ಮಿಲಾದ್ ಆಚರಣೆಯ ಅಂಗವಾಗಿ ಪ್ರವಾದಿ ಮಹಮ್ಮದ್ ಅವರ ಜೀವನಾ ದರ್ಶಗಳನ್ನು ಸ್ಮರಿಸುವುದರ ಜೊತೆಗೆ ಸಮಾಜದಲ್ಲಿ ಶಾಂತಿ, ಸಹೋದರತ್ವ, ಪರಸ್ಪರ ಗೌರವ ಹಾಗು ಸೌಹಾರ್ದತೆಯ ಸಂದೇಶ ಸಾರಲಾಯಿತು. ವಿವಿಧ ವಯೋಮಾನದವರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದು, ಎಲ್ಲಾ ಸಮುದಾಯಗಳ ಧಾರ್ಮಿಕ ಭಾವನೆಗಳಿಗೆ ಗೌರವ ನೀಡುವ ಮೂಲಕ ಹಬ್ಬ ಆಚರಿಸಲಾಯಿತು.

ಪ್ರವಾದಿ ಮಹಮ್ಮದ್ ಅವರ ಜೀವನದಲ್ಲಿ ಪ್ರತಿಪಾದಿಸಲಾದ ದಯೆ, ಸಹನೆ, ಮಾನವೀಯತೆ, ಸಮಾನತೆ ಮತ್ತು ಪರಸ್ಪರ ಗೌರವದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯವನ್ನು ಕಾರ್ಯಕ್ರಮದಲ್ಲಿ ಒತ್ತಿ ಹೇಳಲಾಯಿತು.

ತಹಶೀಲ್ದಾರ್ ಸಂತೋಷ್ ಕುಮಾರ್, ಡಿವೈಎಸ್ಪಿ ಗೋಪಿ, ನಗರಸಭೆ ಮಾಜಿ ಅಧ್ಯಕ್ಷ ಎಂ. ಸಮಿವುಲ್ಲಾ, ಜಿಲ್ಲಾ ವಕ್ಫ್ ಬೋರ್ಡ್ ಮಾಜಿ ಅಧ್ಯಕ್ಷ ಸೈಯದ್ ಸಿಕಂದರ್, ಸುನ್ನಿ ಮುಸ್ಲಿಂ ಜಮಾಯತ್ ಸಮಿತಿ ಉಪಾಧ್ಯಕ್ಷ ಸೈಯದ್ ದಸ್ತಗಿರ್, ಕಾರ್ಯದರ್ಶಿ ಅಬ್ದುಲ್ ಜಮೀಲ್, ಖಲಂದರ್ ಷರೀಫ್, ಖಜಾಂಚಿ ಸೈಯದ್ ಇತರರಿದ್ದರು.

## ಟೆಸ್ಟ್ ರ‍್ಯಾಂಕಿಂಗ್: ಅಗ್ರಸ್ಥಾನದಲ್ಲಿ ಮಿಚೆಲ್ ಸ್ಟಾರ್ಕ್

• ಪ್ರಜೋದಯ ವರದಿ

**ದುಬೈ:** ಭಾರತದ ವೇಗಿ ಜಸ್‌ಪ್ರೀತ್ ಬೂಮ್ರಾ ಅವರನ್ನು ಹಿಂದಿಕ್ಕಿರುವ ಆಸ್ಟ್ರೇಲಿಯಾದ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್, ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಇದೇ ಮೊದಲ ಬಾರಿಗೆ ಅಗ್ರಸ್ಥಾನಕ್ಕೇರಿದ್ದಾರೆ.

ಬಾಂಗ್ಲಾದೇಶ ವಿರುದ್ಧದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಸರಣಿಯ 2ನೇ ಪಂದ್ಯದಲ್ಲಿ 10 ವಿಕೆಟ್‌ಗಳಿಸಿದ ಸ್ಟಾರ್ಕ್ ಈ ಸಾಧನೆ ಮಾಡಿದ್ದಾರೆ. 36 ವರ್ಷದ ಎಡಗೈ ಬೌಲರ್ ಮೊದಲ ಇನಿಂಗ್ಸ್‌ನಲ್ಲಿ 12 ರನ್ ನೀಡಿ 6 ವಿಕೆಟ್ ಮತ್ತು 2ನೇ ಇನಿಂಗ್ಸ್‌ನಲ್ಲಿ 39 ರನ್ ನೀಡಿ 4 ವಿಕೆಟ್ ಉರುಳಿಸಿದ್ದರು. ಈ ಪಂದ್ಯದಲ್ಲಿ ಆಸ್ಟ್ರೇಲಿಯಾ 51 ರನ್‌ಗಳ ಗೆಲುವು ದಾಖಲಿಸಿತ್ತು. ಪಂದ್ಯದಲ್ಲಿ 10 ಪಾಯಿಂಟ್ಸ್ ಗಳಿಸಿದ ಸ್ಟಾರ್ಕ್, ಮ್ಯಾಟ್ ಹೆನ್ರಿ ಮತ್ತು ಜಸ್‌ಪ್ರೀತ್ ಬೂಮ್ರಾ ಅವರನ್ನು ಹಿಂದಿಕ್ಕಿ ಅಗ್ರಸ್ಥಾನ ಅಲಂಕರಿಸಿದ್ದಾರೆ.

ಕಳೆದ ವರ್ಷ ಟೆಸ್ಟ್ ಬೌಲರ್‌ಗಳ ರ‍್ಯಾಂಕಿಂಗ್‌ನಲ್ಲಿ 2ನೇ ಸ್ಥಾನಕ್ಕೇರಿದ್ದು, ಸ್ಟಾರ್ಕ್ ಅವರ ಈವರೆಗಿನ ಅತ್ಯುತ್ತಮ ಸಾಧನೆಯಾಗಿತ್ತು. ಇದೀಗ, ಅದನ್ನೂ ಮೀರಿ ಮೊದಲಸ್ಥಾನ ಅಲಂಕರಿಸಿದ್ದಾರೆ.



ಎರಡು ತಿಂಗಳ ಕಾಲ ಬೂಮ್ರಾ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿದ್ದರು. ಒಟ್ಟಾರೆ ಅವರು 697 ದಿನಗಳ ಕಾಲ ಅಗ್ರಸ್ಥಾನದಲ್ಲಿದ್ದರು. ಭಾರತೀಯ ಬೌಲರ್ ಒಬ್ಬರ ಅತ್ಯುತ್ತಮ ಸಾಧನೆ ಇದಾಗಿದೆ. ಇಂಗ್ಲೆಂಡ್‌ನ ವೇಗಿ ಒಲಿ ರಾಬಿನ್ಸನ್ ಸಹ ರ‍್ಯಾಂಕಿಂಗ್‌ನಲ್ಲಿ ಹೆಚ್ಚು ಸುಧಾರಣೆ ಕಂಡ ಮತ್ತೊಬ್ಬ ಆಟಗಾರನಾಗಿದ್ದು, ಪಾಕಿಸ್ತಾನ ವಿರುದ್ಧದ ಲೀಡ್ಸ್ ಟೆಸ್ಟ್ ಪಂದ್ಯದಲ್ಲಿ 8 ವಿಕೆಟ್ ಕಬಳಿಸಿದ್ದ ಅವರು, ರ‍್ಯಾಂಕಿಂಗ್‌ನಲ್ಲಿ 15ನೇ ಸ್ಥಾನದಿಂದ 11ಕ್ಕೆ ಜಿಗಿದಿದ್ದಾರೆ.

ಹೆಡಿಂಗ್ಲಿ ಟೆಸ್ಟ್ ಪಂದ್ಯದಲ್ಲಿ 8 ವಿಕೆಟ್ ಉರುಳಿಸಿದ್ದ ಮತ್ತೊಬ್ಬ ಬೌಲರ್ ಜೋಶ್ ಟಂಗ್, 17ನೇ ಸ್ಥಾನದಿಂದ 16ಕ್ಕೆ ಬಂದಿದ್ದಾರೆ. ಶ್ರೀಲಂಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ 10 ವಿಕೆಟ್ ಉರುಳಿಸಿದ ಭಾರತೀಯ ಸ್ಪಿನ್ನರ್ ಮಾನವ್ ಸುತಾರ್, 48ನೇ ಸ್ಥಾನದಿಂದ ವೃತ್ತಿ ಜೀವನದ ಈ ವರೆಗಿನ ಅತ್ಯುತ್ತಮ ಸ್ಥಾನ 28ಕ್ಕೆ ಜಿಗಿದಿದ್ದಾರೆ.

ಶ್ರೀಲಂಕಾ ಬೌಲರ್‌ಗಳಾದ ಅಸಿತಾ ಫರ್ನಾಂಡೊ ಮತ್ತು ಪ್ರಭಾತ್ ಜಯಸೂರ್ಯ ತಲಾ 5 ಸ್ಥಾನ ಮೇಲೇರಿದ್ದು, ಕ್ರಮವಾಗಿ 15 ಮತ್ತು 16ನೇ ಸ್ಥಾನ ಅಲಂಕರಿಸಿದ್ದಾರೆ.

## ರೈತರ ಸಂಕಷ್ಟಕ್ಕೆ ಕೇಂದ್ರ ಧಾವಿಸಲಿ

» ಮೊದಲನೇ ಪುಟದಿಂದ

ತಪ್ಪಿತಸ್ಥರಾಗಿದ್ದರೆ ಕ್ರಮ ಕೈಗೊಳ್ಳಲಿ. ಬಿಜೆಪಿಯವರುಪಾದಯಾತ್ರೆ ಮಾಡಲಿ ತಪ್ಪೇನಿಲ್ಲ,ಜನರು ಬುದ್ಧಿವಂತರಾಗಿದ್ದು, ಸತ್ಯಾಸತ್ಯತೆ ನಿರ್ಧರಿಸುತ್ತಾ ರೆಂದರು.

**ಕಾನೂನಾತ್ಮಕವಾಗಿಯೇ ಮೀಸಲಾತಿ**

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ವಿರುದ್ಧ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಮಾಡಿರುವ ಆರೋಪಗಳಿಗೆ ಪ್ರತಿಕ್ರಿಯಿಸಿ, ಗ್ರಾಮ ಪಂಚಾಯಿತಿ ಮೀಸಲಾತಿ ಪ್ರಕ್ರಿಯೆ ಕಾನೂನಾತ್ಮಕವಾಗಿಯೇ ನಡೆಸಲಾಗಿದೆ. ತಹಶೀಲ್ದಾರ್ ಕಳುಹಿಸಿದ ಎಲ್ಲವನ್ನೂ ಜಿಲ್ಲಾಧಿಕಾರಿ ಒಪ್ಪಿಕೊಳ್ಳಬೇಕೆಂಬ ನಿಯಮವಿಲ್ಲ. ಜಿಲ್ಲಾಧಿಕಾರಿ ತಪ್ಪು ಮಾಡಿದ್ದರೆ ದಾಖಲೆ ಸಮೇತ ಆರೋಪ ಮಾಡಲಿ, ತನಿಖೆ ನಡೆಸಲಿ. ಆದರೆ, ಏಕವಚನದಲ್ಲಿ ಅಧಿಕಾರಿಗಳ ಬಗ್ಗೆ ಮಾತನಾಡುವುದು ಸರಿಯಲ್ಲ. ಪರಿಶಿಷ್ಟ ಪಂಗಡದ ಜಿಲ್ಲಾಧಿಕಾರಿಯನ್ನು ಹೆದರಿಸಿ ರಾಜಕಾರಣ ಮಾಡಲು ಸಾಧ್ಯವಿಲ್ಲ. ಜಿಲ್ಲಾಡಳಿತವನ್ನೇ ದೋಷಪೂರಿತವಾಗಿ ನೋಡುವ ಮನೋಭಾವನೆ ಸರಿಯಲ್ಲವೆಂದು ತಿರುಗೇಟು ನೀಡಿದರು.

## 200ಕ್ಕೂ ಜಾನುವಾರುಗಳ ಆರೋಗ್ಯ ತಪಾಸಣೆ



• ಪ್ರಜೋದಯ ವರದಿ

**ಕೊಣನೂರು:** ಹೋಬಳಿಯ ಕೆ.ಅಬ್ಬೂರು ಗ್ರಾಮದಲ್ಲಿ ರೋಟರಿ ಕ್ಲಬ್ ಆಫ್ ಅರಕಲಗೂಡು ಹಾಗು ಹಾಲು ಉತ್ಪಾದಕರ ಸಂಘದ ವತಿಯಿಂದ ಪಶು ಚಿಕಿತ್ಸಾ ಶಿಬಿರ ಮತ್ತು ಔಷಧಿ ವಿತರಣೆ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಶಿಬಿರದಲ್ಲಿ 200ಕ್ಕೂ ಹೆಚ್ಚು ಜಾನುವಾರು ಗಳಿಗೆ ಪಶುವೈದ್ಯರಿಂದ ತಪಾಸಣೆ ಹಾಗು ಚಿಕಿತ್ಸೆ ನೀಡಲಾಯಿತು. ಅಗತ್ಯ ಔಷಧಿ ಮತ್ತು ಪಶುಪಾಲನೆಗೆ ಬೇಕಾದ ವಿವಿಧ ಪರಿಕರಗಳನ್ನು ರೈತರಿಗೆ ವಿತರಿಸಲಾಯಿತು.

ಈ ವೇಳೆ ರೋಟರಿ ಕ್ಲಬ್ ಅಧ್ಯಕ್ಷ ಡಾ. ಎಂ.ಮಹೇಶ್ ಅವರು ಮಾತನಾಡಿ, ಗ್ರಾಮೀಣ ರೈತರ ಆರ್ಥಿಕ ಪ್ರಗತಿಗೆ ಪಶು ಸಂಗೋಪನೆ ಪ್ರಮುಖ ಆಧಾರವಾಗಿದ್ದು, ರೈತರ ಸಮಸ್ಯೆಗಳಿಗೆ ಸ್ಪಂದಿಸುವ ಉದ್ದೇಶದಿಂದ ಶಿಬಿರ ಆಯೋಜಿಸಲಾಗಿದೆ ಎಂದರು.

ಪಶುವೈದ್ಯಾಧಿಕಾರಿ ಡಾ.ಚಿರಂಜೀವಿ ಅವರು ಹಸುಗಳ ಸಾಕಾಣಿಕೆ ಹಾಗೂ ಆರೋಗ್ಯ ಸಂರಕ್ಷಣೆ ಕುರಿತು ರೈತರಿಗೆ ಮಾಹಿತಿ ನೀಡಿದರು. ಆರೋಗ್ಯವಂತ ಹಸು, ಸ್ವಚ್ಛ ಹಸು ಹಾಗೂ ಅಧಿಕ ಹಾಲು ಉತ್ಪಾದಿಸಿದ ರೈತರಿಗೆ ಬಹು ಮಾನ ನೀಡಿ ಗೌರವಿಸಲಾಯಿತು. ರೋಟರಿ ಕಾರ್ಯದರ್ಶಿ ನಿತಿನ್, ಸದಸ್ಯರಾದ ಬಾನಗುಂದಿ ಮಂಜಣ್ಣ, ಸರಗೂರು ಮಹೇಶ್, ಅಬ್ಬೂರು ಮೋಹನ್, ಹೊಡೆನೂರು ಜಗದೀಶ್ ಸೇರಿ ಉತ್ಪಾದಕರ ಸಂಘದ ನಿರ್ದೇಶಕರು, ಪಶುವೈದ್ಯರು, ಸಿಬ್ಬಂದಿ ಭಾಗವಹಿಸಿದ್ದರು.

## ಜಿಲ್ಲಾಧಿಕಾರಿಗೆ ಉಸ್ತುವಾರಿ ಸಚಿವರು ಬುದ್ಧಿ ಹೇಳಲಿ

» ಮೊದಲನೇ ಪುಟದಿಂದ

ನಾನು ಜನತೆಯ ಪ್ರತಿನಿಧಿಯಾಗಿ ಕೆಲಸ ಮಾಡುವ ವ್ಯಕ್ತಿ. ಹೊಳೆನರಸೀಪುರ ಕ್ಷೇತ್ರದ ಜನರ ಕೂಲಿ ಮಾಡಲು ಇದ್ದೇನೆ. ನಾನು ಶಾಸಕ, ನನಗೆ ಕೊಂಬಿದೆ, ಎಂದು ಹೇಳಿಕೊಳ್ಳುವವನಲ್ಲ. ಜಿಲ್ಲಾಧಿಕಾರಿಗಳಷ್ಟು ನನಗೆ ಅನುಭವ ಇಲ್ಲ. ಆದರೆ, 30 ವರ್ಷ ಶಾಸಕನಾಗಿ ಕೆಲಸ ಮಾಡಿದ್ದೇನೆ. ಈ ಜಿಲ್ಲಾಧಿಕಾರಿ ಬಂದ ಬಳಿಕ ನಾನು ಯಾವುದಾದರೂ ಮಧ್ಯದಂಗಡಿ ಕೇಳಿದ್ದೀನಾ. ಬಡಾವಣೆ ಮಾಡಿಸಿಕೊಡಿ ಎಂದು ಕೇಳಿದ್ದೀನಾ. ಮೊದಲು ಬಡವರ ಬಗ್ಗೆ ಕರುಣೆ ತೋರಿಸಲಿ. ಸರ್ಕಾರಿ ಜಾಗವನ್ನು ಎಷ್ಟು ಮಂದಿ ಒತ್ತುವರಿ ಮಾಡಿಕೊಂಡಿದ್ದಾರೆಂಬುದನ್ನು ನೋಡಲಿ ಎಂದು ಹೇಳಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಸುಬ್ರಹ್ಮಣ್ಯ ಎಂಬ ಸಿಬ್ಬಂದಿ ಹತ್ತು ಜನ ಜಿಲ್ಲಾಧಿಕಾರಿಗಳೊಂದಿಗೆ ಕೆಲಸ ಮಾಡಿದ್ದರು. ಈಗಿನ ಜಿಲ್ಲಾಧಿಕಾರಿ ವರ್ತನೆ ತಡೆಯಲಾಗದೆ ವರ್ಗಾವಣೆ ಮಾಡಿಸಿಕೊಂಡು ಹೋಗಿದ್ದಾರೆ. ಅಧಿಕಾರಿಗಳನ್ನು ಏಕವಚನದಲ್ಲಿ ಮಾತನಾಡಿಸುವುದು, ಯಾರಿಗೂ ಗೌರವ ಕೊಡದಿರುವುದು ಸರಿಯಲ್ಲ. ಮಹಿಳಾ ಸಿಬ್ಬಂದಿಯೂ ವರ್ಗಾವಣೆ ಮಾಡಿಸಿ ಕೊಂಡು ಹೋಗಿದ್ದಾರೆಂಬ ಮಾಹಿತಿ ಇದೆ ಎಂದು ಆರೋಪಿಸಿದರು.

ತನ್ನನ್ನು ಹಿಡಿತದಲ್ಲಿಟ್ಟುಕೊಳ್ಳಲು ಸಾಧ್ಯವಾಗದ ಕಾರಣ ದ್ವೇಷಿಸುತ್ತಿದ್ದಾರೆಂಬ ಜಿಲ್ಲಾಧಿಕಾರಿ ಹೇಳಿಕೆಗೆ ಆಕ್ಷೇಪಿಸಿದ ರೇವಣ್ಣ ಅವರು, ನಾನು ಜಿಲ್ಲಾಧಿಕಾರಿಯನ್ನು ಹಿಡಿತದಲ್ಲಿಟ್ಟುಕೊಂಡು ನನ್ನ ಹೊಲ, ಮನೆ ಅಥವಾ ಬಡಾವಣೆ ಮಾಡಿಸಿಕೊಳ್ಳಬೇಕೇ. ನಾನು ಯಾವ ಕಾನೂನುಬಾಹಿರ ಕೆಲಸ ಮಾಡಿದ್ದೇನೆ. ಜಿಲ್ಲಾಧಿಕಾರಿಯನ್ನು ಹಿಡಿತದಲ್ಲಿಟ್ಟುಕೊಳ್ಳುವ ಅಗತ್ಯ ನನಗೇನಿದೆ ಎಂದು ಪ್ರಶ್ನಿಸಿದರು.

## ರಕ್ತದಾನ ಮಾಡಿ ಮಾದರಿಯಾದ ರೈತರು



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಊಪಿನಹಳ್ಳಿ ಗ್ರಾಮದಲ್ಲಿ ರೆಡ್‌ಕ್ರಾಸ್ ಘಟಕ ಹಾಗು ಪುನರ್ಜೀವ ಸ್ವಯಂ ಸೇವಾ ಸಂಸ್ಥೆ ಆಯೋಜಿಸಿದ್ದ ಮಾನವ ಆರೋಗ್ಯ ಮತ್ತು ರಕ್ತದಾನ ಶಿಬಿರದಲ್ಲಿ ಗ್ರಾಮದ 29 ರೈತರು ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡುವ ಮೂಲಕ ಮಾದರಿಯಾಗಿದ್ದಾರೆ.

ಶಿಬಿರದಲ್ಲಿ ಕಣ್ಣಿನ ತಪಾಸಣೆ, ರಕ್ತದೊತ್ತಡ ಪರೀಕ್ಷೆ, ಸಕ್ಕರೆ ಪರೀಕ್ಷೆ, ಹೃದಯ ಹಾಗು ಸಾಮಾನ್ಯ ಆರೋಗ್ಯ ತಪಾಸಣೆ ನಡೆಸಲಾಯಿತು. ಅಗತ್ಯವಿರುವವರಿಗೆ ವೈದ್ಯರಿಂದ ಸೂಕ್ತ ಆರೋಗ್ಯ ಸಲಹೆ ನೀಡಲಾಯಿತು.

ರಕ್ತದಾನದ ಮಹತ್ವ, ತುರ್ತು ಸಂದರ್ಭಗಳಲ್ಲಿ ರಕ್ತದ ಅವಶ್ಯಕತೆ ಹಾಗು ರಕ್ತದಾನದಿಂದ ಸಮಾಜಕ್ಕೆ ಆಗುವ ಪ್ರಯೋಜನಗಳ ಕುರಿತು ಅರಿವು ಮೂಡಿಸಲಾಯಿತು. 105 ಜನರು ಶಿಬಿರದಲ್ಲಿ ಭಾಗವಹಿಸಿದರು. ರಕ್ತದಾನ ಮಾಡುವ ಮೂಲಕ ರೈತರು ಮಾನವೀಯ ಸೇವೆಯ ಮಹತ್ವವನ್ನು ಸಾರಿದರು.

## 20 ಬಂಡಾಯ ಸಂಸದರಿಗೆ ಲೋಕಸಭೆ ಸಚಿವಾಲಯ ನೋಟೀಸ್

# ಅನರ್ಹತೆ ಕೋರಿ ಟಿಎಂಸಿ ಅರ್ಜಿ

• ಪ್ರಜೋದಯ ವರದಿ

**ನವದೆಹಲಿ:** ಪಕ್ಷಾಂತರ ವಿರೋಧಿ ಕಾಯ್ದೆಯಡಿ ಬಂಡಾಯ ಸಂಸದರನ್ನು ಅನರ್ಹ ಗೊಳಿಸುವಂತೆ ಕೋರಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ನಾಯಕ ಅಭಿಷೇಕ್ ಬ್ಯಾನರ್ಜಿ ಅವರು ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಟಿಎಂಸಿಯ 20 ಬಂಡಾಯ ಸಂಸದರಿಗೆ ಲೋಕಸಭಾ ಸಚಿವಾಲಯ ನೋಟಿಸ್ ಜಾರಿ ಮಾಡಿದ್ದು, ಏಳು ದಿನಗಳ ಒಳಗಾಗಿ ಉತ್ತರಿಸುವಂತೆ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

ಲೋಕಸಭಾ ಸದಸ್ಯರ (ಪಕ್ಷಾಂತರದ ಕಾರಣದಿಂದ ಅನರ್ಹತೆ) ನಿಯಮಗಳು, 1985ರ ನಿಯಮ 6ರ ಅಡಿಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಅಭಿಷೇಕ್ ಬ್ಯಾನರ್ಜಿ ಸಲ್ಲಿಸಿರುವ ಅರ್ಜಿಯ ಪ್ರತಿಯನ್ನೂ ಸಂಸದರಿಗೆ ರವಾನಿಸಿರುವ ಸಚಿವಾಲಯ, ತಮ್ಮ ಪ್ರತಿಕ್ರಿಯೆಯನ್ನು ನಿಗದಿತ ಅವಧಿಯೊಳಗೆ ಸಲ್ಲಿಸುವಂತೆ ಸೂಚಿಸಿದೆ.

ಅನರ್ಹತೆ ಅರ್ಜಿಗಳ ಕುರಿತು ತ್ವರಿತವಾಗಿ ನಿರ್ಧಾರ ಕೈಗೊಳ್ಳುವಂತೆ ಲೋಕಸಭೆ ಸ್ಪೀಕರ್‌ಗೆ ನಿರ್ದೇಶನ ನೀಡುವಂತೆ ಕೋರಿ ಅಭಿಷೇಕ್ ಬ್ಯಾನರ್ಜಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿದ ಮರುದಿನವೇ ಈ ಬೆಳವಣಿಗೆ ನಡೆದಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಹಾಗೂ ವಿ.ಮೋಹನ ಅವರನ್ನು ಒಳಗೊಂಡ ಪೀಠವು ಅರ್ಜಿಯನ್ನು ವಿಚಾರಣೆಗೆ ಸ್ವೀಕರಿಸಿತ್ತು. ವಿಚಾರಣೆ ವೇಳೆ, ಇದು ಕೇವಲ ನೋಟೀಸ್ ಜಾರಿಯ ಪ್ರಶ್ನೆಯಲ್ಲ ನಿಗದಿತ ಅವಧಿಯೊಳಗೆ ಪ್ರಕ್ರಿಯೆ ಪೂರ್ಣಗೊಳ್ಳಬೇಕೆಂದು ಪೀಠ ಅಭಿಪ್ರಾಯಪಟ್ಟಿತ್ತು.

ಈ ಹಿಂದೆ 20 ಮಂದಿ ಸಂಸದರ ವಿರುದ್ಧ ಪ್ರತ್ಯೇಕ ಅನರ್ಹತಾ ಅರ್ಜಿಗಳನ್ನು ಸಲ್ಲಿಸಿದ್ದ ಅಭಿಷೇಕ್ ಬ್ಯಾನರ್ಜಿ, ಅವುಗಳ ವಿಲೇವಾರಿಯನ್ನು ಶೀಘ್ರಗೊಳಿಸುವಂತೆ ಜುಲೈ 27ರಂದು ಜ್ಞಾಪನಪತ್ರ ಕಳುಹಿಸಿದ್ದರು. ಬಳಿಕ ಆಗಸ್ಟ್ 12ರಂದು ಸ್ಪೀಕರ್ ಭೇಟಿಯಾಗಿ ವಿಷಯವನ್ನು ಪ್ರಸ್ತಾಪಿಸಿದ್ದರು.

ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿಯಿಂದ ಬಂಡಾಯವೆದ್ದ 20 ಮಂದಿ ಲೋಕಸಭಾ ಸದಸ್ಯರು, ತ್ರಿಪುರಾ ಮೂಲದ ನ್ಯಾಷನಲಿಸ್ಟ್ ಸಿಟಿಜನ್ ಪಾರ್ಟಿ ಆಫ್ ಇಂಡಿಯಾ (ಎನ್‌ಸಿಪಿಐ) ಗೆ ಪಕ್ಷವನ್ನು ವಿಲೀನಗೊಳಿಸಿರುವುದಾಗಿ ಘೋಷಿಸಿ, ಸಂಸತ್ತಿನಲ್ಲಿ ಪ್ರತ್ಯೇಕ ಗುಂಪಾಗಿ ಮಾನ್ಯತೆ ನೀಡುವಂತೆ ಮನವಿ ಮಾಡಿದ್ದರು. ಇದೀಗ ಬಂಡಾಯ ಸಂಸದರನ್ನು ಲೋಕಸಭೆಯಲ್ಲಿ ಎನ್‌ಸಿಪಿಐ ಗುಂಪಾಗಿ ಪರಿಗಣಿಸ ಲಾಗಿದ್ದು, ಎನ್‌ಡಿಎ ಸಂಸದೀಯ ಚಟುವಟಿಕೆಗಳಲ್ಲಿಯೂ ಅವರು ಭಾಗವಹಿಸುತ್ತಿದ್ದಾರೆ.



## ಚೌಡೇನಹಳ್ಳಿಯಲ್ಲಿ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಾಸನದ ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಬಿಎಸ್ಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ತಾಲ್ಲೂಕಿನ ಚೌಡೇನಹಳ್ಳಿಯಲ್ಲಿ ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ತೆಂಗಿನ ಕಾಂಡ ಸೋರುವಿಕೆಗೆ ಬೇರುಣಿಸುವಿಕೆ ಪದ್ಧತಿ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು.

ಮಹಾವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಸ್ಮಿತಾ ಅವರು ಮಾತನಾಡಿ, ತೆಂಗಿನ ಗಿಡದಲ್ಲಿ ರಸ ಸೋರುವಿಕೆ ಮುಖ್ಯವಾಗಿ ಶಿಲೀಂದ್ರದಿಂದ ಬರುತ್ತದೆ. ಕೆಂಪು ದ್ರವ ಸೋರುವುದು ಹಾಗು ಗರಿಯ ಬಣ್ಣ ಹಳದಿಗೆ ತಿರುಗಿ ನಂತರ ಒಣಗುತ್ತದೆಂದು ತಿಳಿಸಿದರು.

ರೋಗ ಹತೋಟಿಗೆ ತರಲು ಹೆಕ್ಸಾಕೊನ್ಜೋಲ್ ಎಂಬ ಶಿಲೀಂದ್ರ ನಾಶಕದಿಂದ ಬೇರುಣಿಸುವಿಕೆಯನ್ನು ಮಾಡಬೇಕೆಂದರು.

ಐದು ಮಿಲಿ ಹೆಕ್ಸಾಕೊನ್ಜೋಲ್ 100 ಮಿ.ಲೀ. ನೀರಿನಲ್ಲಿ ಬೆರೆಸಿ ತೆಂಗಿನ ಮರದ ಕಂದು ಬಣ್ಣದ ಬೇರಿಗೆ ಉಣಿಸಬೇಕು. ಅದರಿಂದ ಬೇರಿನ ಮುಖಾಂತರ ಶಿಲೀಂದ್ರ ನಾಶಕ ಮರದ ಕಾಂಡವನ್ನು ತಲುಪುತ್ತದೆಂದು ತಿಳಿಸಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK